ಕರ್ಮವೀರ

ಸಂಪುಟ ೨೦] [ಸಂಚಿಕೆ ೫

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ
ಎಂ. ಎ.

ಸಂಸ್ಥಾಪಕ—ನಿರ್ದೇಶಕರು :
ರಂ. ರಾ. ದಿವಾಕರ
ಎಂ. ಎ. ಎಲ್‌ಎಲ್. ಬಿ.
ಘಟನಾ ಸಮಿತಿ ಸದಸ್ಯರು


ಹೂಮರ ತಳಿತಿಹುದೇತಕ್ಕೆ ?
ಕೋಗಿಲೆ ಸರಗೈಯಲಿ ಎಂದು

ಹೂಗಿಡ ಮಲರಿಹುದೇತಕ್ಕೆ ?
ತುಂಬಿಯು ಬಂಬಲಿಸಲಿ ಎಂದು

ಕಾರ್ಗೊಳು ಹಚ್ಚನೆ ಹಸುರೇತಕ್ಕೆ ?
ಗರಿಕೆಯು ರಸವನು ಹೀರುತ್ತ

ಭಾವಾವೇಶವ ಹೊಂದಲಿ ಎಂದೇ
ಕವಿಜನ ನಿಟ್ಟಿಸಿ ಬಾನತ್ತ !

— ಪು. ತಿ. ನ.



ಗ್ವಾಲೇರದ ದೇವಾಲಯ

ಇತಿಹಾಸ ಪ್ರಸಿದ್ಧ ಗ್ವಾಲೇರ ಸಂಸ್ಥಾನದ ಈ ದೇವಾಲಯ ಭಾರತದ ಅತಿ ಸುಂದರ ಶಿಲ್ಪಕೃತಿಗಳಲ್ಲೊಂದಾಗಿ ಮೆರೆಯುತಿದೆ.

ಹುಬ್ಬಳ್ಳಿ
೧೦–೫–೪೮

ಕೈ ಬರಹದ ಮೀಮಾಂಸೆ

— ನಾ. ಕಸ್ತೂರಿ

ಪುಟ ೧೫

KARMAVEER Illustrated Weekly HUBLI

ಪ್ರೇಮ ಪರೀಕ್ಷೆ

ಲೇ:—ಅಬ್ದುಲ್ ಖಾದರ್
ವಿದ್ಯಾದಾಯಿನೀ ಹೈಸ್ಕೂಲ್, ಸುರತ್ಕಲ್

●

"ಸಹೀದಾ..."

"ವಿರಹವಿಲ್ಲದಿದ್ದರೆ ಸಹವಾಸದ ಆನಂದವೆಲ್ಲಿ? ಕಳೆದ ಮೂರು ತಿಂಗಳ ನಮ್ಮ ವಿವಾಹಿತ ಜೀವನದಲ್ಲಿ ಸ್ವರ್ಗ ಸುಖವನ್ನನುಭವಿಸಿದೆವು. ಇನ್ನು ಎರಡು ಮೂರು ತಿಂಗಳ ವಿರಹ! ಆ ಮೇಲೆ ನಾವು ಪುನಃ ಒಟ್ಟುಗೂಡುವಾಗ ಇಂದಿನ ಈ ವಿರಹ ದುಃಖದ ನೆನಪು ನಮ್ಮ ಆನಂದವನ್ನು ಹೆಚ್ಚಿಸುವದಲ್ಲವೆ? ಸಹೀದಾ, ಅರಿಯದವಳಂತೆ ಹೀಗೆ ದುಃಖಿಸಬೇಡ; ನನ್ನೆದೆಯನ್ನು ಕೊರೆಯಬೇಡ."

"ಇಲ್ಲ .... ಆದರೆ, ಇನ್ನು ಮೂರು ತಿಂಗಳ ವರೆಗೆ ಅಸಹ್ಯವಿರಹತಾಪವನ್ನು......"

"ಛೆ! ಹುಚ್ಚಿ!" ಬಲಾತ್ಕಾರದ ನಸುನಗುವನ್ನು ಬೀರುತ್ತ ಇಸ್ಮಾಯಿಲ್ ಸಹೀದಾಳ ಕರಪಲ್ಲವವನ್ನು ಪ್ರೇಮದಿಂದ ಹಿಡಿದು ಕೋಮಲವಾಗಿ ಹಿಚುಕಿದನು, "ಜೀವನದಲ್ಲಿ ಸುಖವನ್ನು ಪಡೆಯುವಂತೆ ಕಷ್ಟವನ್ನು ಸಹಿಸಬೇಕು. ಇದಕ್ಕಿಂತ ನಿಷ್ಠುರವಾದ ಕಷ್ಟಗಳು ಜೀವನದಲ್ಲಿ ಎಷ್ಟೋ ಬರಲಿಕ್ಕಿರಬಹುದು. ಆಗ ಹೀಗೆ ಕಳವಳಿಸಿದರೆ ಕೆಲಸವಾಗುವುದೆ?"

"ಪ್ರಾಣಪ್ರಿಯ, ನಿಮ್ಮ ವಿರಹಕ್ಕಿಂತಲೂ ನಿಷ್ಠುರದ ಸಂಗವು ನನ್ನ ಜೀವನದಲ್ಲಿ ಬೇರೆಯಿರುವುದೆ?"

"ಆಗಲಿ, ಸಹೀದಾ. ನಾವು ಒಬ್ಬರಿಗೊಬ್ಬರು ದೂರವಿದ್ದಷ್ಟು ನಮ್ಮ ಪ್ರೇಮದ ಗಂಟು ಬಿಗಿಯುವುದು. ವಿರಹವೆಂಬ ಕುಲುಮೆಯಲ್ಲಿ ಕಾಯಿಸಿದ ಪ್ರೇಮವು ಪುಟವಿಟ್ಟ ಚಿನ್ನದಂತೆ ಶುದ್ಧವಾಗುವುದು. ನಮ್ಮ ಬಾಳಿನಲ್ಲಿ ವೈವಿಧ್ಯತೆಯಿಲ್ಲದಿದ್ದರೆ ನಮ್ಮ ಹೃದಯಗಳು ಸಂಪೂರ್ಣವಾಗಿ ಪರಸ್ಪರ ಮಿಲನವಾಗಲಾರವು. ಪ್ರಿಯೆ, ನಿನ್ನ ಪ್ರೇಮ ಪರೀಕ್ಷೆಯ ಅನುಕೂಲ್ಯ ಪ್ರಸಂಗವು ಈಗ ಬಂದಿದೆಯೆಂದು ತಿಳಿ! ಧೈರ್ಯವಾಗಿ ಮುಂದೆ ಬಂದು ಅದರಲ್ಲಿ ತೇರ್ಗಡೆ ಹೊಂದು!"

ತಗ್ಗಿಸಿದ ತಲೆಯನ್ನು ಸಹೀದಾ ಫಕ್ಕನೆ ಮೇಲಕ್ಕೆತ್ತಿದಳು. ಕಣ್ಣೀರು ಧಾರಾಕಾರವಾಗಿ ಅವಳ ವಿಶಾಲವಾದ ಕಣ್ಣುಗಳಿಂದ ಎದೆಯ ಮೇಲೆ ಸುರಿಯುತ್ತಿದ್ದಿತು. ಮುಂಗುರುಳುಗಳು ನಿಷ್ಕಳಂಕವಾದ ಹಣೆಯ ಮೇಲೆ ನರ್ತಿಸುತ್ತಿದ್ದುವು. ಅವಳ ಕೋಮಲ ತುಟಿಗಳು ಕಂಪಿಸುತ್ತಿದ್ದುವು. ಕೆನ್ನೆಗಳು ರಕ್ತವರ್ಣವನ್ನು ತಾಳಿದ್ದುವು. ಕಣ್ಣೀರು ರಭಸದಿಂದ ಒಸರುತ್ತಿರಲು ಸಹೀದಾ ಇಸ್ಮಾಯಿಲನ ಗಂಭೀರ ಮುಖವನ್ನು ಅತ್ಯಂತ ದೈನ್ಯಭಾವದಿಂದ ನೋಡಿದಳು. ಅವಳ ಮುಗ್ಧ ಮೋಹನ ವದನದಲ್ಲಿ ಪ್ರತಿಬಿಂಬಿತವಾದ ಅವಳ ಹೃದಯದ ಭಾವವನ್ನು ತಿಳಿದು ಇಸ್ಮಾಯಿಲ್ ಅವಳನ್ನು ಬಲವಾಗಿ ಆಲಿಂಗಿಸಿದನು. ಗೋಡೆಯ ಮೇಲಿನ ದೀಪವು ಮಿಣುಗುತ್ತಿದ್ದಿತು. ಹೊರಗೆ ಹರಿಯುವ ಹೊನಲು ದುಃಖನಿನಾದವನ್ನು ಮಾಡುತ್ತಿದ್ದಿತು. ಅವರ ಆಲಿಂಗನವು ಶಾಶ್ವತವೋ, ಅವರ ಪ್ರೇಮಚುಂಬನಗಳ ಸುರಿಮಳೆ ಅಕ್ಷಯವೋ ಎಂದು ಕಿಟಕಿಯಿಂದ ಇಣಕಿ ನೋಡುತ್ತಿದ್ದ ನಕ್ಷತ್ರಗಳಿಗೆ ಭಾಸವಾಗಿರಬೇಕು!

× × ×

ಮಹಮ್ಮದ್ ಸಾಹೇಬರು ಈಗ ಸೋತು ಹೋಗಿದ್ದರೂ ಹಿಂದೆ ಬಹು ಶಾರಭಾರಿ ಜನ. ಮಗ ಮುಬಾರಕ್; ಮಗಳು ಸಹೀದಾ—ಹೀಗೆ ಅವರಿಗಿರುವ ಮಕ್ಕಳು ಎರಡೇ. ಹತ್ತಿರದ ಪಟ್ಟಣದ ಹೈಸ್ಕೂಲಿನಲ್ಲಿ ಮಗಳಿಗೆ ಎಸ್. ಎಸ್. ಎಲ್. ಸಿ. ವರೆಗೆ ಕಲಿಸಿದ್ದರು. ಸಹೀದಾಳು ಪರೀಕ್ಷೆ ಕೊಟ್ಟ ವರ್ಷವೇ ಅವಳಿಗೂ, ಅವಳ ಅಣ್ಣನಿಗೂ ಮದುವೆಗಳಾದುವು.

ಚಿಕ್ಕಂದಿನಲ್ಲೇ ತಂದೆ ತಾಯಿಗಳನ್ನು ಕಳಕೊಂಡ ಇಸ್ಮಾಯಿಲನನ್ನು ಮಹಮ್ಮದ್ ಸಾಹೇಬರು ಮಾನವಸಹಜವಾದ ಕರುಣೆಯಿಂದ ಪ್ರೀತಿಕರಾಗಿ ರಕ್ಷಿಸಿದರು. ಸದ್ಗುಣಶೀಲನಾದ ಇಸ್ಮಾಯಿಲನು ಸಾಹೇಬರ ವಾತ್ಸಲ್ಯಕ್ಕೂ, ಮುಬಾರಕನ ಸ್ನೇಹಕ್ಕೂ ಸಹೀದಾಳ ಪ್ರೀತಿಗೂ ಪಾತ್ರನಾಗಿದ್ದನು ಸಾಹೇಬರು ಅವನಿಗೆ ಬಿ. ಎ. ಪಾಸು ಮಾಡಿಸಿದ್ದರು. ಮುಬಾರಕನು 'ಕಾರಣಾಂತರಗಳಿಂದ ಆಧುನಿಕ ವಿದ್ಯಾಭ್ಯಾಸವನ್ನು ಮೆಚ್ಚದಿದ್ದುದರಿಂದ ಅವನ ವಿದ್ಯಾಭ್ಯಾಸವು ಎಸ್. ಎಸ್. ಎಲ್. ಸಿ. ಸಾಗರವನ್ನು ದಾಟಲಿಲ್ಲ. ಅವನು ಹತ್ತಿರದಲ್ಲಿ ಒಂದು ಅಂಗಡಿಯನ್ನಿಟ್ಟು ವ್ಯಾಪಾರ ಮಾಡಲಾರಂಭಿಸಿದನು.

ಸಹೀದಾ ಇಸ್ಮಾಯಿಲರೊಳಗಿನ ಪ್ರೀತಿಯು ಅವರು ಜೀವನ ಪರ್ವದ ವಸಂತಋತುವಾದ ಯೌವನಕ್ಕೆ ಕಾಲಿಡಲು ಪ್ರೇಮವಾಗಿ ರೂಪಾಂತರಗೊಂಡಿತು. ಹಾಗೆ ಆಗಲು ಒಂದು ಚಿಕ್ಕ ಘಟನೆಯು ನೆರವಾಯಿತು. ಒಂದು ದಿನ ರಜೆ ಸಿಕ್ಕಿದ ಕಾರಣ ಇಸ್ಮಾಯಿಲ್ ಕಾಲೇಜಿನಿಂದ ಮನೆಗೆ ಬಂದನು. ಮನೆಯ ಮುಂದಿನ ತೋಟದಲ್ಲಿ ಸಹೀದಾ ಮಧುಮಧುರ ಕೋಕಿಲ ಧ್ವನಿಯಿಂದ ಹಾಡುತ್ತಿದ್ದಳು. ಇಸ್ಮಾಯಿಲ್ ಮರೆಯಲ್ಲಿ ನಿಂತು ಹಾಡಿನ ಇಂಪನ್ನು ಸವಿದನು. ಅವನೆದೆಯು ಪ್ರಫುಲ್ಲಿತವಾಯಿತು. ತಾನಾವುದೋ ಒಂದು ಬೇರೆ ಲೋಕದಲ್ಲಿರುವಂತೆ ಅವನಿಗೆ ಭಾಸವಾಯಿತು! ಹಾಡು ನಿಂತಿತು; ಇಸ್ಮಾಯಿಲನಿಗೆ ಎಚ್ಚರವಾಯಿತು ಮೆಲ್ಲನೆ ಕೆಮ್ಮಿದನು. ಬೇಟೆಗಾರನ ಕಾಲಸಪ್ಪಳಕ್ಕೆ ಬೆಚ್ಚಿಬೀಳುವ ಹರಿಣಿಯಂತೆ ಸಹೀದಾ ಫಕ್ಕನೆ ಆ ಕಡೆಗೆ ನೋಡಿ ಫುಲ್ ಸ್ಯೂಟ್‌ಧಾರಿ ಇಸ್ಮಾಯಿಲನನ್ನು ಕಂಡಳು. ಅವಳ ಎದೆಯು ಜಲ್ಲೆಂದಿತು; ರೋಮಾಂಚನವಾಯಿತು. ಥಟ್ಟನೆ ಅಲ್ಲಿಂದೆದ್ದು ಮನೆಯ ಕಡೆಗೋಡಿದಳು. ಇಸ್ಮಾಯಿಲನಿಗೆ ಆಗ ಅವಳು ಒಂದು ದೇವತೆಯಂತೆ ಕಂಡಿರಬೇಕು. ಚಾವಡಿಯ ಬಾಗಿಲನ್ನು ರಭಸದಿಂದ ದಾಟುತ್ತಿರುವಾಗ ಸಹೀದಾ ಹೊಸ್ತಿಲನ್ನು ಎಡವಿ ಕವಚಿ ಬಿದ್ದುಬಿಟ್ಟಳು! ಇಸ್ಮಾಯಿಲ್ ಬೆದರುಗಣ್ಣುಗಳಿಂದ ಸುತ್ತಲೂ ನೋಡಿದ—ಯಾರೂ ಇರಲಿಲ್ಲ ಉಪಾಯಗಾಣದೆ ಓಡಿಬಂದು ಸಹೀದಾಳನ್ನು ನಡುಗುವ ಕೈಗಳಿಂದ ಎತ್ತಿದನು! ಸಹಿದಾಳ ಕೆನ್ನೆಗಳು ಕೆಂಪಡರಿದುವು— ಅಥವಾ ಮುಳುಗುವ ಸೂರ್ಯನ ಹೊಂಬಣ್ಣದ ಕಿರಣಗಳ ದೆಸೆಯಿಂದ ಅವಳ ನಯವಾದ ಮುಖವು ಹಾಗೆ ಕಾಣಿಸಿತೋ ಏನೊ! ಸಹೀದಾ ಇಸ್ಮಾಯಿಲನ ಮುಖವನ್ನು ನೋಡಿದಳು. ಆದರೆ ಅವಳದು ಓರೆನೋಟವಾಗಿರಲಿಲ್ಲ. ಇಸ್ಮಾಯಿಲ್ ದೂರ ಸರಿದನು; ಸಹೀದಾ ಎದ್ದು ಒಳಗೆ ಹೋದಳು. ಅವಳು ಎಡವಿ ಬಿದ್ದ ಸುದ್ದಿಯನ್ನು ಇಬ್ಬರೂ ಮನೆಯವರಿಗೆ ತಿಳಿಸಲಿಲ್ಲ; ಅದೇಕೆ?

ಈ ಘಟನೆ ನಡೆದ ಮರುವರ್ಷವೇ ಸಹೀದಾ-ಇಸ್ಮಾಯಿಲ್ ವಿವಾಹವಾಯಿತು. ಸಾಹೇಬರ ಉದ್ದೇಶ ಹಾಗಿತ್ತು. ಮುಬಾರಕನಿಗೆ ದೂರದ ಒಂದು ಹುಡುಗಿಯೊಡನೆ ಮದುವೆಯಾಯಿತು; ಅವಳ ಹೆಸರು ಜೀನತ್. ಹೆಸರಿಗೆ ತಕ್ಕಂತೆ ಅವಳು ರೂಪ ಲಾವಣ್ಯಗಳ ರಾಶಿಯಾಗಿದ್ದಳು. ಅವಳ ನಗುಮೊಗ, ನರುನುಡಿ, ಉತ್ಸಾಹಪೂರ್ಣ ನಡೆ ಇವುಗಳು ಸಹೀದಾಗಳನ್ನು ಸಂಪೂರ್ಣ ಮೋಹಿಸಿದುವು. ಆ ಯುವತಿಯರೀರ್ವರ ಸಂಹಾಸ್ಯದಾಯ ಸಂಭಾಷಣೆಯನ್ನು ಕೇಳುವುದೂ ಒಂದು ಭಾಗ್ಯ!

ಬಿ. ಎ. ಪಾಸು ಮಾಡಿದ್ದರೂ ಇಸ್ಮಾಯಿಲನಿಗೆ ದುರದೃಷ್ಟವಶಾತ್ ಯಾವ ನೌಕರಿಯೂ ದೊರಕಲಿಲ್ಲ. ಕಲ್ಕತ್ತೆಯಲ್ಲಿ ನೌಕರಿ ಸಿಗಬಹುದೆಂದು ಅಲ್ಲಿದ್ದ ಮಿತ್ರ ದಿಲೀಪ್ ತಿಳಿಸಿದನು. ಇಸ್ಮಾಯಿಲ್ ಕಲಕತ್ತೆಗೆ ಹೊರಡಲನುವಾದನು. ತನ್ನ ಪ್ರಿಯನು ತೊಲಗುವನೆಂಬುದನ್ನು ತಿಳಿದ ಕೋಮಲೆಯಾದ ಸಹೀದಾ ಎದೆಯೊಡೆಯುವಂತೆ ಮರುಗಿದಳು. ತನ್ನ ದುಃಖವನ್ನು ಅಡಗಿಸಿಕೊಂಡು ಅವಳನ್ನು ಸಮಾಧಾನ ಪಡಿಸುವುದು ಇಸ್ಮಾಯಿಲನಿಗೆ ಬಹು ಕಷ್ಟಕ್ಕಿಟ್ಟಿತು.

ಮರುದಿನ ಮುಂಜಾನೆಯ ರೈಲಿನಲ್ಲಿ ಇಸ್ಮಾಯಿಲನ ಕಲ್ಕತ್ತಾ ಪ್ರವಾಸ! ರಾತ್ರಿ ಸಹೀದಾ ಇಸ್ಮಾಯಿಲರಿಬ್ಬರಿಗೂ ನಿದ್ರೆಯಿರಲಿಲ್ಲ. ಹಾಗೆಂದ ಮಾತ್ರಕ್ಕೆ ಅವರು ಹೆಚ್ಚು ಸಂಭಾಷಿಸುತ್ತಲೂ ಇರಲಿಲ್ಲ. ತಮ್ಮ ಮನೋಭಾವನೆಗಳ ಉದ್ವೇಗವನ್ನು ಮಾತಿನ ರೂಪಕ್ಕೆ ಪರಿವರ್ತಿಸಲು ಅವರಿಗೆ ಸಾಧ್ಯವಾಗಲಿಲ್ಲ. ಮುಂಜಾವಿನ ಕೋಳಿಯು ನಿರೀಕ್ಷಿಸಿದುದಕ್ಕಿಂತ ಬಹಳ ಬೇಗನೆ ಕೂಗಿತು.

ಇಸ್ಮಾಯಿಲ್ ಎದ್ದನು—ತಲೆದಿಂಬು ಒದ್ದೆಯಾಗಿತ್ತು. ಉರಿಜ್ವಾಲೆಗಳೆಡೆಯಲ್ಲಿ ತೊಳಲಾಡುತ್ತಿರುವ ಮೂಕ ಪ್ರಾಣಿಯಂತೆ ಸಹೀದಾ ನರಳುತ್ತಿದ್ದಳು. ಇಂತಹ ರೂಪರಾಶಿಯನ್ನು ಇಂತಹ ಪ್ರೇಮವಸ್ತುವನ್ನು ತೊರೆದು ಹೋಗಬೇಕಿದ್ದರೆ ನನ್ನ ಮನಸ್ಸು ಅದೆಷ್ಟು ಕಠೋರವಾಗಿರಬೇಕು ಎಂದು ಇಸ್ಮಾಯಿಲ್ ಭಾವಿಸಿದ. ಅವಳನ್ನು ಪ್ರೇಮದಿಂದ ಎತ್ತಿ ಗುಡುಗುಗುತ್ತಿರುವ ತನ್ನ ವಿಶಾಲವಾದ ಎದೆಯಮೇಲೆ ಅಪ್ಪಿಕೊಂಡು, ಅವಳ ಮುಖದಾವರೆಯನ್ನು ತನ್ನ ಕಂಠಸ್ಥಳದಲ್ಲಿಟ್ಟು, ಮುಂಗುರುಳುಗಳ ಮೇಲೆ ಕೈಯಾಡಿಸುತ್ತ, "ಪ್ರಿಯೆ ಸಹೀದಾ, ನೌಕರಿ ಸಿಕ್ಕರೂ, ಸಿಕ್ಕದಿದ್ದರೂ ಮೂರು ತಿಂಗಳೊಳಗಾಗಿ ಹಿಂದಿರುಗಿ ಬರುವೆನು. ಅಷ್ಟರ ವರೆಗೆ ಸಹಿಸಿಕೊಂಡಿರು. ನನ್ನ ಪ್ರೇಮದ ಕುರುಹಿಗಾಗಿ ಈ ಉಂಗುರವನ್ನು ಧರಿಸಿಕೋ. ಪ್ರಿಯೆ, ನಿನ್ನ ಉಂಗುರವನ್ನು ಇತ್ತ ಕೊಡು" ಎಂದು ಹೇಳಿ ಉಂಗುರಗಳನ್ನು ಬದಲಾಯಿಸಿ, "ಪ್ರಾಣಪ್ರಿಯೆ ಹೋಗಿ ಬರುವೆನು" ಎಂದು ಹೇಳಿದನು. ಆದರೆ ಅವನು ಕೂಡಲೆ ಹೊರಡಲಿಲ್ಲ. ಸುಮಾರು ಐದು ನಿಮಿಷಗಳ ತನಕ ಅವರ ಒಟ್ಟುಗೂಡಿದ ಸಜಲ ನೇತ್ರಗಳು ಬೇರೆಯಾಗಲಿಲ್ಲ. ಇಸ್ಮಾಯಿಲ್ ಅವಳನ್ನು ಮತ್ತೊಮ್ಮೆ ಮುದ್ದಿಟ್ಟು ಪ್ರಯತ್ನ ಪೂರ್ವಕವಾಗಿ ಹೊರಹೊರಟನು. ಸಹೀದಾಳು ಬಾಗಿಲೆಡೆಗೆ ಓಡಿಬಂದು ಹೋಗುತ್ತಿರುವ ತನ್ನ ಪ್ರಾಣವನ್ನು ಕಂಬನಿ ತುಂಬಿ ಹರಿಯುತ್ತಿರುವ ಕಣ್ಣುಗಳಿಂದ ನೋಡುತ್ತ ನಿಂತಳು. ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದುವು. ಮುಂಜಾನೆಯ ಗಾಳಿಯು ಅವಳ ದೇಹವನ್ನು ಮೃದುವಾಗಿ ತೀಡುತ್ತಿದ್ದಿತು.

ಇಸ್ಮಾಯಿಲ್ ಕಲ್ಕತ್ತೆಗೆ ಹೋಗಿ ಎರಡು ತಿಂಗಳು ಮೂರು ದಿನಗಳಾದವೆಂದು ಸಹೀದಾಳಿಗೆ ಸರಿಯಾಗಿ ಗೊತ್ತಿದ್ದಿತು. ಇನ್ನು ಇಪ್ಪತ್ತೇಳು ದಿನಗಳೊಳಗೆ ತನ್ನ ಪ್ರಿಯನನ್ನು ದರ್ಶಿಸುವೆನೆಂಬ ಆಶೆಯು ಅವಳೆದೆಯ ವಿರಹತಾಪವನ್ನು ತಣಿಸಿದ್ದಿತು. ಊಟ ಮುಗಿಸಿ ಅತ್ತಿಗೆಯೊಡನೆ ಸಂಸಕಲ್ಲಾಪ ಮಾಡುತ್ತ ಸಹೀದಾ ಚಾವಡಿಯಲ್ಲಿ ಕುಳಿತಿದ್ದಳು. ಆಗ ಮುಬಾರಕನು ಅಂಗಡಿಯಿಂದ ಅಕಸ್ಮಾತ್ತಾಗಿ ಬಂದನು. ಸಹೀದಾ ಆಶ್ಚರ್ಯಗೊಂಡರೂ, "ಏನಣ್ಣ ಹೆಂಡತಿಯ ಮುಖವನ್ನು ನೋಡದೆ ಅಲ್ಲಿ ಕುಳಿತುಕೊಳ್ಳಲಿಕ್ಕೆ ಆಗುವುದಿಲ್ಲ. ಅಲ್ಲವೆ?" ಎಂದು ನಗುನಗುತ್ತ ಕೇಳಿದಳು. ಮುಬಾರಕನ ಮುಖವನ್ನು ಕಾರ್ಮುಗಿಲು ಒಮ್ಮೆಲೆ ಕವಿಯಿತು. ದುಃಖಪ್ರವಾಹಕ್ಕೆ ಹಾಕಿದ್ದ ಕಟ್ಟು ಕಳಚಿ ಹೋಯಿತೋ ಎಂಬಂತೆ ಅವನ ಕಣ್ಣುಗಳಿಂದ ಕಣ್ಣೀರು ಚಿಮ್ಮಿತು. "ಹಾ, ತಂಗಿ, ನಿನ್ನ ದುರ್ದೈವವೆ!" ಎಂದು ಉದ್ಗಾರ ಗೈಯುತ್ತ ಅಲ್ಲೆ ಕುಸಿದು ಬಿದ್ದನು. ಗದ್ಗದ ಕಂಠದಿಂದ "ಏನಾಯಿತಣ್ಣಾ?" ಎಂದು ಕೇಳಿದಳು. ಅವಳ ಧ್ವನಿಯು ಹೋಗಿತ್ತೆಂದು ತಿಳಿಸುವದು ಬಹಳ ಕಷ್ಟ! ಮುಬಾರಕ್ ಒಂದು ಟೆಲಿಗ್ರಾಮ್ ಪತ್ರವನ್ನು ಅವಳಿಗೆ ತೋರಿಸಿದನು. ಅವಳೆದೆಯು ಧಸಕ್ಕೆಂದಿತು. ಅದನ್ನು ಹೇಗೋ ತೆಗೆದುಕೊಂಡು ಓದಿದಳು. "ಅನ್ಯಾಯವಾಗಿ ನನ್ನ ಮೇಲೆ ಕೊಲೆಯ ಅಪಾದನೆಬಿದ್ದು ಮರಣದಂಡನೆಗೊಳಗಾಗಿದ್ದೇನೆ. ನಾಳೆ ನನ್ನ ಜೀವನದ ಕೊನೆಯ ದಿನ. ನಿಮಗೆಲ್ಲರಿಗೂ ಕೊನೆಯ ವಂದನೆ. ಪ್ರಿಯ ಸಹೀದಾಳನ್ನು ಸಮಾಧಾನಪಡಿಸಿ; ಒಂದಲ್ಲ ಒಂದು ದಿನ ಅವಳೂ ಮೃತ್ಯುವಿಗೆ ತುತ್ತಾಗುವಳೆಂದು ಅರಿತು ಸಹಿಸಿಕೊಳ್ಳಲಿ. ಅವಳಿಗೆ ನನ್ನ ಅಂದಿನಪ್ರೇಮ ಚುಂಬನವೇ ಕೊನೆಯದಾಯಿತು ಇತಿ, ಇಸ್ಮಾಯಿಲ್" ಸಿಡಿಲಿನ ಬಡಿತಕ್ಕೆ ಬುಡಕಡಿದು ಬೀಳುವ ಬಾಳೆಯ ಸಸಿಯಂತೆ ಸಹೀದಾ, "ಹಾ" ಎಂದು ಕರ್ಕಶವಾದ ನೆಲದ ಮೇಲೆ ಧುಪ್ಪನೆ ಬಿದ್ದಳು! ಅವಳಿಗೆ ಎಚ್ಚರವಾದಾಗ ಅವಳ ತಂದೆಯೂ ಅತ್ತಿಗೆಯೂ ಶುಶ್ರೂಷೆ ಮಾಡುತ್ತಿದ್ದರು ಸಹೀದಾಳ ಮುಗ್ಧ ವದನವು ಈಗ ಪಿಶಾಚಿ ಹಿಡಿದವರ ಮುಖದಂತೆ ಭೀಕರವಾಗಿದ್ದಿತು. ಅವಳ ಕಣ್ಣುಗಳಿಂದ ಕಂಬನಿಯ ಬದಲು ರಕ್ತವೇ ಸುರಿಯುವದೋ ಎಂಬಂತೆ ಅವುಗಳು ಕೆಂಪಗಾಗಿದ್ದವು. ಕಣ್ಣೀರಿನ ರೂಪದಲ್ಲಿ ಹೊರಗೆಡಲ್ಪಡುವ ದುಃಖಕ್ಕಿಂತ ಎಷ್ಟೋ ಆಳವಾಗಿದ್ದಿತು. ಅವಳ ಮನೋವೇದನೆ! ಅವಳ ಹಣೆಯು ಒಡೆದು ರಕ್ತವು ಸುರಿಯುತ್ತಿತ್ತು! ಅಹಾ! ಸಹೀದಾಳ ಆಗಿನ ಸ್ಥಿತಿಯನ್ನು ನೋಡಿದರೆ ಕಠೋರವಾದ ಶಿಲೆಯಾದರೂ ಕರಗಿ ನೀರಾಗುತ್ತಿತ್ತು.

ಇತ್ತ ಇಸ್ಮಾಯಿಲ್ ಟೆಲಿಗ್ರಾಮ್ ಕಳಿಸಿ ತನ್ನ ಕೋಣೆಯಲ್ಲಿ ಸಹೀದಾಳ ಕುರಿತು ವಿಚಾರಿಸುತ್ತ ಗೊಂಬೆಯಂತೆ ಕುಳಿತಿದ್ದನು. ತಾಸುಗಳು ಕಳೆದಿರಬಹುದು. ಆಗ ಜೇಲ ಅಧಿಕಾರಿ ಬಂದು ನೋಟೀಸೊಂದನ್ನು ಕೊಟ್ಟನು. ಅದರಲ್ಲಿ ಹೀಗಿದ್ದಿತು: "ನಿಜವಾದ ಅಪರಾಧಿಯ ಪತ್ತೆಯಾದುದರಿಂದ ನಿಮ್ಮ ಮೇಲೆ ಹೊರಿಸಿದ್ದ ಮರಣ ದಂಡನೆಯು ಹಿಂದೆಗೆಯಲ್ಪಟ್ಟಿದೆ." ಇಸ್ಮಾಯಿಲ್ ಸಂತೋಷದಿಂದ ಕುಣಿದುಬಿಟ್ಟನು. ನಾನು ಕನಸು ಕಾಣುತ್ತಿರುವೆನೋ ಎಂದು ಅವನಿಗೆ ಸಂಶಯವಾಯಿತು.

* * * * *

ಇಸ್ಮಾಯಿಲ್ ಗಂಟು ಮೂಟೆಗಳನ್ನು ಕಟ್ಟಿಕೊಂಡು ಸ್ಟೇಶನಿಗೆ ಓಡಿಬಂದು ರೈಲು ಹತ್ತಿದ. ಸಹೀದಾಳು ನನ್ನನ್ನು ನೋಡಿದೊಡನೆ ಎಷ್ಟು ಆನಂದ ಬಾಷ್ಪಗಳನ್ನು ಸುರಿಸುವಳೆಂಬುದನ್ನು ಯೋಚಿಸುತ್ತಾ ದಾರಿಯುದ್ದಕ್ಕೂ ರೈಲಿನಲ್ಲಿ ಇಸ್ಮಾಯಿಲ್ ಭಾವನಾ ಸಾಮ್ರಾಜ್ಯದ ಅರಸನಾಗಿ ಕುಳಿತಿದ್ದನು.

ರೈಲು ಊರ ಸ್ಟೇಶನ್ನಿನಲ್ಲಿ ನಿಂತಿತು—ಇಸ್ಮಾಯಿಲ್ ಎದೆಯ ಬಡಿತದವೇಗವೂ ಹೆಚ್ಚಾಯಿತು. ಪೋರ್ಟರನೊಬ್ಬನಿಂದ ತನ್ನ ಗಂಟು ಮೂಟೆಗಳನ್ನು ಹೊರಿಸಿಕೊಂಡು ಮನೆಯ ದಾರಿಹಿಡಿದನು. ದೂರದಲ್ಲಿ ಮನೆಯು ಕಾಣಿಸಿತು; ಅಲ್ಲಿ ಜನರು ನೆರೆದಂತೆ ಕಂಡಿತು. ಮನೆಯ ಹಿತ್ತಿಲನ್ನು ಪ್ರವೇಶಿಸಿದನು ಇಸ್ಮಾಯಿಲ್. ಶಾಸ್ತ್ರಪಠನದ ಗಂಭೀರ ಸ್ವರವು ಸ್ತ್ರೀಯರ ಹೃದಯವಿದಾರಕ ದುಃಖಾಲಾಪದೊಡನೆ ಬೆರೆತು ಇಸ್ಮಾಯಿಲನ ಕಿವಿಗಳನ್ನು ಹೊಕ್ಕು ಹೃದಯವನ್ನು ನಡುಗಿಸಿತು! "ಹಾ!" ಎಂದು ಚೀರಿ ಅವನು ಅಲ್ಲೆ ಕುಸಿದು ಬಿದ್ದನು. ಆ ಮೇಲೆ ಅಲ್ಲಿಂದೆದ್ದು ಓಡುತ್ತ ಮನೆಯನ್ನು ಹೊಕ್ಕನು. ಆಗ, "ಇಸ್ಮಾಯಿಲ್ !!!" ಎಂಬ ಉದ್ಗಾರ ಅಲ್ಲಿ ನೆರೆದಿದ್ದವರೆಲ್ಲರ ಕಂಠದಿಂದ ಏಕ ಕಾಲದಲ್ಲಿ ಹೊರಟಿತು. ಆ ಮೇಲೆ ಪುನಃ ದುಃಖಾಲಾಪ! ಇಸ್ಮಾಯಿಲ್ ಅತ್ತಿತ್ತ ನೋಡಿದನು. ಅಯ್ಯೋ! ಭಯಂಕರ! ನೋಡಿ ಹೃದಯವನ್ನೊಡೆದು ನೀರಾಗಿಸುವ ನೋಟ! ಸಹೀದಾಳ ಇಸ್ಮಾಯಿಲ್‌ನ ಪ್ರಾಣಪ್ರಿಯೆ ಸಹೀದಾಳ, ಮೃತದೇಹವು ಶ್ವೇತ ವಸ್ತ್ರಾಚ್ಛಾದಿತವಾಗಿ ಕಾಣಿಸಿತು! ಹುಚ್ಚನಂತೆ ಚೀರುತ್ತ ಇಸ್ಮಾಯಿಲ್ ಮೃತದೇಹದ ಮುಖದ ಮೇಲಿನ ವಸ್ತ್ರವನ್ನು ಸರಿಸಿ, "ಹಾ! ನನ್ನ ಸಹೀದಾ" ಎಂದು ಅದರ ಮೇಲೆ ಬಿದ್ದನು! ಆಗ ಮನೆಯ ದಾಸಿಯು ಪತ್ರವೊಂದನ್ನು ತಂದು ಕೊಟ್ಟಳು. ಅದರಲ್ಲಿ ಹೀಗೆ ಬರೆದಿತ್ತು. ಸಹೀದಾಳ ಕೈಬರಹದಿಂದ: "ತೀರ್ಥರೂಪರ ಸನ್ನಿಧಾನಕ್ಕೆ ನನ್ನ ಪ್ರಾಣನಾಥರಿಗಿಂತ ಒಂದು ದಿನ ಮುಂಚಿತವಾಗಿ ಪ್ರಾಣತ್ಯಾಗಮಾಡಿ ನನ್ನ ಪ್ರೇಮದ ಪರೀಕ್ಷೆಯನ್ನು ಕೊಡುವ ಆಕಾಂಕ್ಷೆಯಿಂದ ನಾನು ಆತ್ಮಹತ್ಯ ಮಾಡಿಕೊಂಡಿದ್ದೇನೆ. ನನ್ನನ್ನು ಕ್ಷಮಿಸಿರಿ. ಇತಿ, ದುರ್ದೈವಿ ಸಹೀದಾ."

ಊರ ಮಸೀದಿಯ ಗಂಭೀರ ಭವ್ಯತೆಯ ಮುಂದೆ, ದೈವಿಕ ಮೌನದ ಮುಂದೆ ಸಹೀದಾಳ ಗೋರಿಯು ನೋಡಿದವರ ಮನಸ್ಸನ್ನು ಕುಗ್ಗಿಸುವಂತೆ ತಲೆಯೆತ್ತಿ ನಿಂತಿದೆ. ಅದರ ಬದಿಯಲ್ಲಿ ಹುಚ್ಚನೊಬ್ಬನು ಏನೇನೋ ಹರಟುತ್ತ ಕುಳಿತುಕೊಂಡಿದ್ದಾನೆ. ಅವನು ಹರಕು ಬಟ್ಟೆಗಳನ್ನು ಧರಿಸಿಕೊಂಡು ಯಾವಾಗಲೂ ಸಹೀದಾಳ ಗೋರಿಯ ಬದಿಯಲ್ಲಿ ಕುಳಿತು ಒಮ್ಮೊಮ್ಮೆ ಕೂಗುತ್ತಿದ್ದಾನೆ; ಒಮ್ಮೊಮ್ಮೆ ನಗುತ್ತಿದ್ದಾನೆ; ಕೆಲವೊಮ್ಮೆ ಗಂಭೀರವಾಗಿ ಆಲೋಚಿಸುತ್ತಾನೆ ಅವನೇ ಇಸ್ಮಾಯಿಲ್—ಸಹೀದಾಳ ಪ್ರಾಣಪ್ರಿಯ!

ದೇಶಾಂತರಗಳಿಂದ

ಏಶಿಯಕ್ಕೆ ಮಾರ್ಶಲ್ ಯೋಜನೆ

ಭಾರತ ಸರಕಾರವು ಏಶಿಯಕ್ಕೆ ಅನ್ವಯಿಸುವ ಮಾರ್ಶಲ್ ಯೋಜನೆಯೊಂದನ್ನು ಸೂಚಿಸುವ ಯತ್ನ ನಡೆಸಿದೆಯೆಂದೂ ಆದರೆ ಯುರೋಪಿಗೆ ಹೇಗೋ ಹಾಗೆ ಸಾಲ ಇಲ್ಲವೆ ದಾನವನ್ನು ಕೊಡುವ ವ್ಯವಸ್ಥೆಯನ್ನು ಸೂಚಿಸಲಾಗುವುದಿಲ್ಲ ಎಂದೂ ತಿಳಿಯುತ್ತದೆ.

ಆಗ್ನೇಯ ಏಶಿಯದ ವಿವಿಧ ಪ್ರದೇಶಗಳಲ್ಲಿ ನಿಶ್ಚಿತ ಯೋಜನೆಯ ಪ್ರಕಾರ ಕಚ್ಚಾ ಮಾಲುಗಳು ಮಾರಲ್ಪಡಬೇಕೆಂದೂ ತೀವ್ರ ಔದ್ಯಮೀಕರಣಕ್ಕಾಗಿ ಪಾಶ್ಚಾತ್ಯ ದೇಶಗಳಿಂದ ಉಪಯುಕ್ತ ಯಂತ್ರ ಸಾಮಗ್ರಿಗಳನ್ನು ಕ್ರಮಬದ್ಧವಾಗಿ ತರಿಸುವಂತೆ ಮಾಡಬೇಕೆಂದೂ ಹಿಂದೀ ಸರಕಾರದ ಅಪೇಕ್ಷೆ. ತಮ್ಮಲ್ಲಿ ಮಾರಲಿಕ್ಕೆ ಸಿಗಬಹುದಾದ ಯಾವ ಯಾವ ಕಚ್ಚಾ ಮಾಲುಗಳಿವೆ, ಉದ್ಯಮಗಳಿಗಾಗಿ ಯಾವ ಯಾವ ಯಂತ್ರೋಪಕರಣಗಳನ್ನು ಕೊಳ್ಳಬೇಕು ಮತ್ತು ಯಾವ ಮಾರ್ಗದಿಂದ ಅವುಗಳಿಗಾಗಿ ಹಣ ಸಲ್ಲಿಸಬೇಕು ಎಂಬೀ ವಿಷಯಗಳನ್ನು ನಿರ್ಧರಿಸಲು ಸದ್ಯದಲ್ಲೇ ಆಗ್ನೇಯ ಏಶಿಯದ ರಾಷ್ಟ್ರಗಳ ತಜ್ಞರ ಸಮ್ಮೇಳನವೊಂದನ್ನು ಕೂಡಿಸಬಹುದೆಂದು ತರ್ಕಿಸಲಾಗಿದೆ.

ಮೇಲಿನ ಕಾರ್ಯಕ್ರಮದಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನವು ಅಗ್ರಸ್ಥಾನವನ್ನು ಪಡೆದಿದೆ ಅಮೇರಿಕದಲ್ಲಿಯ ಹಿಂದಿನ ಹಿಂದೀ ರಾಯಭಾರಿಯಾದ ಅಸಫ್ ಅಲ್ಲಿಯವರು ಈ ವಿಚಾರವನ್ನು ಅಲ್ಲಿ ಎತ್ತಿದಾಗ ಅದಕ್ಕೆ ಅಲ್ಲಿಯ ಅಧಿಕಾರಿಗಳು ಅನುಕೂಲಾಭಿಪ್ರಾಯ ಕೊಟ್ಟರೆಂದು ಸುದ್ದಿ.

ಹೊಸದಿಲ್ಲಿಯಲ್ಲಿ ಅಮೇರಿಕದ ರಾಯಭಾರಿಯಾಗಿರುವ ಡಾ. ಗ್ರೇಡಿಯವರು ಕೂಡ ಇತ್ತೀಚೆಗೆ ಮೇಲೆ ಹೇಳಿದ ರೀತಿಯಲ್ಲಿ ಮಾರ್ಶಲ್ ಯೋಜನೆಯನ್ನು ಆಗ್ನೇಯ ಏಶಿಯದ ರಾಷ್ಟ್ರಗಳಿಗೆ ಅನ್ವಯಿಸುವಂತೆ ರಚಿಸಬಹುದೆಂದು ಹೇಳಿದ್ದುಂಟು.

ಲಂಡನ್ನಿನಲ್ಲಿಯೂ ಈ ಸುದ್ದಿ ಹಬ್ಬಿದೆ. ಯೋಜನೆಗೆ ಮತ್ತಾವ ಕರಾರು ಹಾಕದಿದ್ದರೂ ಮಿಲಿಟರಿ ಒಪ್ಪಂದವೊಂದನ್ನು ಏಶಿಯದ ಎಲ್ಲ ರಾಷ್ಟ್ರಗಳೂ ಮಾಡಿಕೊಳ್ಳಬೇಕಾಗಬಹುದೆಂಬೂ ಅದನ್ನು ನೆಹರು ಸರಕಾರದ ರಾಜತಂತ್ರಜ್ಞರು ಸಾಶಂಕ ದೃಷ್ಟಿಯಿಂದ ನೋಡುತ್ತಿರುವರೆಂದೂ ಹೇಳಲಾಗಿದೆ.

ಅಥೆನ್ಸಿನಲ್ಲಿ ಸೈನ್ಯದ ಕಾಯದೆ

ಗ್ರೀಸಿನ ನ್ಯಾಯ ಶಾಖೆಯ ಮಂತ್ರಿಯಾದ ಎಂ. ಕ್ರಿಸ್ಟೋಸ್ ಲಾಡಸ್ ಎಂಬವನ ಮೇಲೆ ಯಾರೋ ಕೈ ಬಾಂಬೆಸೆದದ್ದರ ಪರಿಣಾಮವಾಗಿ ಅವನು ಅದೇ ರಾತ್ರಿ ಆಸ್ಪತ್ರೆಯಲ್ಲಿ ಮರಣ ಹೊಂದಿದನು.

ಪೆಲೋಪೊನೀಸ್ ಅಥೆನ್ಸ್ ಮುಂತಾದೆಡೆಗಳಲ್ಲಿ ಆ ಕೂಡಲೆ ಸೈನ್ಯ ಕಾಯದೆಯನ್ನು ಸಾರಲಾಯಿತು

ಕೈಬಾಂಬೆಸೆದವನು ೨೨ ವರ್ಷ ವಯಸ್ಸಿನ ಒಬ್ಬ ಧಂಗಿ. ಅವನು ೩ ಕೈಬಾಂಬೆಸೆದನು. ಒಂದು ಸಿಡಿಯಲಿಲ್ಲ. ಒಂದು ಮಂತ್ರಿಯ ಹಣೆಗೆ ಮತ್ತು ಹೊಟ್ಟೆಗೆ ಬಡಿಯಿತು ಇನ್ನೊಂದು ಅವನ ರಕ್ಷಣೆಗಿದ್ದ ಪೋಲೀಸನನ್ನು ಆಹುತಿ ತೆಗೆದುಕೊಂಡಿತು. ಅವನನ್ನು ಹಿಡಿದಾಗ ಅವನಿಗೆ ಎಚ್ಚರ ತಪ್ಪಿತ್ತು. ಹಾಗೇ ಅವನನ್ನು ಆಸ್ಪತ್ರೆಗೊಯ್ಯಲಾಯಿತು.

ಈ ಧಂಗಿಯು ವೈಮಾನಿಕ ಉಡುಪಿನಲ್ಲಿದ್ದನು. ಯುದ್ಧ ಕಾಲದ ಕಮ್ಯುನಿಸ್ಟ ಸಂಘಟನೆಯ ಓಬ್ಲಾಕ್ಕೆ ಅವನು ಸೇರಿದ್ದನು.

ಸರಕಾರೀ ವಕ್ತಾರನೊಬ್ಬನು ಸರಕಾರವು ಕಮ್ಯುನಿಸ್ಟರನ್ನು ಬಗ್ಗುಬಡಿಯಲು ಎಲ್ಲ ಕ್ರಮಗಳನ್ನು ಕೈಕೊಳ್ಳಲಿದೆ ಎಂದು ಹೇಳಿದನು.

ಸರಕಾರೀ ಲೆಕ್ಕದಂತೆ ಸುಮಾರು ೧೮೦೦೦ ಗ್ರೀಸ್ ಕಮ್ಯುನಿಸ್ಟರು ಮತ್ತು ಅವರಿಗೆ ಸಹಾನುಭೂತಿ ತೋರಿಸುವವರು ಜೈಲಿನಲ್ಲಿ ಇಲ್ಲವೆ ದೇಶಭ್ರಷ್ಟರಾಗಿ ಇರುವರೆಂದು ಗೊತ್ತಾಗಿದೆ. ಇದಲ್ಲದೆ ಸುಮಾರು ೯ ರಿಂದ ೧೦ ಸಾವಿರದವರೆಗೆ ಕಮ್ಯುನಿಸ್ಟರೆಂದು ಸಂಶಯಕ್ಕೆ ಗುರಿಯಾದವರನ್ನು ಇತ್ತೀಚೆಗೆ ಸರಕಾರವು ದ್ವೀಪವೊಂದರಲ್ಲಿ ಹಿಡಿದು ಹಾಕಿದೆ.

ನ್ಯಾಯ ಮಂತ್ರಿಯು ಸಾವಿರ ಕಮ್ಯುನಿಸ್ಟರನ್ನು ಗಲ್ಲಿಗೇರಿಸಬೇಕೆನ್ನುತ್ತಿರುವನಂತೆ!

ಪಶ್ಚಿಮ ಯುರೋಪಿನ ಸುರಕ್ಷಿತತೆ

ಬ್ರಿಟನ್, ಫ್ರಾನ್ಸ್, ಬೆಲ್ಜಿಯಂ; ಹಾಲೆಂಡ್ ಮತ್ತು ಲಕ್ಸೆಂಬರ್ಗ್ ದೇಶಗಳ ಸಂರಕ್ಷಣ ಮಂತ್ರಿಗಳಿಗೆ ಅಮೇರಿಕದ ಸಂಯುಕ್ತ ಸಂಸ್ಥಾನದಿಂದ ಮಿಲಿಟರಿ ಪ್ರಶ್ನಮಾಲಿಕೆಯೊಂದು ಕಳುಹಲ್ಪಟ್ಟದಾಗಿ ತಿಳಿಯುತ್ತದೆ. ಅವರೆಲ್ಲ ಲಂಡನ್ನಿನಲ್ಲಿ ಪಾಶ್ಚಾತ್ಯ ಒಕ್ಕೂಟದ ಸುರಕ್ಷಿತತೆಯ ವಿಷಯವಾಗಿ ಮಾತುಕತೆ ನಡೆಸಿದರು.

ಮೊದಲನೆಯದಾಗಿ ಪಾಶ್ಚಾತ್ಯ ಒಕ್ಕೂಟದ ದೇಶಗಳು ಎಷ್ಟು ಮಟ್ಟಿಗೆ ಸ್ವಸಂರಕ್ಷಣೆಗಾಗಿ ಮಿಲಿಟರಿಯನ್ನು ಸಂಘಟಿಸಲು ಶಕ್ತವಾದಾವು ಎಂಬುದನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

ಎರಡನೆಯದಾಗಿ ಪೂರ್ವದಿಂದ ಒದಗಬಹುದಾದ ದಾಳಿಯಿಂದ ಆತ್ಮರಕ್ಷಣೆ ಮಾಡಿಕೊಳ್ಳಲು ಬೇಕಾದ ಶಸ್ತ್ರಸಾಮಗ್ರಿಗಳನ್ನು ಅಮೇರಿಕದಿಂದ ಎಷ್ಟು ತರಿಸಿಕೊಳ್ಳಬೇಕು ಎಂಬುದು ಚರ್ಚಿಸಲ್ಪಟ್ಟಿತು.

ಪಾಶ್ಚಾತ್ಯ ಒಕ್ಕೂಟದ ಆ ಐದು ಪ್ರಭುತ್ವಗಳು ಮೇಲೆ ಹೇಳಿದ ಉದ್ದೇಶ ಸಾಧನೆಗಾಗಿ ಸೈನಿಕ ಸ್ಥಾಯಿ ಸಮಿತಿಯೊಂದನ್ನು ನಿಯಮಿಸಿದವು. ಈ ಸಮಿತಿಯು ಮೇಲೆ ಹೇಳಿದ ಪ್ರಭುತ್ವಗಳ ಅಭಿಪ್ರಾಯವನ್ನು ಸಂಗ್ರಹಿಸಿ ಅಮೇರಿಕದ ಪ್ರಶ್ನಮಾಲಿಕೆಗೆ ಉತ್ತರವನ್ನು ತಯಾರಿಸಲಿದೆಯೆಂದು ತಿಳಿಯುತ್ತದೆ.

ಪಾಲಿಸ್ತಾನದಲ್ಲಿ ಸಿರಿಯದ ದಂಡು

ಲೆಬನಾನ್ ಮತ್ತು ಸಿರಿಯಗಳ ಸೈನ್ಯಗಳು ಪಾಲಿಸ್ತಾನವನ್ನು ಪ್ರವೇಶಿಸಿ ಆಸ್ಪರ ಗೆಲಿಲಿಯದ ೩ ಯೆಹೂದಿ ವಸತಿ ಪ್ರದೇಶಗಳನ್ನು ಸುತ್ತುಗಟ್ಟಿವೆಯೆಂದು ಟೆಲ್ ಅವೀವದ ಸುದ್ದಿಯೊಂದು ಹೊರಟಿದೆ. ಆ ಸೈನ್ಯಗಳು ಟ್ಯಾಂಕ್ ಮತ್ತು ಕವಚಯುಕ್ತ ಮೋಟಾರುಗಳನ್ನು ಬಳಸಿದರೆಂದು ಹಗನ್ನ ಸಂಸ್ಥೆ ಹೇಳಿದೆ; ಅಲ್ಲದೆ ಅವನ್ನು ಬಲವಾಗಿ ಪ್ರತಿಭಟಿಸಿ ಹಿಂದಕ್ಕಟ್ಟಲಾಯಿತೆಂದೂ ಅದರ ಹೇಳಿಕೆಯಿದೆ ಹಗನ್ನ ದಲವು ೨೫ ರಿಂದ ೩೫ ವರ್ಷ ವಯಸ್ಸಿನ ವರೆಗಿನ ಯೆಹೂದಿಗಳನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವುದನ್ನು ಪ್ರಾರಂಭಿಸಿದೆ.

ಜೆರೂಸಲೇಮಿನಲ್ಲಿ ಅರಬರ ಮೇಲೆ ಯೆಹೂದಿಗಳ ದಾಳಿ ನಡೆದಿದೆ. ಕಟಮನ್ನನ್ನು ದಾಳಿ ಮಾಡುವುದನ್ನು ಬಿಡದಿದ್ದರೆ ಸೈನ್ಯದ ಕಾಯದೆಗಳನ್ನು ಜಾರಿ ಮಾಡಲಾಗುವುದೆಂದು ಯೆಹೂದಿಗಳಿಗೆ ಬ್ರಿಟಿಶರು ಎಚ್ಚರಿಕೆ ಕೊಟ್ಟಿದ್ದಾರೆ. ತಾತ್ಕಾಲಿಕ ಶಾಂತಿಯ ಒಪ್ಪಂದದ ಸಂಧಾನ ನಡೆಸಲು ಯೆಹೂದಿಗಳೊಡನೆ ಬ್ರಿಟಿಶರು ವ್ಯವಹರಿಸಬೇಕೆಂದು ಅರಬರು ಸೂಚಿಸಿದ್ದಾಗಿ ಯೆಹೂದಿ ವರದಿಯಿದೆ.

ಟ್ರಾನ್ಸ ಜೋರ್ಡನ್ನಿನ ರಾಜಧಾನಿಯಾದ ಅಮ್ಮಾನ್ನಿನಲ್ಲಿ ಅರಬ ಮುಖಂಡರ ಗುಪ್ತ ಸಭೆ ಸೇರಿದಾಗ ಅದರಲ್ಲಿ ಅಲ್ಲಿಯ ಅರಸನಾದ ಅಬ್ದುಲ್ಲಾ ಎಂಬವನು ಪಾಲಿಸ್ತಾನೀ ಅರಬರನ್ನು ಸ್ವತಂತ್ರರನ್ನಾಗಿ ಮಾಡಿ ಯೆಹೂದಿ ಸಮಸ್ಯೆಯನ್ನು ಬಿಡಿಸುವೆನೆಂದೂ ಇಲ್ಲದಂತೆ ಮಾಡುವುದಾಗಿ ಭಾಷಣ ಮಾಡಿದನು ಅನಂತರ ರಾಜಕೀಯ ಮತ್ತು ರಾಣ್ಯನೈತಿಕ ಸಮಿತಿಗಳೇರ್ಪಟ್ಟವು.



ಟ್ರಾನ್ಸ್ ಜೋರ್ಡನ್ನಿನ ಅರಸು ಮೊದಲನೆಯ ಅಬ್ದುಲ್ಲಾ

ಅಬ್ದುಲ್ಲಾ ತನ್ನ ಸೈನ್ಯವನ್ನು ಪಾಲಿಸ್ತಾನದೊಳಗೆ ಕಾಲಿಡಗೊಡಬಾರದೆಂದು ಅಮೇರಿಕ ಅವನಿಗೆ ಎಚ್ಚರಿಕೆ ಕೊಟ್ಟಿದೆ.

ಇರಾಕಿನ ರೀಜಂಟನಾದ ಎಮಿರ ಅಬ್ದುಲ್ ಇಲ್ಲಾ ಎಂಬಾತನು ಬಾಗ್ದಾದಿಗೆ ಹೋಗಿ ಇರಾಕೀ ಸೈನ್ಯಕ್ಕೆ "ಯೆಹೂದಿ ಸಾಮ್ರಾಜ್ಯವಾದದಿಂದ ಪಾಲಿಸ್ತಾನವನ್ನು ಕಾಪಾಡಿರಿ" ಎಂದು ಆಜ್ಞೆ ಹೊರಡಿಸಿದನು.


ಇಂಗ್ಲಂಡಿನ ಶಾಸನ ಸಭೆಯ ಕೆಳಮನೆಯಲ್ಲಿ ಅಗಸ್ಟ ೧ಕ್ಕೆ ಬದಲಾಗಿ ಮೇ ೩೧ಕ್ಕೇ ಬ್ರಿಟಿಶ್ ಸೈನ್ಯವನ್ನು ಪಾಲಿಸ್ತಾನದಿಂದ ಹಿಂತೆಗೆದುಕೊಳ್ಳಬೇಕೆಂದು ಒಂಭತ್ತು ಸದಸ್ಯರು ಕೇಳಿಕೊಂಡರು.

ಸಂ. ರಾ. ಸಂಘದ ವಿಶ್ವಸ್ತ ಮಂಡಲ ಸಮಿತಿಯಲ್ಲಿ ಅಮೇರಿಕದ ಸದಸ್ಯನಾದ ಬೆಂಜಮಿನ್ ಗ್ರಿಗ್ಗನು ವಿಶ್ವಸ್ತಿಕೆಗೆ ಪಾಲಿಸ್ತಾನವನ್ನು ಒಳಪಡಿಸುವ ಮತ್ತು ಆ ಕಾರ್ಯದಲ್ಲಿ ಅಮೇರಿಕ ನೆರವಾಗುವ ಸಂಗತಿಯನ್ನು ಸದಸ್ಯರ ಮುಂದಿಟ್ಟನು. ಅರಬರ ಉಚ್ಚ ಸಮಿತಿಯ ವಕ್ತಾರನಾದ ಜಮಾಲ್ ಹುಸೇನಿ ಮತ್ತು ಯೆಹೂದಿಗಳ ಸಂಸ್ಥೆಯ ವಕ್ತಾರನಾದ ಮೋಶೆ ಶರ್ಟೊಕ್ ಈ ಇಬ್ಬರು ಪರಸ್ಪರ ವರ್ಗೀಯರ ಮೇಲೆ ಬೀಳುತ್ತಿರುವ ಆರೋಪ ಹೊರಿಸಿದ್ದಲ್ಲದೆ ಮೊದಲಿಗನು ವಿಶ್ವಸ್ತಿಕೆಯ ಸಲಹೆಗೆ ವಿರೋಧ ವ್ಯಕ್ತ ಮಾಡಿದನು.

ಇಂಡೊನೇಶಿಯದ ಮಾತುಕತೆ

ಡಚ್ಚರಿಗೂ ಇಂಡೊನೇಶಿಯದ ಪ್ರಜಾರಾಜ್ಯದ ಪ್ರತಿನಿಧಿಗಳಿಗೂ ಅನೇಕ ದಿನಗಳಿಂದ ಒಪ್ಪಂದಕ್ಕಾಗಿ ಜೋಗ್ ಜಕಾರ್ತದಲ್ಲಿ ಮಾತುಕತೆ ಸಾಗುತ್ತಿದ್ದ ಅದೀಗ ಕೊನೆಗಂಡುದಾಗಿ ತಿಳಿಯುತ್ತದೆ. ಆದರೆ ಮಾತುಕತೆಯಲ್ಲಿ ಮುಖ್ಯವಾದ ಸಮಸ್ಯೆಗಳು ಬಗೆಹರಿಯದೆ ಹಾಗೇ ಉಳಿದವೆಂದು ಹೇಳಲಾಗುತ್ತದೆ.

ಈ ಮಾತುಕತೆಯನ್ನು ಭದ್ರತಾಮಂಡಲದ ಸತ್ಕಾರ್ಯ ಸಮಿತಿಯವರು ನಡೆಸಿದ್ದು ಈಗ ಮುಗಿದರೂ ಅದನ್ನು ಮುಂದಿನವಾರ ಬಟೇವಿಯದಲ್ಲಿ ಮತ್ತೆ ಮುಂಬರಿಸಲಾಗುವುದೆಂದು ಸುದ್ದಿ.



ಲೇಕ್ ಸಕ್ಸೆಸ್ಸಿನಲ್ಲಿರುವ ಸಂಯುಕ್ತ ರಾಷ್ಟ್ರ ಸಂಘದ ಮಹಾ ಸಭಾಭವನ

ವಿಚಿತ್ರವಿಶ್ವ

ರ್ಯಾನ್ ಫರ್ನ್ ವಿಲಿಯಮ್ಸ್ ಎಂಬ ಆಂಗ್ಲನು ಕೊಲೆಗೈದಿದ್ದಕ್ಕಾಗಿ ಮರಣ ಶಾಸನ ವಿಧಿಸಲಾಯಿತು. ಅವನು ಗಲ್ಲಿನ ಮೆಟ್ಟಿಲುಗಳನ್ನು ಗಂಭೀರವಾಗಿ ಹತ್ತಿ ತನ್ನ ಕಡೆಯ ಬೇಡಿಕೆಯೆಂದು ತಾನೇ ತನ್ನ ಗಲ್ಲಿನ ಹಗ್ಗವನ್ನು ಎಳೆಯುವದಾಗಿ ಹೇಳಿದನು. ಅಪ್ಪಣೆ ಸಿಕ್ಕೊಡನೆ ಹಾಗೇ ಮಾಡಿದನು.

ಲಂಡನ್ ನಗರದ ನಡುವೆ ಒಂದು ಚೌಕದಲ್ಲಿ ಹೃದಯಾಕೃತಿಯ ಗೂಟ ಬಡಿದು ಅದನ್ನು ಹೂಳಲಾಯಿತು; ಮತ್ತು ಅಲ್ಲಿ "ಅವಿಶ್ರಾಂತ ಲಂಡನ್ನಿನ ಗಲಭೆ ಇವನ ಮೇಲೆ ಹರಿದಾಡುತ್ತದೆ" ಎಂದು ಶಿಲಾಲೇಖ ಬರೆದು ಇಡಲಾಯಿತು.

× × ×

ಜಗತ್ತಿನಲ್ಲಿ ನಿಮಿಷವೊಂದಕ್ಕೆ ೩೮, ದಿನಕ್ಕೆ ೯೬,೯೩೦ ಮತ್ತು ವರ್ಷಕ್ಕೆ ೩,೫೭,೪೦,೦೦೦ ಸಾವುಗಳು ಸಂಭವಿಸುತ್ತವೆ ಎಂದು ಲೆಕ್ಕ ಹಾಕಲಾಗಿದೆ.

× × ×

ಲೋಡಿ ಎಂಬಲ್ಲಿ ಡಬ್ಲ್ಯು. ಜೆ.ಮಿಕ್ ಎಂಬಾತನು ೨೨ ಅಂಗುಲ ಸುತ್ತಳತೆಯುಳ್ಳ ೪ ರತ್ತಲು ತೂಕದ ಲಿಂಬೆಯ ಹಣ್ಣೊಂದನ್ನು ೧೯೨೮ ರ ಜೂನಿನಲ್ಲಿ ಬೆಳೆದಿದ್ದನಂತೆ!

× × ×

ಕ್ರಿಸ್ತಶಕದ ಮೊದಲ ವರ್ಷಕ್ಕೆ ೪ ವರ್ಷ ಹಿಂದೆಯೇ ಕ್ರಿಸ್ತನು ಹುಟ್ಟಿದ್ದನೆಂದೂ ೬ನೆಯ ಶತಮಾನದ ಒಬ್ಬ ಪಂಡಿತನ ಗಣಿತದೋಷದಿಂದ ಪ್ರಮಾದ ಸಂಭವಿಸಿ ಕ್ರಿಸ್ತನು ಕ್ರಿಸ್ತಶಕ ೧ನೆಯ ವರ್ಷ ಹುಟ್ಟಿದನೆಂದು ಜನರು ತಿಳಿದುಕೊಳ್ಳುವಂತಾಯಿತು.

× × ×

ರೋಮ ನಗರ ಉರಿಯುತ್ತಿದ್ದಾಗ ನೀರೋ ದೊರೆಯು ಪಿಟೀಲು ಬಾರಿಸುತ್ತಿದ್ದನೆಂಬ ಮಾತು ಸುಳ್ಳೆಂದು ಇತಿಹಾಸ ಹೇಳುತ್ತದೆ. ಮೊದಲನೆಯದಾಗಿ ಆ ಕಾಲದಲ್ಲಿ ಪಿಟೀಲನ್ನು ಯಾರೂ ಕಂಡಿದ್ದಿಲ್ಲ. ನಗರಕ್ಕೆ ಬೆಂಕಿಬಿದ್ದಾಗ ದೊರೆಯು ಅಲ್ಲಿಂದ ೫೦ ಮೈಲಾಚೆ ತನ್ನ ಬಂಗಲೆಯಲ್ಲಿದ್ದನು ಮತ್ತು ನಗರ ಬೂದಿಯಾಗುವ ವರೆಗೆ ಆ ಕಡೆ ಹಾಯಲಿಲ್ಲ ಎಂದು ಪ್ರಸಿದ್ಧ ಇತಿಹಾಸಕಾರ ಟ್ಯಾಸಿಟಸ್ಸನು ಬರೆದಿಟ್ಟಿದ್ದಾನೆ.

\+ + +

ಪರ್ಟಿನ್ಯಾಕ್ಸ್ ದೊರೆ ಸತ್ತ ಮೇಲೆ ರೋಮ ಸಾಮ್ರಾಜ್ಯವನ್ನು ಕ್ರಿ. ಶ. ೧೯೩ ರ ಮಾರ್ಚ ೨೮ರಲ್ಲಿ ೫೦ ಲಕ್ಷ ಡಾಲರುಗಳಿಗೆ ಪ್ರಿಟೋರಿಯನ್ ಗಾರ್ಡ್ ದಳವು ಡೈಡಿಯಸ್ ಸಾಲ್ವಿಯಸ್ ಜೂಲಿಯಾನಸ್ ಮಾರ್ಕಸ್ ಎಂಬ ವ್ಯಾಪಾರಿಗೆ ಮಾರಿತು. ಇದರಿಂದ ಕೋಪಗೊಂಡ ಇಂಗ್ಲಂಡಿನ ರೋಮನ್ ಸೈನಿಕರು ಜನರಲ್ ಸೆಪ್ಟಿಮಸ್ ಸೆವಿರಸ್ಸನ ಮುಖಂಡತ್ವದಲ್ಲಿ ರೋಮಿಗೆ ನುಗ್ಗಿ ಆ ವ್ಯಾಪಾರಿಯನ್ನು ಕೊಂದು ತಮ್ಮ ಮುಖಂಡನನ್ನು ಪಟ್ಟಕ್ಕೆ ಕುಳ್ಳಿರಿಸಿದರು.

× × ×

ಇಂಗ್ಲಂಡಿನ ಕೆಂಟ ಜಿಲ್ಲೆಯಲ್ಲೊಂದು ಚರ್ಚಿದೆ. ಅದು ಜಗತ್ತಿನಲ್ಲೇ ಅತಿ ಚಿಕ್ಕದು. ಅದರಲ್ಲಿ ಮೂರೇ ಜನರು ಕುಳಿತುಕೊಳ್ಳಲವಕಾಶವಿದೆಯಂತೆ!

× × ×

೧೪೬ ರತ್ತಲು ತೂಕದ ಸಿಗ್ ಮುಂಡ್ ಕ್ಲೀನ್ ಎಂಬ ಶಾಂಡೋ ತನ್ನ ಕೈ ಉಕ್ಕಿಗೆ ಬಾಹಿ ೨೩೩೩ ರತ್ತಲು ತೂಕದ ಗುಂಡುಗಳನ್ನು ಎತ್ತಿದನು.

× × ×

ಹಂಗೇರಿಯಲ್ಲಿ ಜೆನೋಸ್ ಮತ್ತು ಸಾರಾ ಎಂಬ ಗಂಡ ಹೆಂಡಿರಿಬ್ಬರಿದ್ದರು. ಅವರು ತಮ್ಮ ೧೬೨ ಮತ್ತು ೧೬೪ ನೆಯ ವಯಸ್ಸಿನಲ್ಲಿ ಇಹಲೋಕವನ್ನು ತ್ಯಜಿಸಿದರು.

ಅವರಿಬ್ಬರೂ ಗಂಡ ಹೆಂಡಿರಾಗಿ ೧೪೬ ವರ್ಷಗಳ ಕಾಲ ಸುಖವಾಗಿ ಬಾಳಿದರು. ಅವರಿಬ್ಬರೂ ೧೮೨೫ ರಲ್ಲಿ ಒಂದೇ ದಿನ ಮಡಿದರಂತೆ! ಅವರ ೧೧೬ ವರ್ಷದ ಮಗ ಮತ್ತು ಇಬ್ಬರು ಮರಿ ಮಕ್ಕಳು ಅವರ ಮರಣಶಯ್ಯೆಯ ಬಳಿ ಇದ್ದರೆಂದು ತಿಳಿಯುತ್ತದೆ.

× × ×

ಮಲಯೇಶಿಯದಲ್ಲಿ ಒಂದು ಜಾತಿಯ ಮೀನಿದೆ. ಸಮುದ್ರದ ಇಳಿತದ ಕಾಲದಲ್ಲಿ ಅದು ನೆಲಕ್ಕೆ ಜಿಗಿದು ಹತ್ತಿರದ ಮರಗಳನ್ನೇರಿ ಕ್ರಿಮಿಗಳನ್ನು ಹಿಡಿದು ತಿನ್ನುತ್ತದೆ!

× × ×

ವಿವಿಧ ಪ್ರಪಂಚ

ನಾಗರಿಕ ಧರ್ಮದಲ್ಲಿ ಶಿಕ್ಷಣ

[illegible]

ಇಂಗ್ಲೆಂಡಿನಲ್ಲಿ ಮಕ್ಕಳಿಗೆ ರಾಜಕೀಯ ವಿದ್ಯಾಭ್ಯಾಸವನ್ನು ಕೊಡುತ್ತಾರಂತೆ.

ಮಧುಮೇಹಕ್ಕೆ ಮದ್ದು

ಅಮೇರಿಕದಲ್ಲಿ ೧೦ ಲಕ್ಷಕ್ಕಿಂತ ಹೆಚ್ಚು ಜನರು ಮಧುಮೇಹ (Diabetics) ದಿಂದ ನರಳುತ್ತಿದ್ದಾರೆ. ಈ ರೋಗಕ್ಕೆ ಸರಿಯಾದ ಮದ್ದನ್ನು ಈ ವರೆಗೆ ಯಾರೂ ಕಂಡುಹಿಡಿದಿಲ್ಲ. ಆದರೆ ಇತ್ತೀಚಿನ ಶೋಧದಿಂದ ಈ ಕೆಳಗಿನ ಸಂಗತಿಗಳು ಗೊತ್ತಾಗಿವೆ ಎಂದು ಶ್ರೀ ಜಿ. ಡಿ. ರಾಲರು ಬರೆಯುತ್ತಾರೆ.

ಕಾಲ ಕಾಲಕ್ಕೆ ಜನರನ್ನು ಕುಟುಂಬ ವೈದ್ಯರು ವೈದ್ಯಕೀಯ ಪರೀಕ್ಷೆಗೆ ಗುರಿಪಡಿಸಿದರೆ ಮಧುಮೇಹದ ಮುಂಗುರುಹುಗಳನ್ನು ಕಾಣಬಹುದು. ಆಗ ಮೊದಲೇ ಔಷಧ ಪ್ರಯೋಗ ಮಾಡಲು ಅವಕಾಶ ಸಿಕ್ಕಿ ರೋಗವನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಲಾಗುತ್ತದೆ. ಕೆಲ ರೋಗಿಗಳಿಗೆ ಕೆಲ ಅನ್ನಾಂಗಗಳನ್ನು (Vitamin) ಕೊಡುವುದರಿಂದ ಅವರ ದೇಹವು ಸಕ್ಕರೆಯ ಅಂಶವನ್ನು ನಿಯಂತ್ರಿಸುವ ಶಕ್ತಿಯನ್ನು ಪಡೆಯುವುದು ಮತ್ತು "ಇನ್ ಸುಲಿನ್" ಎಂಬ ರಸದ ವಿಶೇಷ ಮಿಶ್ರಣದ ಸಹಾಯದಿಂದ ಎಷ್ಟೋ ಜನರಿಗೆ ಆರೋಗ್ಯ ಲಾಭವಾಗುವುದು.

ಇನ್ ಸುಲಿನು ಅನೇಕ ರೋಗಿಗಳಿಗೆ ಜೀವದಾನ ಮಾಡಿರುವುದು ನಿಜ; ಆದರೆ ಅದು ಕೊಡುವ ಗುಣ ತಾತ್ಕಾಲಿಕವಾದದ್ದು. ಪ್ರೌಢರಲ್ಲಿ ಸ್ಥಾಯೀರೋಗವಾಗಿ ಮಧುಮೇಹವು ಹುಟ್ಟಿದಾಗ ಅವುಗಳ ಅನ್ನಕೋಶದ ಹತ್ತಿರ ಇರುವ Pancreas ಎಂಬ ಗ್ರಂಥಿಯು ದುರ್ಬಲವಾಗಿ ಅದು ಸುರಿಸುವ ಜೀವಕ ರಸವಾದ "ಇನ್ ಸುಲಿನ್" ಕಡಿಮೆಯಾಗಿ ಮಧುಮೇಹ ಹುಟ್ಟುತ್ತದೆ. ಆಗ ಇನ್ ಸುಲಿನ್ ಇಂಜೆಕ್ಷನ್ ಕೊಟ್ಟು ಆ ಗ್ರಂಥಿಯನ್ನು ಬಲಪಡಿಸಿದರೆ ರೋಗ



ಮೇಲಿನ ಚಿತ್ರದಲ್ಲಿ ಇಂಗ್ಲೆಂಡಿನ [illegible] [illegible]

ವಾಸಿಯಾಗುತ್ತದೆ ಯೌವನ [illegible] ಗ್ರಂಥಿಯು ತೀರ ದುರ್ಬಲವಾಗಿ ಹೋಗಿದ್ದರೆ ಇಂಜೆಕ್ಷನ್ನಿನಿಂದ ಯಾವ ಪ್ರಯೋಜನವೂ ಆಗಲಾರದು. ಅದರಿಂದ ಅತಿಯಾದ ನೀರಡಿಕೆ ಪದೇ ಪದೇ ಹೆಚ್ಚು ಹೆಚ್ಚು ಮೂತ್ರಾಶಯದ ದ್ರವ ಹೋಗುವುದು, ತೂಕ ಕಡಿಮೆ, ತಿಂದರೂ ಆಶಕ್ತಿ, ಚರ್ಮ ಒಣಗಿ ಸುರಿಯೋಳುವದು, ತಲೆನೋವು ತಲೆ ತಿರುಗುವುದು, ಬೇರೆ ಬೇರೆ ನೋವುಗಳು, ಉರಿ ಇವು ಕಳೆದೋರಿದರೆ ಕೂಡಲೆ ಅವು ಮಧುಮೇಹದ ಚಿಹ್ನಗಳೆಂದು ತಿಳಿಯ ತಕ್ಕದ್ದು.

ಭಾವಾವೇಶ, ಗ್ರಂಥಿಗಳ ಕಾರ್ಯದಲ್ಲಿ ಅಕ್ರಮ, ಬಸಿರು, ಸಿಟ್ಟು, ಸಾಹಿಲೆ ಹಿಡಿಯುವುದು, ಅವಘಡ ಮತ್ತು ಮಿದುಳು ಕಾಯುವುದು ಇವುಗಳಿಂದ ಮಧುಮೇಹ ಬಹುಬೇಗ ಉತ್ಕರ್ಷ ಹೊಂದುತ್ತದೆ. ಡಾ. ಹರ್ಬರ್ಟ್ [illegible] ಪ್ರಕಾರ ೧೦ ರಲ್ಲಿ ಒಬ್ಬನಿಗೆ ಅದಕ್ಕಿಂತ ಹೆಚ್ಚು ತೂಕದ ಮಗುವನ್ನು ಹಡೆದ ತಾಯಿಂದಿರಿಗೆ ಬಹುಬೇಗ ಮಧುಮೇಹ ಪ್ರಾಪ್ತವಾಗಬಹುದು.

ಸಕ್ಕರೆಯ ಅಂಶವನ್ನು ಶರೀರವು ಸರಿಯಾಗಿ ಬಳಸಿಕೊಳ್ಳಲಾರದುದೇ ಮಧುಮೇಹಕ್ಕೆ ಜನಕವಾಗಿ ಪರಿಣಮಿಸುತ್ತದೆ. ಸರಿಯಾಗಿ ಉಪಯುಕ್ತವಾಗದೆ ರಕ್ತ ಮತ್ತು ಮೂತ್ರಕೋಶಗಳಲ್ಲಿ ಸಕ್ಕರೆ ಹಿಂಗಿರೆ ಅದರಿಂದ ರೋಗಿಗಳು ಅವನ್ನು ಕಳೆದುಕೊಂಡು ದಿನೇ ದಿನೇ ಕ್ಷೀಣರಾಗುತ್ತ ಹೋಗುವರು. ಇನ್ ಸುಲಿನ್ ಎಂಬುದು ಸರಿಯಾಗಿ ಒದಗುತ್ತಿದ್ದರೆ ಅದು ಈ ಸಕ್ಕರೆಯ ಅಂಶವನ್ನು ಜೀರ್ಣಿಸಿಕೊಳ್ಳಲು ಶರೀರಕ್ಕೆ ಸಹಾಯ ಮಾಡುವುದು.

ಮಹಿಳಾ ಲೋಕ

★

ಸಂಗ್ರಹಕಾರ್ತಿ
"ಹಿರಿಯಕ್ಕ"

ಹಿಂದೀ ಕಾನೂನು ತಿದ್ದುಪಡಿ ಮಸೂದೆ

ಇದರ ಲಾಭ ಮಹಿಳೆಯರಿಗೆ ಸಿಗಬಹುದೆ?

ಹಿಂದೂ ಕಾಯದೆ ತಿದ್ದುಪಡಿ ಮಸೂದೆ ಬರಲಿದೆ ಬರಲಿದೆ ಎಂದು ನಾಲ್ಕಾರು ವರ್ಷಗಳಿಂದ ನಿರೀಕ್ಷಿಸಿದ್ದು ಕೊನೆಗೆ ಒಮ್ಮೆ ಬಂದಿದೆ. ಈಗ ಮಸೂದೆಯು ಪರಿಶೀಲನಾ ಸಮಿತಿಯವರ ಮುಂದೆ ಇದೆ. ಪರಿಶೀಲನಾ ಸಮಿತಿಯವರು ಅದರಲ್ಲಿ ವಿಶೇಷ ಮಹತ್ವಪೂರ್ಣ ಬದಲಾವಣೆ ಮಾಡಬಹುದೆಂದು ನಿರೀಕ್ಷಿಸಲು ಹಿರಿಯೋಲಗದಲ್ಲಿ ನಡೆದ ಚರ್ಚೆ ನೋಡಿದರೆ ಅವಕಾಶವಿಲ್ಲ. ಈಗ ಬಂದ ಮಸೂದೆಯಿಂದ ಹಿಂದುಸ್ತಾನದ ಕೋಟ್ಯಂತರ ಮಹಿಳೆಯರಿಗೆ ಲಾಭವೇ? ಹಾನಿಯೇ? ಈ ವಿಷಯವಾಗಿ ನಾಲ್ಕು ಮಾತು ಹೇಳಬಯಸುವೆ.

ಆಸ್ತಿಯ ವಿಚಾರ

ಮಸೂದೆಯಲ್ಲಿ ತಂದೆಯ ಜಂಗಮ ಆಸ್ತಿಯಲ್ಲಿ ಗಂಡುಮಕ್ಕಳಿಗೆ ದೊರೆಯುವ ಅರ್ಧದಷ್ಟು ಹೆಣ್ಣುಮಕ್ಕಳಿಗೆ ದೊರೆಯಬೇಕೆಂದೂ ತಾಯಿಯ ಸ್ತ್ರೀಧನ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ದೊರೆಯುವ ಅರ್ಧದಷ್ಟು ಗಂಡುಮಕ್ಕಳಿಗೆ ದೊರೆಯಬೇಕೆಂದೂ ಹೇಳಲಾಗಿದೆ. ಈ ಕಲಮಿನಿಂದ ಹೆಣ್ಣುಮಕ್ಕಳಿಗೆ ತಂದೆಯ ಆಸ್ತಿಯಲ್ಲಿ ತನ್ನ ಅಣ್ಣತಮ್ಮಂದಿರ ಜೊತೆಗೆ ತಾನೂ ಪಾಲುಗಾರಳಾಗುವ ಹಕ್ಕು ದೊರೆತು ಅವಳಿಗೆ ತನ್ನದೇ ಆದ ಆಸ್ತಿ ಇದೆ ಎಂದು ಯಾರ ಹಂಗಿಲ್ಲದೆ ಜೀವಿಸುವ ಒಂದು ಸಂದರ್ಭ ದೊರೆತಿದೆ. ಆದರೆ ಬಡದೇಶವಾದ ಹಿಂದುಸ್ತಾನದಲ್ಲಿ ಜಂಗಮ ಆಸ್ತಿ ಎಷ್ಟು ತಂದೆಗಳಿಗೆ ಇರುವದೋ ಇದರ ಲೆಕ್ಕ ಮಾಡಿ ನೋಡಿಲ್ಲ. ಹಳ್ಳಿಗಳಲ್ಲಿ ವಾಸಿಸುವ ನೂರರಲ್ಲಿ ೮೦ ಜನರು ನಾಸ್ತಿಕರು. ಎಳೆ ಭೂಮಿಯೊಡೆಯರಾಗಿ ಇಲ್ಲವೆ ಮಧ್ಯಮಗಾರರಾಗಿ ಇದ್ದು ಜೀವನ ಸಾಗಿಸುವದೇ ಕಠಿಣವೆನಿಸುವಂಥ ಬಡತನದಿಂದ ಕಾಲ ಕಳೆಯುತ್ತಿರುವದುಂಟು. ಇಂಥ ತಂದೆ ಸತ್ತಾಗ ಅವನು ಮಾಡಿದ ಸಾಲದ ಭಾರವನ್ನೇ ಮಗನು ಹೊರುವ ಪ್ರಸಂಗಗಳೇ ಬಹಳ! ತನ್ನ ಜೀವನ ಕಾಲದಲ್ಲಿಯೇ ಜಂಗಮ ಆಸ್ತಿಯನ್ನು ವಿನಿಯೋಗಿಸಿಬಿಡಲು ತಂದೆಗೆ ಸರ್ವತಂತ್ರ ಅಧಿಕಾರವಿರುವಾಗ ಅವನು ಹೆಣ್ಣುಮಕ್ಕಳಿಗಾಗಿ ಜಂಗಮ ಆಸ್ತಿಯನ್ನು ಉಳಿಸುವನೆಂದು ಭಾವಿಸುವದೂ ಸರಿಯೆನಿಸದು. ಮುಪ್ಪಿನ ಕಾಲದಲ್ಲಿ ತನ್ನ ಶುಶ್ರೂಷೆ ಮಾಡುವ ಮಗನ ಮೇಲೆ ಅವನ ಪ್ರೇಮ ಹೆಚ್ಚುವದೂ ಅವನಿಗೇ ತನ್ನ ಹತ್ತಿರ ಇದ್ದ ನಗದು ಹಣ ಸಲ್ಲಿಸುವದೂ ಅಸ್ವಾಭಾವಿಕವಲ್ಲ. ಹೀಗಿರುವದರಿಂದ ತಂದೆ ಸತ್ತ ನಂತರ ಮಗಳು ಹೋಗಿ ತಂದೆಯ ಜಂಗಮ ಆಸ್ತಿಯ ಲೆಕ್ಕಮಾಡಿ ಪಾಲು ಕೇಳಿದರೆ ಅದನ್ನು ಅವಳು ಸುಸೂತ್ರ ಪಡೆಯುವಳೆಂದು ಭಾವಿಸುವದರಲ್ಲಿ ಅರ್ಥವಿಲ್ಲ. ಈಗ ಬಂದ ಮಸೂದೆಯಿಂದ ಅಸ್ತಿಹೀನನಾದ ತಂದೆಯ ಹೆಣ್ಣುಮಕ್ಕಳಿಗೆ ಏನೋ ಲಾಭವಾಗಬಹುದು. ಆದರೆ ಬಡ ತಂದೆಯ ಮಗಳಾದ ನನ್ನಂಥ ಕೋಟ್ಯಂತರ ಹೆಣ್ಣುಮಕ್ಕಳಿಗೆ ಅಣ್ಣತಮ್ಮಂದಿರ ಪ್ರೇಮ ಕಳೆದುಕೊಳ್ಳುವ ಪ್ರಸಂಗವೇ ಈ ಮಸೂದೆಯಿಂದ ಬರಬಹುದೆಂಬ ಭೀತಿ ಇದೆ.

ವರದಕ್ಷಿಣೆಯ ಪಿಶಾಚಿ

ವರದಕ್ಷಿಣೆಯೆಂದು ಕೊಟ್ಟ ಹಣಕ್ಕೆ ಬಾಧ್ಯಸ್ಥಳು ಕನ್ಯೆ ಎಂದೂ ಗಂಡನು ಅದನ್ನು ತನ್ನ ಸಲುವಾಗಿ ಕಾದಿಡಬೇಕೆಂದೂ ಒಂದು ಕಲಮಿನಲ್ಲಿ ಹೇಳಲಾಗಿದೆ. ಸಂಸಾರದಲ್ಲಿ ಸತಿಪತಿಗಳು ಪ್ರೇಮದಿಂದ ಇರುವಾಗ ಇದು ನನ್ನ ಆಸ್ತಿ, ಇದು ಗಂಡನ ಆಸ್ತಿ ಎಂಬ ಭಾವನೆಗೆ ಎಡೆಯೇ ಇರುವದಿಲ್ಲ. ಗಂಡನಿಗೆ ಒಂದು ಪ್ರಸಂಗದಲ್ಲಿ ಹಣ ಬೇಕಾದಾಗ ಅವನು ಕೇಳಿದರೆ ಹೆಂಡತಿಯು ಇಲ್ಲೆಂದು ಹೇಳಲಾರಳು ಹೀಗಿರುವದರಿಂದ ಗಂಡನು ಹೆಂಡತಿಯಿಂದ ವರದಕ್ಷಿಣೆ ಹಣ ತನಗೆ ಮುಟ್ಟಿದೆ ಎಂಬ ಪಾವತಿ ಮಾಡಿಸಿ ಅದನ್ನು ತಾನೇ ಉಪಯೋಗಿಸುವ ಸಂಭವ ಹೆಚ್ಚು. ಒಂದು ವೇಳೆ ಹೆಂಡತಿಯು ಪಾವತಿ ಕೊಡಲಾರೆನೆಂದು ನಿಷ್ಠುರವಾಗಿ ಹೇಳಿದರೆ ತೀರಿತು. ಅವಳ ದಾಂಪತ್ಯ ಜೀವನವೇ ಹಾಳಾಗುವ ಪ್ರಸಂಗ ಬರಬಹುದು. ಹೀಗಿರುವದರಿಂದ ವರದಕ್ಷಿಣೆ ಎಂದು ಕೊಟ್ಟ ಹಣದ ಲಾಭ ಅವಳಿಗೆ ಸಲ್ಲುವದು ಕನಸಿನ ಮಾತೇ ಸರಿ. ಆದುದರಿಂದ ವರದಕ್ಷಿಣೆಯ ದುಷ್ಟ ರೂಢಿಯನ್ನು ಉಚ್ಚಾಟನೆ ಮಾಡುವ ಕುರಿತು ಪ್ರಾಂತಿಕ ಸರಕಾರಗಳು ಮಸೂದೆ ತರಲಿರುವದು ಸದುಯೋಚಿತ. ಕೇಂದ್ರ ಸರಕಾರದವರು ತಂದ ಮಸೂದೆಯಲ್ಲಿ ಸೂಚಿತವಾದ ರೀತಿಯಲ್ಲಿ ವರದಕ್ಷಿಣೆ ಎಂದು ಕೊಟ್ಟ ಹಣದ ಲಾಭವು ಗಂಡನಿಗಾಗದೇ ಹೆಂಡತಿಗೇ ಆಗಬೇಕಿದ್ದರೆ ಹೆಂಡತಿಯು ಕೇಳಿದಾಗ ಅದನ್ನು ಗಂಡನು ಕೊಡಬೇಕು ಈ ಬಗ್ಗೆ ಹೆಂಡತಿಯಿಂದ ಗಂಡನು ಯಾವದೇ ಕಾಗದ ಪತ್ರ ಮಾಡಿಸಿಕೊಂಡಿದ್ದರೂ ಅವು ಗ್ರಾಹ್ಯವಾಗಲಾರವು. ಎಂಬ ಕಲಮು ಜೋಡಿಸುವದು ಅಗತ್ಯವಿದೆ. ಗಂಡನೊಡನೆ ಕೂಡಿ ನಡೆಯದೆ ವಿವಾಹವಿಚ್ಛೇದನೆಗೆ ಸಿದ್ಧಳಾದ ಹೆಂಡತಿಯೇ ಗಂಡನಿಂದ ತನ್ನ ಹಣ ಕೇಳಬಹುದು. ಗಂಡನು ಬೆದರಿಸಿ, ಅಥವಾ ವಂಚಿಸಿ, ಅಥವಾ ಪ್ರೇಮ ತೋರಿಸಿ ಏನಾದರೂ ಬರೆಸಿಕೊಂಡಿದ್ದರೆ ಅದು ಬಾಧಕವಾಗದಂತೆ ಮಾಡುವದು ಅವಶ್ಯವಿದೆ. ಇಲ್ಲವಾದರೆ ಈ ಕಲಮಿನ ಲಾಭ ಭಗಿನಿಯರಿಗೆ ಸಿಗದೇ ಹೋಗುವದಲ್ಲದೆ ಕುಟುಂಬ ಜೀವನದಲ್ಲಿ ವಿಷಮತೆ ತಲೆದೋರಲು ಇದು ಕಾರಣವಾಗಬಹುದು

ಏಕಪತ್ನೀವ್ರತಸ್ಥ ಗಂಡನು

ಮಸೂದೆಯಲ್ಲಿ ಇನ್ನೊಂದು ಮಹತ್ವದ ಕಲಮು ಕೌಟುಂಬಿಕ ಜೀವನಕ್ಕೆ ಸಂಬಂಧಿಸಿದ್ದಾಗಿದೆ ಗಂಡನು ಮನಬಂದಂತೆ ಎರಡು ಮೂರು ಹೆಂಡಂದಿರನ್ನು ಮದುವೆಯಾಗುವ ಹಕ್ಕು ತನಗಿದೆ ಎಂದೂ ಆದರೆ ಹೆಂಡಂದಿರು ಮಾತ್ರ ಗಂಡನೇ ದೇವರೆಂದು ಜೀವಿಸಬೇಕೆಂದೂ ಹೇಳುವ ಅಸಮಂಜಸ ತತ್ವವನ್ನು ಅಲ್ಲಗಳೆದು ಇಬ್ಬರಿಗೂ ಕೌಟುಂಬಿಕ ಜೀವನದಲ್ಲಿ ಸಮಾನ ಹಕ್ಕುಗಳಿವೆ ಎಂದು ಪ್ರತಿಪಾದಿಸಿದ್ದು ಯೋಗ್ಯವೇ ಆಗಿದೆ. ಗಂಡಸರು ಇದ್ದ ಹೆಂಡತಿ ಬಿಟ್ಟು ಬೇರೆಯವಳೊಡನೆ ಲಗ್ನವಾಗದೆ ಅನೈತಿಕ ಸಂಬಂಧ ಬೆಳೆಸಿದರೆ ಅಂಥ ಗಂಡನನ್ನು ಬಿಟ್ಟು ಕೊಡಲು ಹೆಂಡತಿಗೆ ಅಧಿಕಾರವೂ ದೊರೆತಿದೆ ಈ ಅಧಿಕಾರದ ಉಪಯೋಗವನ್ನು ನಮ್ಮ ದೇಶದಲ್ಲಿ ಎಷ್ಟು ಭಗಿನಿಯರು ಮಾಡಿಕೊಳ್ಳಲು ಸಮರ್ಥರಾಗುವರೋ ಅದನ್ನು ಹೇಳಲು ಬರಲಾರದು. ಈಗ ಬ್ರಾಹ್ಮಣ ಮೊದಲಾದ ಕೆಲ ಜಾತಿಯವರನ್ನು ಬಿಟ್ಟು ಉಳಿದ ಜಾತಿಯವರಲ್ಲಿ ಕೂಡಿ ನಡೆಯದ ದಂಪತಿಗಳು ಸೋಡಚೀಟಿ ಕೊಟ್ಟು ಬೇರೆಯವರೊಡನೆ ಲಗ್ನಮಾಡಿಕೊಳ್ಳುವ ರೂಢಿ ಇದ್ದೇ ಇದೆ. ಹೀಗಿದ್ದರೂ ಸೋಡಚೀಟಿ ಕೊಡುವವರ ಸಂಖ್ಯೆ ತೀರ ಕಡಿಮೆ. ಹೊಸ ಕಾನೂನಿನಂತೆ ಸೋಡಚೀಟಿ ಪಡೆಯಲು ಈಗಿನಷ್ಟು ಸುಲಭವೂ ಆಗಿಸುವದಿಲ್ಲ.

ವಿವಾಹ ವಿಚ್ಛೇದನೆಯ ಕೋರ್ಟಿನಲ್ಲಿ ಹೋಗಿ ಆರೋಪ ಪ್ರತ್ಯಾರೋಪ ಎಲ್ಲಾ ನಾಟಕ ನಡೆಸಿ ವಿವಾಹ ವಿಚ್ಛೇದನ ಪಡೆಯುವದು ತೊಂದರೆ ಕೆಲಸ. ಅದಕ್ಕಾಗಿ ವಿವಾಹ ವಿಚ್ಛೇದನದ ಬಗ್ಗೆ ಈಗ ಪ್ರಚಲಿತವಿದ್ದ ರೂಢಿಯು ಹಾಗೆಯೇ ಸಾಗುವ ಅನುಕೂಲತೆ ಹೊಸ ಮಸೂದೆಯಲ್ಲಿ ಮಾಡಿ ಕೊಡುವದು ಯೋಗ್ಯ. ಅಂದರೆ ಒಲ್ಲದ ಗಂಡನನ್ನು ಬಿಟ್ಟು ಕೊಡಲು ಹೆಂಡತಿಗೆ ಸುಲಭ ಮಾರ್ಗವಿದ್ದರೆ ಗಂಡನು ಸ್ವೇಚ್ಛಾಚಾರಿಯಾಗಲು ಹಿಂದು ಮುಂದೆ ನೋಡಬೇಕಾಗಬಹುದು.

ಒಟ್ಟಿನ ಮೇಲೆ ಈ ಮಸೂದೆಯಿಂದ ಹಿಂದೂ ಕಾನೂನಿನಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗುತ್ತಿದ್ದರೂ ಅದರಿಂದ ನೂರಕ್ಕೆ ಐದರಷ್ಟು ಹೆಣ್ಣುಮಕ್ಕಳಿಗೆ ಮಾತ್ರ ಏನೋ ಲಾಭವಾಗಬಹುದೆಂದು ನನಗನಿಸುವದು. ಹಳ್ಳಿಗಳಲ್ಲಿರುವ ಅಶಿಕ್ಷಿತ ಹೆಣ್ಣುಮಕ್ಕಳಿಗೆ ಈ ಕಾನೂನಿನಿಂದ ಲಾಭವಾಗಬಹುದೇ ಎಂಬುದು ಸಂಶಯ. ಆ. ಭಾ. ಮಹಿಳಾ ಪರಿಷತ್ತಿನವರು ಈ ಮಸೂದೆಯನ್ನು ಸ್ವಾಗತಿಸುವ ಮುನ್ನ ಅದರಿಂದ ನೂರಕ್ಕೆ ೮೦ ರಷ್ಟು ಮಹಿಳೆಯರು ಹಳ್ಳಿಗಳಲ್ಲಿ ವಾಸಿಸುವವರಿಗೆ ಇದರಿಂದ ಹೆಚ್ಚಿನ ಲಾಭ ಸಲ್ಲುವಂತಾಗುವದೃಷ್ಟಿಯಿಂದ ತಕ್ಕ ತಿದ್ದುಪಡಿಗಳಾಗುವದೇ ಪ್ರಯತ್ನಿಸಬೇಕೆಂದು ನಾನು ಸೂಚಿಸುವೆ.

ಈ ಇಂಜೆಕ್ಷನ್ ಉಪಯೋಗವಾಗದಿದ್ದರೆ ಮತ್ತಷ್ಟು ಕೆಲವು ಮಧುಮೇಹ ರೋಗಿಗಳು ವೈಟಮಿನ್ ಬಿ. ಕಾಂಪ್ಲೆಕ್ಸ್ ದೊರೆವ ಪ್ರಾಣಿಗಳ ಪಿತ್ತಕೋಶಸಾರ, ಹಾಲು, ಅಕ್ಕಿಯ ತೌಡು, ಇಡಿ ಗೋಧಿ ಮತ್ತು ಮೊಳಕೆ ಗೋಧಿ ಇವುಗಳ ಬಳಕೆಯಿಂದ ಕೆಲ ಮಟ್ಟಿಗೆ ಗುಣ ಹೊಂದಬಹುದು ಹೆಚ್ಚಿನ ಶೋಧ ನಡೆಸಿಯೇ ಇದೆ ಮುಂದೆ ಎನೆಂದು ನೋಡಬೇಕು.

ಉತ್ತರ ಕನ್ನಡ ಜಿಲ್ಲೆಯ ಸಂಪತ್ತು

(ಲೇಖಕ: ಮಂಜನಾಥ ಹೆಗಡೆಹೆಗಡೇಕಟ್ಟಾ)

ನಮ್ಮೀ ಭಾರತವು ಸ್ವತಂತ್ರವಾದಂದಿನಿಂದ ಆರ್ಥಿಕ ಉನ್ನತಿಗಾಗಿ ಹಲವು ವಿಚಾರಗಳು ಉದ್ಭವಿಸಿವೆ. ಹಲವಾರು ಪ್ರಯತ್ನಗಳು ನಡೆಯಹತ್ತಿವೆ. ಭಾರತದ ಈಗಿನ ಜನತಾ ಸರಕಾರವು ಬಗೆಬಗೆಯ ಅವಶ್ಯಕ ಉದ್ಯೋಗಗಳನ್ನು ಪ್ರಾರಂಭಿಸಿ ದೇಶದ ಆರ್ಥಿಕ ಅಭಿವೃದ್ಧಿಗಾಗಿ ಯತ್ನಿಸುತ್ತಿದೆ. ಇಂಥ ಸುಪ್ರಸಂಗದಲ್ಲಿ ಉತ್ತರ ಕನ್ನಡದ ಭೂಗರ್ಭದಲ್ಲಡಗಿರುವ ಹಲವೊಂದು ಖನಿಜ ಸಂಪತ್ತಿನ ಕುರಿತು ತಿಳಿದು ಬಂದ ಸಂಗತಿಗಳನ್ನು ಸರಕಾರ ಮತ್ತು ಸಾರ್ವಜನಿಕರೆದುರಿಗಿಡುವುದೇ ಈ ಲೇಖನದ ಉದ್ದೇಶವು.

ಸಿಮೆಂಟಿನ ಕಾರಖಾನೆ

ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನಲ್ಲಿ ಶ್ರೀಕ್ಷೇತ್ರ ಯಾಣವಿದೆ. ಇದು ಭಸ್ಮಾಸುರನು ತಾನು ಪಡೆದ ವರದ ಬಲದಿಂದ ಉನ್ಮತ್ತನಾಗಿ ತಾನೇ ಸಂಹಾರಹೊಂದಿದ ಪುರಾಣ ಪ್ರಸಿದ್ಧ ಸ್ಥಳ. ಇಲ್ಲಿಯೇ ಸುಣ್ಣದ ಕಲ್ಲಿನ ಅಗಾಧವಾದ ಗಗನಚುಂಬಿತ ಪರ್ವತ ಶ್ರೇಣಿಗಳಿವೆ. ಈ ಸ್ಥಳವು ಎತ್ತರ ಭಾಗದಲ್ಲಿದೆ. ಅಲ್ಲಿಂದ ಸುಣ್ಣದ ಕಲ್ಲುಗಳನ್ನು ಕೆಳಮುಖವಾಗಿ ತಗ್ಗು ಪ್ರದೇಶಕ್ಕೆ ಸುಲಭವಾಗಿ ತರಲು ಅನುಕೂಲವಿದೆ. ತಗ್ಗು ಪ್ರದೇಶದಲ್ಲಿ ಮೈದಾನ ಸ್ಥಳವೆಂದರೆ ಸಿರ್ಸಿ ಕುಮುಟಾ ರಸ್ತೆಯ ಮೇಲಿದ್ದ 'ಹರೀಟಿ'ಯೆಂಬ ಊರೇ ಸರಿ. ಅಲ್ಲಿಂದ ಸುಣ್ಣದ ಕಲ್ಲಿನ ಪರ್ವತಾವಳಿಗಳು ಸಾಧಾರಣ ೯ ಮೈಲಾಗುವದು. ಇದರಿಂದ ಎತ್ತರ ಪ್ರದೇಶದಲ್ಲಿದ್ದ ಸುಣ್ಣದ ಕಲ್ಲುಗಳನ್ನು ಇಳುಕಲಿಗೆ ಕೆಳಮುಖವಾಗಿ ಸಾಗಿಸಲಿಕ್ಕೂ ಅನುಕೂಲವಾಗುವದು. ಎತ್ತರ ಪ್ರದೇಶಕ್ಕೆ ಸಾಗಿಸಲು ಸಾಧ್ಯವಿದ್ದರೆ ೩ ಮೈಲಿನಲ್ಲಿ 'ರಾಮನ ಕೆರೆಕಮಲು' ಎಂಬ ಮೈದಾನ ಸ್ಥಳವಿದೆ. ಅದು ಸಿರ್ಸಿ ಅಂಕೋಲಾಕ್ಕೆ ಮೊದಲಿದ್ದ ಲೋಕಲ್ ಬೋರ್ಡ ರಸ್ತೆಯ ಮೇಲಿದೆ. ಒಟ್ಟಿಗೆ ಯುಕ್ತವಾದ ಸ್ಥಳವನ್ನು ಆರಿಸಿ ಸಿಮೆಂಟಿನ ಕಾರಖಾನೆಯನ್ನು ಪ್ರಾರಂಭಿಸಿದರೆ ನೂರಾರು ವರ್ಷ ಲಕ್ಷಾಂತರ ಟನ್ನ ಸಿಮೆಂಟನ್ನು ತಯಾರಿಸಿದರೂ ತೀರದಷ್ಟು ವಿಪುಲವಾದ ಸುಣ್ಣದ ಕಲ್ಲಿನ ಪರ್ವತ ಶ್ರೇಣಿಗಳಿವೆ. ಇವುಗಳ ಪ್ರಯೋಜನವನ್ನು ಪಡೆಯಲು ಸರಕಾರವೂ ಜನತೆಯೂ ಪ್ರಯತ್ನಿಸಬೇಕು. ತಯಾರಾದ ಸಿಮೆಂಟನ್ನು ಸಮುದ್ರ ಮಾರ್ಗವಾಗಿಯೂ, ಟ್ರಕ್ಕಿನ ಮೇಲಿಂದಲೂ ಸಾಗಿಸಲು ಅನುಕೂಲವಾಗುವಹಾಗಿದ್ದ ಮೂಲಕ ನಿರ್ಯಾತದ ಪ್ರಶ್ನೆಯೂ ಸುಲಭವಾಗಿದೆ.

ಕಲ್ನಾರು

ಕುಮುಟಾ ಹೊನ್ನಾವರ ರಸ್ತೆಯ ಮೇಲೆ ಚಿತ್ರಗೇರಿ ಎಂಬ ಊರಿದೆ. ಈ ಊರಿನ ಹತ್ತರ ಗುಡ್ಡದ ಮೇಲೆ 'ರಾಮನಗುಂಡಿ' ಎಂಬ ಸ್ಥಳವಿದೆ. ಅಲ್ಲಿ ಸರ್ವೋತ್ತಮವಾದ ಕಲ್ನಾರು ದೊರಕುವದು. ಇಲ್ಲಿ ಬಹುದೊಡ್ಡ ಪ್ರಮಾಣದ ಮೇಲೆ ಕಲ್ನಾರನ್ನು ತೆಗೆಯಬಹುದು. ಇಂದಿನ ಯಾಂತ್ರಿಕ ಯುಗದಲ್ಲಿ ಕಲ್ನಾರು ಎಷ್ಟು ಉಪಯೋಗವುಳ್ಳದ್ದೆಂಬದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಇಲ್ಲಿಯೇ ಕಲ್ನಾರಿನ ಹಾಳೆಗಳನ್ನು ತಯಾರಿಸುವ ಕಾರಖಾನೆಯನ್ನು ಪ್ರಾರಂಭಿಸಿದರೆ ಯಾಂತ್ರಿಕ ಬೆಳವಣಿಗೆಗೆ ಸಹಾಯವಾಗುವದು.

ಬಂಗಾರ

ಸಿರ್ಸಿ ಕುಮುಟಾ ರಸ್ತೆಯ ಮೇಲಿದ್ದ ಸಂಪಖಂಡದ ಹತ್ತರ ಹಿಣಿ ವಿಘ್ನೇಶ್ವರವೆಂಬ ಹಳ್ಳಿಯಿದೆ. ಅಲ್ಲಿಯ ಗುಡ್ಡದಲ್ಲಿಯೂ, ಸಿರ್ಸಿ ಅಂಕೋಲಾ ತಾಲೂಕುಗಳ ಗಡಿಯಲ್ಲಿದ್ದ ಅಚವೆಯ ಹತ್ತರವಿರುವ ಮೋತೀ ಗುಡ್ಡದಲ್ಲಿಯೂ ಬಂಗಾರವಿದೆಯೆಂದು ಖ್ಯಾತಿಯಿದೆ. ಅನೇಕರು ಅಲ್ಲಿಂದ ಬಂಗಾರದ ಅದುರುಗಳನ್ನು ತಂದು ಬಂಗಾರ ತೆಗೆಯಲು ಪ್ರಯತ್ನ ನಡಿಸಿದ್ದುದು ತಿಳಿಯುತ್ತದೆ. ಆದರೆ ಅಂಥ ಪ್ರಯತ್ನಗಳು ಕ್ರಮಬದ್ಧ ಹಾಗೂ ಶಾಸ್ತ್ರೀಯವಾಗಿ ನಡೆಯದ್ದರಿಂದ ಯಶಸ್ವಿಯಾಗಲಿಲ್ಲ. ಆದರಿಂದ ಸರಕಾರದವರು ಸಂಶೋಧಕರಿಂದ ಇದನ್ನು ಪರೀಕ್ಷಿಸಿ ನಿರ್ಧರಿಸಬೇಕು.

ಬೆಳ್ಳಿ

ಸಿದ್ದಾಪೂರ ತಾಲೂಕಿನ ಹೇರೂರ, ಕೋಟೆ, ಕಂಚೀಕೈ ಕಡೆಗೆ ಬೆಳ್ಳಿ ದೊರೆಯುವಂತಿದೆ. ಅದನ್ನು ಸಂಶೋಧಕರಿಂದ ಸಂಶೋಧನೆ ಮಾಡಿಸಬೇಕು.

ಅಭ್ರಕ

ಸಿರ್ಸಿ ತಾಲೂಕಿನ ಇಸಳೂರ ಸೀಮೆಯ ಸಣ್ಣಕೆರೆ, ದಾನಂದಿ ಕಡೆಗೆ ಅಭ್ರಕದ ದೊಡ್ಡ ದೊಡ್ಡ ಅದುರುಗಳು ದೊರಕುವವು. ಅದರಂತೆ ಸಿದ್ದಾಪುರ ತಾಲೂಕಿನ ಕಾನಗೋಡದಲ್ಲಿಯೂ, ಕುಮುಟಾ ತಾಲೂಕಿನ ಮೂರೂರು, ಹಿರೇಗುತ್ತಿ ಎಂಬ ಹಳ್ಳಿಗಳಲ್ಲಿಯೂ ಅಭ್ರಕವು ದೊಡ್ಡ ಪ್ರಮಾಣದಲ್ಲಿ ದೊರಕುತ್ತವೆ. ಸಂಶೋಧಕರು ಇತ್ತ ಲಕ್ಷ್ಯ ಪೂರೈಸಲಿ.

ಕಬ್ಬಿಣ

ಉತ್ತರ ಕನ್ನಡದ ಹಲವೆಡೆಗಳಲ್ಲಿ ಕಬ್ಬಿಣದ ಕಲ್ಲುಗಳು ದೊರೆಯುವವು. ಯಾಣದಲ್ಲಿಯೂ ಸಿರ್ಸಿ ತಾಲೂಕಿನ ಮಣದೂರ ಫಿರ್ಕಾ ಮುರೇಗಾರದ ಹತ್ತರ ವಿದ್ದ ಮೆಣಸಿಗುಡ್ಡದಲ್ಲಿಯೂ ಮೆಣಸೆಯಲ್ಲಿಯೂ ಕಬ್ಬಿಣವು ಹೇರಳವಾಗಿ ದೊರೆಯುವದು. ಉಳಿದೆಡೆಗಳಲ್ಲಿಯೂ ಸಂಶೋಧನವಾಗಬೇಕು.

ಮ್ಯಾಂಗನೀಜ

ಯಲ್ಲಾಪೂರ ತಾಲೂಕಿನ ಹಲವೆಡೆಗಳಲ್ಲಿಯೂ ಕುಮುಟಾ ಕಾರವಾರ ರಸ್ತೆಯಗುಂಟ ಇರುವ ಪರ್ವತಾವಳಿಗಳಲ್ಲಿಯೂ, ಸಿರ್ಸಿ ಸಿದ್ದಾಪುರ ರಸ್ತೆಯ ಮೇಲಿರುವ ಕಾನಸೂರ ಗುಡ್ಡದಲ್ಲಿಯೂ ಮ್ಯಾಂಗನೀಜ ಸಿಗುವದು. ಇವುಗಳನ್ನು ದೊಡ್ಡ ಪ್ರಮಾಣದಲ್ಲಿ ತೆಗೆಯುವ ಪ್ರಯತ್ನ ನಡೆಯುವದು ಒಳಿತು.

ಸಾಣೀಕಲ್ಲು

ಸಿದ್ದಾಪುರ ತಾಲೂಕಿನ ಉಂಚಳ್ಳಿ, ಜೋಗ ಜಲಪಾತದ ಹತ್ತರವೂ, ಸಿರ್ಸಿ ತಾಲೂಕಿನ ಹೆಗಡೇಕಟ್ಟೆ ಹತ್ತರವೂ ಕುಮುಟಾ ತಾಲೂಕಿನ ಕಲ್ಲಬ್ಬೆಯಲ್ಲಿಯೂ ಸಾಣೀಕಲ್ಲು ಸಿಗುತ್ತಿದೆ. ಇದನ್ನು ದೊಡ್ಡ ಪ್ರಮಾಣದ ಮೇಲೆ ತೆಗೆಯುವ ಪ್ರಯತ್ನ ಮಾಡಿದಲ್ಲಿ ಹೆಚ್ಚು ಲಾಭವಾಗುವದು.

ನೀಲದ ಹರಳು

ಸಿದ್ದಾಪುರ ತಾಲೂಕಿನ ನಿಲಕುಂದವೆಂಬಲ್ಲಿ ಹಿಂದಕ್ಕೆ ನೀಲದ ಹರಳು ದೊಡ್ಡ ಪ್ರಮಾಣದ ಮೇಲೆ ಸಿಗುತ್ತಿತ್ತು. ಆದರಿಂದ ಅದಕ್ಕೆ 'ನೀಲಕುಂಡ'ವೆಂಬ ಹೆಸರಿದ್ದಿತು. ಅದೀಗ ನಿಲಕುಂದವೆಂಬ ಹೆಸರಿನಲ್ಲಿ ಮಾರ್ಪಾಟಾಗಿದೆ. ಇಲ್ಲಿ ಈಗಲೂ ನೀಲದ ಹರಳು ಸಿಗುತ್ತಿರುವುದು ಪ್ರಸಿದ್ಧವಿದೆ. ಇದರಂತೆ ಉತ್ತರ ಕನ್ನಡದ ಹಲವೆಡೆಗಳಲ್ಲಿ ಎಲ್ಲ ಬಗೆಯ ಹರಳು ಕಲ್ಲುಗಳು ದೊರೆಯುತ್ತವೆ. ತಜ್ಞರು ಹೆಚ್ಚಿನ ಸಂಶೋಧನೆ ನಡೆಸಿ ಈ ಅಮೌಲ್ಯ ವಸ್ತುವಿನ ಸಂಪಾದನಕ್ಕೆ ಲಕ್ಷ್ಯ ಪೂರೈಸಬೇಕು.

ಬಿಳೀ ಮಣ್ಣು

ಇಟ್ಟಿಗೆ, ಭರಣಿ, ಕಪ್ಪು, ಸಾಸರ, ಮುಂತಾದ ಹಲವಾರು ಅಂದವಾದ ಉಪಯುಕ್ತ ಒಡವೆಗಳನ್ನು ತಯಾರಿಸಲು ಬರುವ ಬಿಳೀ ಮಣ್ಣು ಹಲವು ಕಡೆಗಳಲ್ಲಿ ದೊರೆಯುವದು. ಅದರಲ್ಲಿಯೂ ಸಿರ್ಸಿ ತಾಲೂಕಿನ ಮಂಜಗುಣಿ ಹತ್ತರವಿರುವ ಗಿಳಗುಂಡಿ ಹಾಗೂ ಸಿದ್ದಾಪುರ ತಾಲೂಕಿನ ತಾಳಗುಪ್ಪ ಹತ್ತರವಿರುವ ಮಾವಿನಹೊಳೆ ಎಂಬಲ್ಲಿ (ಉಸಕು ಮಿಶ್ರಿತವಿರುವ) ಬಿಳೀ ಮಣ್ಣು ಬಹು ದೊಡ್ಡ ಪ್ರಮಾಣದ ಮೇಲೆ ಸಿಗುತ್ತದೆ. ಅದರಂತೆ ಕುಮುಟಾ ಕಾರವಾರ ರಸ್ತೆಯ ಮೇಲಿರುವ ಮಾದನಗೇರಿಯಿಂದ ಅಚವೆಗೆ ಬರುವ ದಾರಿಯಲ್ಲಿಯೂ ಬಿಳೀ ಮಣ್ಣು ಸಿಗುವದು. ಇದನ್ನು ಸಂಗ್ರಹಿಸಿ ಶೋಧಿಸಿ ಉತ್ಪಾದಕ ಉದ್ಯೋಗದಲ್ಲಿ ಮಾರ್ಪಡಿಸಲು ಸಾಕಷ್ಟು ಅವಕಾಶವಿದೆ.

ಹಳದೀ ಮಣ್ಣು


ಇತ್ತಿತ್ತ ಮನೆಗಳನ್ನು ಅಂದವಾಗಿ ಕಾಣುವಂತೆ ಮಾಡಲಿಕ್ಕೂ, ಕ್ರಿಮಿನಾಶಕವೆಂದೂ ಉಪಯೋಗಿಸುತ್ತಿರುವ ನಯವಾದ ಹಳದೀ ಮಣ್ಣು ಶಿರ್ಸಿ ತಾಲೂಕ ಮತ್ತೀಘಟ್ಟದಲ್ಲಿ ಚಾಚಿನಗುಡ್ಡವೆಂದು ಪ್ರಸಿದ್ಧವಾದ ಸ್ಥಳದಲ್ಲಿ ಹೇರಳವಾಗಿ ಸಿಗುತ್ತದೆ. ಇದರ ಪ್ರಯೋಜನವು ದೇಶಕ್ಕೆ ಸಿಗುವಂತಾದರೆ ಮತ್ತಿಷ್ಟು ಅನುಕೂಲ.

ಕೆಂಪು ಮಣ್ಣು

ಉತ್ತರ ಕನ್ನಡದ ಹಲವೆಡೆಗಳಲ್ಲಿ ಕೆಂಪು ಮಣ್ಣು ಹೇರಳವಾಗಿ ಸಿಗುವದು. ಅದರೂ ಅದರಲ್ಲಿ ಕುಮುಟಾ ತಾಲೂಕ ಊಲಗಳ್ಳಿ ಎಂಬಲ್ಲಿಂದ ಮಣ್ಣು ತಂದು ಮಣಿಕೆಯಲ್ಲಿ ಒಬ್ಬರು ಹಂಚಿನ ಕಾರಖಾನೆಯನ್ನು ಪ್ರಾರಂಭಿಸಿದ್ದಾರೆ. ಇಟ್ಟಿಗೆ, ಹಂಚುಗಳ ಹಲವು ಕಾರಖಾನೆಗಳನ್ನು ಹಲವೆಡೆಗಳಲ್ಲಿ ಪ್ರಾರಂಭಿಸಬಹುದು.

ಇವಲ್ಲದೆ ಸಿರ್ಸಿ ತಾಲೂಕಿನ ಹೆಗಡೇಕಟ್ಟೆಯ ಒಂದು ಬಾವಿಯಲ್ಲಿ ಪೆಟ್ರೋಲಿಯಮ್‌ದಂಥ ಎಣ್ಣೆ ಸಿಗುತ್ತದೆ. ಅದು ಅತ್ಯಂತ ಅಶುದ್ಧ ಸ್ಥಿತಿ

—೧೧ನೆಯ ಪುಟಕ್ಕೆ



ಮುಂಬಯಿಯಲ್ಲಿ ಮುಖ್ಯ ಮಂತ್ರಿ ಪಂ. ಜವಾಹರಲಾಲರು ಅಂಗಹೀನ ಮಕ್ಕಳ ಸಂಸ್ಥೆಗೆ ಭೆಟ್ಟಿ ಕೊಟ್ಟಾಗ



ಮಾಲವ ಒಕ್ಕೂಟ ರಚನೆ: ಒಪ್ಪಂದದ ಕರಡನ್ನು ಭಾರತ ಸರಕಾರದ ಸಂಸ್ಥಾನ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನ್ (ಎಡಕ್ಕೆ) ರಾಜಪ್ರಮುಖ ಗ್ವಾಲಿಯರ ಮಹಾರಾಜರು (ನಡುವೆ ಕುಳಿತವರು,) ಇಂದೂರು ಮಹಾರಾಜರು (ಬಲಕ್ಕೆ) ಹಾಗು ಗ್ವಾಲಿಯರ ಮಹಾರಾಜರ ರಾಜಕೀಯ ಸಲಹೆಗಾರ ಶ್ರೀ ಜೆ. ಎನ್. ಸಹಾನಿ (ಹಿಂದೆ ನಿಂತವರು) ಚರ್ಚಿಸುತ್ತಿರುವರು



ಇಂಗ್ಲಂಡಿನ ಅರಸ ಜಾರ್ಜ ಅರಸರ ಮತ್ತು ರಾಣಿ ಎಲಿಜಬೆತ್ ಇವರ ವಿವಾಹದ ೨೫ ನೆ ವರ್ಧಂತಿ ಕಳೆದ ತಾ ೨೬ ಕ್ಕೆ ಜರಗಿತು. ಈ ಸಮಾರಂಭದ ಅವಸರದಲ್ಲಿ ವಿಶೇಷವಾಗಿ ತೆಗೆದ ಚಿತ್ರವಿದು.



ಮೊನ್ನೆ ಮುಂಬೈಯಲ್ಲಿ ಸೇರಿದ ಅ. ಭಾ. ಕಾಂ. ಸಮಿತಿ ಅಧಿವೇಶನದ ಕಾಲಕ್ಕೆ ಸದಾಸಿದ್ಧವಾಗಿ ನಿಂತಿದ್ದ ಪ್ರ. ಚಿಕಿತ್ಸಾ ಪಥಕದ ಕಾರುಗಳು.

ಜನಮತ

ದ. ಕ. ಜಿಲ್ಲೆಯ ಆಹಾರ ಪರಿಸ್ಥಿತಿ

ಮೊಟ್ಟ ಮೊದಲಿನಿಂದಲೂ ವಿನಿಯಂತ್ರಣಕ್ಕೆ ಬದ್ಧ ವಿರೋಧವಿದ್ದ ಮದ್ರಾಸ ಪ್ರಾಂತವು ವಿನಿಯಂತ್ರಣ ಪರವಾದ ವಿಚಾರಕ್ಕೆ ಆ ಮೇಲೆ ವಿಶೇಷವಾದ ಆಸ್ಥೆ ಆಸಕ್ತಿಯನ್ನು ತೋರಿಸಿತೆಂಬುದು ಸುಸ್ಪಷ್ಟವು. ಈ ಆಸಕ್ತಿಯೊಡನೆ ಸರಕಾರದ ಆತುರವೂ ಬೆರೆಯಿತೆಂಬುದು ವಿಷಾದಕರವೂ ವಿಚಾರಣೀಯವೂ ಆಗಿದೆ. ಸರಕಾರವು ಆಕಸ್ಮಿಕವಾಗಿ ಗ್ರಾಮನಿಯಂತ್ರಣವನ್ನು ತೆಗೆಯಿತು. ಆದರೆ ಇದರಿಂದ ಸರಕಾರದ ಹಿಂದು-ಮುಂದಿನ ವಿಚಾರವಾವುದೆಂದು ಜನತೆಗೆ ಅರಿವಾಗಲಿಲ್ಲ. ಸರಕಾರವು ತನ್ನ ಮುಂದಿನ ಯೋಜನೆ ಯೋಜನೆಗಳಾವುವೆಂದು ನಿರ್ಧಾರವಾಗಿ ತಿಳಿಸಲಿಲ್ಲ. ಸಂಪೂರ್ಣ ವಿನಿಯಂತ್ರಣವೇ ತನ್ನ ಗುರಿಯೆಂದು ಸರಕಾರವು ಹೇಳುತ್ತಾ ಪೇಟೆಗಳಲ್ಲಿಯ ಲೇಶನ್ನನ್ನು ರದ್ದು ಮಾಡಿತು. ಇದರ ಪೂರ್ಣ ತಿಳುವಳಿಕೆ ಅಥವಾ ಸೂಚನೆ ದೊರೆಯದ ಮೂಲಕ ಜನತೆಯು ಇದರ ಪರಿಣಾಮವನ್ನು ಕಂಗೆಟ್ಟು ಕಾಣುತ್ತದೆ. ಕಟ್ಟಿ ಬೆಳೆಸಿದ ಕೋಣನಂತಿರುವ ಆಹಾರ ಸಮಸ್ಯೆಯು ಕಟ್ಟು ಬಿಚ್ಚಿ ಬಿಟ್ಟ ಮೇಲಂತೂ ಈಗ ಹಿಡಿತ ಮೀರಿ ನಿಂತಿದೆ. ಅದು ಅಕ್ಕಿ ಆಹಾರವು ಜಿಲ್ಲೆಯಿಂದ ಹೊರಗೂ ಸಾಗಿ ಹೋಯಿತೆಂದು ಎಲ್ಲರಿಗೂ ತಿಳಿದು ಬಂದಿದೆ. ಸಾಕಷ್ಟು ಆಹಾರ ಸಂಗ್ರಹವನ್ನು ಸರಕಾರವು ಮಾಡಿದೆ; ತಕ್ಕಷ್ಟು ಆಹಾರವಸ್ತುವೂ ಹೊರಗೆ ಹೋಯಿತು; ಅಂದಮೇಲೆ ಭವಿಷ್ಯವು ಕತ್ತಲೆಯಲ್ಲಿದೆ.

ವಿನಿಯಂತ್ರಣದ ದಾರಿಯಲ್ಲಿ ತೋರಿಸಿದ ಅತಿ ಆಸಕ್ತಿಯೊಡನೆ ವಿಚಕ್ಷಣೆಗೂಡಿದ ಕಾರ್ಯಕ್ರಮವನ್ನೂ ಜನತೆಗೆ ಜಾಗ್ರತಿ ಜಾಗ್ರತೆಯಿಂದ ದೊರಕಗೂಡಿದ ತಿಳುವಳಿಕೆಯನ್ನೂ ನೀಡುವ ಯತ್ನವನ್ನು ಸರಕಾರ ವಹಿಸಿದ್ದರೆ ಪರಿಸ್ಥಿತಿಯು ನಿಜವಾಗಿ ಇಷ್ಟರ ಮಟ್ಟಿಗೆ ಕೆಟ್ಟು ಹೋಗುತ್ತಲಿರಲಿಲ್ಲ. ಈ ಕೆಲಸವನ್ನು ನಿರ್ವಹಿಸಲು ಸರಕಾರಕ್ಕೆ ಬೇಡವಾಗಿದೆಯೆಂದಾಗಲೀ ಮನಸ್ಸಿಲ್ಲವೆಂದಾಗಲಿ ಭಾವಿಸಬಹುದಾದರೆ ಪ್ರಾಂತದಲ್ಲಿ ಆಹಾರ ಖಾತೆಯನ್ನೇಕೆ ಇರಗೊಡಿಸಬೇಕು? ಆಹಾರ ಸಮಸ್ಯೆಯೆಂಬ ಭವ್ಯ ಖಾತೆಯನ್ನು ಇಟ್ಟು ಸರಕಾರವು ಈಗ ಆ ಖಾತಾಧಿಕಾರಿಗಳನ್ನು ಸಾಕುವುದರಿಂದ ಯಾವ ಸಾರ್ಥಕತೆಯನ್ನು ಕಾಣಬಯಸುತ್ತಿದೆ? ಆದರೆ ಲಾಭಬಡುಕರೇನೋ ಈ ಪರಿಸ್ಥಿತಿಯ ಸಂಪೂರ್ಣ ಲಾಭವನ್ನು ಮಾಡಿಕೊಂಡರು. ವಿಮರ್ಶನೆಗೀಡಾದ ಪರಿಸ್ಥಿತಿಯನ್ನು ಮತ್ತಷ್ಟು ಕದಡಿಬಿಟ್ಟರು. ಅಕ್ಕಿಯನ್ನು ದೋಚಿಕೊಳ್ಳಲು ಅವರು ಮಾಡಿದ ಮಾಯಾ ಮಂತ್ರಗಳೇನು? ಪ್ರಚಾರ ತಂತ್ರಗಳೇನೆಂಬುದು ಸರಕಾರದ ಅನುಭವಕ್ಕೆ ಬಾರದಿದೆಯೆ?

ಕರಾಚಿಯಿಂದ ನಮ್ಮ ಹೊಟ್ಟೆಯ ಹಸಿವು ತಣಿಸಲು ಹಡಗಿನಲ್ಲಿ ಬರುವ ಅಕ್ಕಿಯ ಕತೆಯು ಯಾವ ಬಡವನ ಆಸೆಯನ್ನಾದರೂ ಕೆದಕುವಂತಹದಿತ್ತು. ಹಾಗೆ ಹಡಗಿನಲ್ಲಿ ಬಂದ ಅಕ್ಕಿಯನ್ನು ಜೋಳಿಯಾಗಿ ಹರಿದು ದರವು ಬಿದ್ದು ಹೋಗುವ ಸಂಭವ— ಅದಕ್ಕಾಗಿ ಈಗಲೇ ಹೆಚ್ಚಿಗೆ ದರವನ್ನು ನೀಡುವ ಉದಾರ ಸಹಾಯ— ಈ ವಿಚಾರದಿಂದು ಬ್ಬಿದ ಅದೆಷ್ಟು ಮಂದಿ ರೈತರು ತಮ್ಮ ಅಕ್ಕಿಯನ್ನು ಖಾಲಿ ಮಾಡಿಕೊಂಡಿಲ್ಲ? ಮೇಲಾಗಿ ಸರಕಾರವು ಸಂಗ್ರಹ ಮಾಡಿದ ಅಕ್ಕಿಯನ್ನು ತಿರುಗಿ ರಿಲೀಫ್ ಸ್ಟೋರುಗಳ ಮುಖಾಂತರ ಅವಶ್ಯವೆನಿಸುವಾಗ ಸರಕಾರವು ಕೊಡುವುದು ಆದೂ ಕಡಿಮೆದರಕ್ಕೆ ಈ ಪ್ರಚಾರ ತಂತ್ರವು ನಿಜವಾಗಿಯೂ ಆಕರ್ಷಣೀಯವಾಗಿದೆ. ರೈತರು ತಾವೆಲ್ಲ ಮುಡಿ ಅಕ್ಕಿಯನ್ನು ಹೆಚ್ಚಿಗೆ ದರಕ್ಕೆ ತನ್ನ ಅವಶ್ಯಕತೆಗಿಂತ ಕಡಿಮೆ ಮಾಡಿ ಕೊಂಡಾದರೂ ಕೊಟ್ಟರೇನಾಯಿತು? ಕರಾಚಿಯಿಂದ ಬರುವ ಅಕ್ಕಿ ಹಾಗೂ ರಿಲೀಫ್ ಸ್ಟೋರುಗಳಿಂದ ಸಿಗುವ ಅಕ್ಕಿ ಇರುವುದಿಲ್ಲವೆ? ಕೊರತೆಯಿಲ್ಲವೆಂದು ವಿಚಾರಿಸಹತ್ತಿದ್ದಾರೆ.

ಅದರಂತೆ ಅಳಿದ ಊರಿಗೆ ಉಳಿದವನೇ ಗೌಡ ಎನ್ನುವಂತೆ ಪರಿಸ್ಥಿತಿಯ ಅನುಭವ ಕೊಡುವ ಹೆಸರು ಇಲ್ಲದಿರುವಾಗ ಲಾಭಬಡುಕರೇ ಒಬ್ಬ ದೊಡ್ಡ ಸಲಹೆಗಾರ. ಈ ರೀತಿಯಾಗಿ ದ. ಕ. ಜಿಲ್ಲೆಯ ಸರಕಾರವು ಸರ್ಪ್ಲಸ್ (ಉಳಿಕೆ) ಗ್ರಾಮಗಳೆಂದು ತಿಳಿದ ಗ್ರಾಮಗಳು ಈ ನಿಜವಾಗಿಯೂ ಸರ್ಪ್ಲಸ್ ಗ್ರಾಮಗಳಾಗಿರುವುದಿಲ್ಲವೆಂಬುದು ಇನ್ನಾದರೂ ಕಂಡುಕೊಳ್ಳಲು ಸಾಧ್ಯವಾಗುವ ಸಂಗತಿ. ಈ ಸತ್ಯವಿಚಾರ ನಿರೂಪಣೆಯು ಸರಕಾರದ ಕಣ್ತೆರೆಯಿಸಲು ಸಹಾಯಕವಾದೀತೆ?

ಈ ಅಕ್ಕಿಯ ಸಂಗ್ರಹವು ಊರಿನವರ ಹೊಟ್ಟೆ ಪಾಡಿಗಾಗಿ ಕುಳಿತಿಲ್ಲವೆಂಬುದು ಸರಕಾರದ ರಿಲೀಫ್ ಸ್ಟೋರುಗಳಲ್ಲಿ ಹೊರತು ಬೇರೆ ಅಂಗಡಿಗಳಲ್ಲಿ ಅದು ಮಾರಾಟವಾಗಲಿಲ್ಲವೆನ್ನುವುದರಿಂದಲಾದರು ಆಗ ಸ್ಪಷ್ಟವಾಗಲಿಲ್ಲವೆ? ಮಲಬಾರು ಗೋವೆಗಳಿಗೆ ಅಕ್ಕಿಯು ಸಾಗಿತೆಂದು ಜನರ ಬಾಯಿಯಿಂದ ಕೇಳುತ್ತಿರುವಾಗಲೇ ಅನಿರ್ಬಂಧ ವ್ಯವಹಾರ ವ್ಯಾಪಾರ ಸಾಗಿತಲ್ಲವೆ? ಎಷ್ಟೆಷ್ಟು ಅಕ್ಕಿ ಮುಡಿಗಳು ಯಾವ ಯಾವ ತಾಲೂಕು ಗ್ರಾಮಗಳಿಂದ ಹೊರಗೆ ಹೋಯಿತೆಂದು ಹೇಳಲು ಸಾಧ್ಯವಿದೆಯೆ? ಗಾಡಿಗಟ್ಟಲೆ ಅಕ್ಕಿಯ ಸಾಗಾಟವನ್ನು ಜನತೆಯು ಕಂಡಿತಲ್ಲದೆ ಅದರ ಮುಂದಿನ ವ್ಯವಸ್ಥೆಯೇನು ಸಾಗದೆಯೆಂದು ಯಾರಾದರೂ ಹೇಳಬಲ್ಲರೆ? ಇದೆಲ್ಲವನ್ನು, ಸರಕಾರವು ಅಲಕ್ಷ್ಯ ಭಾವದಿಂದ ಕಂಡಿತಲ್ಲವೆ? ಇನ್ನಾದರೂ ಮುಂದೇನು? ಸರಕಾರವು ಇತ್ತ ಗಮನವನ್ನು ಕೊಡುವುದೆ?

(ಮ. ನಾರಾಯಣರಾವ)

ಐದು ವರ್ಷಗಳಲ್ಲಿ ಇಂಗ್ಲೀಷಕ್ಕೆ ಅರ್ಧಚಂದ್ರ

ಬೋಧಭಾಷಾ ಸಮಿತಿಯ ನಿರ್ಣಯ

ವಿಶ್ವವಿದ್ಯಾಲಯ ಶಿಕ್ಷಣದ ಬೋಧಭಾಷಾ ಸಮಿತಿಯು ಈ ತಿಂಗಳು, ವಿಶ್ವವಿದ್ಯಾಲಯದ ಶಿಕ್ಷಣದಲ್ಲಿ ಇಂಗ್ಲೀಷನ್ನು ತಿತ್ತಿ ಹಾಕಿ ಅದರ ಬದಲು ಪ್ರಾಂತ ಭಾಷೆಯನ್ನೂ ರಾಷ್ಟ್ರ ಭಾಷೆಯನ್ನೂ ಪ್ರಾರಂಭಿಸಲು ಇನ್ನು ಐದು ವರ್ಷಗಳ ಅವಕಾಶ ಕೊಡಬೇಕೆಂದೂ ಆ ವರೆಗೆ ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷೇ ಬೋಧಭಾಷೆಯಾಗಿರಬೇಕೆಂದೂ ವಿಶ್ವವಿದ್ಯಾಲಯ ಪರೀಕ್ಷೆಗಳೆಲ್ಲ ಇಂಗ್ಲೀಷಿನಲ್ಲಿಯೇ ನಡೆಯಬೇಕೆಂದೂ ನಿರ್ಧರಿಸಿತು. ಈ ಸಮಿತಿಯು ಡಾ. ತಾರಾಚಂದರ ಅಧ್ಯಕ್ಷತೆಯಲ್ಲಿ ಸೇರಿ ಎರಡು ದಿನ ದೀರ್ಘ ಚರ್ಚಾನಂತರ ತನ್ನ ತೀರ್ಮಾನಗಳನ್ನು ಕೈಕೊಂಡಿತು. ಆ ತೀರ್ಮಾನಗಳ ಮುಖ್ಯಾಂಶಗಳು ಹೀಗಿವೆ—

ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣದಲ್ಲಿ ರಾಷ್ಟ್ರಭಾಷೆಯ ಪರೀಕ್ಷೆ ಇರಬೇಕು. ರಾಷ್ಟ್ರಭಾಷೆಯನ್ನೇ ಐಚ್ಛಿಕ ವಿಷಯವಾಗಿಟ್ಟುಕೊಂಡು ಕಲಿಯಬಯಸಿದ ವಿದ್ಯಾರ್ಥಿಗೆ ವಿಶ್ವವಿದ್ಯಾಲಯವು ಅನುಕೂಲ ಒದಗಿಸಿ ಕೊಡಬೇಕು.

ರಾಷ್ಟ್ರಭಾಷೆಯ ಲಿಪಿಯ ವಿಷಯದಲ್ಲಿ ಘಟನಾ ಸಮಿತಿಯು ಒಪ್ಪಿದ್ದನ್ನೇ ಎಲ್ಲ ವಿಶ್ವವಿದ್ಯಾಲಯಗಳೂ ಅಂಗೀಕರಿಸಬೇಕು. ಬೇರೆ ಬೇರೆ ಪ್ರಾಂತದಲ್ಲಿ ರಾಷ್ಟ್ರಭಾಷೆ ಬರೆವಾಗ ಅಲ್ಲಿಯವರು ತಮ್ಮ ಪ್ರಾಂತ ಭಾಷೆಯ ಲಿಪಿಯನ್ನಾಗಲೀ ರಾಷ್ಟ್ರಭಾಷೆಯ ಲಿಪಿಯನ್ನಾಗಲೀ ಬಳಸಬಹುದು.

ಎಲ್ಲ ವಿಶ್ವವಿದ್ಯಾಲಯಗಳಲ್ಲಿಯೂ ರಾಷ್ಟ್ರಭಾಷೆಯು ಕಡ್ಡಾಯದ ವಿಷಯವಾಗಬೇಕು.

ಈ ನಿರ್ಣಯದಂತೆ ಪಠ್ಯಪುಸ್ತಕಗಳನ್ನು ಅದರಲ್ಲಿಯೂ ವಿಜ್ಞಾನ ಶಾಸ್ತ್ರದ ಪಠ್ಯಪುಸ್ತಕಗಳನ್ನು ಸಿದ್ಧಗೊಳಿಸುವಾಗ ಸರಕಾರದ ಮೇಲ್ವಿಚಾರಣೆಯಲ್ಲಿಯೇ ಕೆಲಸ ಜರಗಬೇಕು. ಇತರ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವಲ್ಲಿ ಕೇಂದ್ರವು ಪ್ರಾಂತಿಕ ಸರಕಾರಗಳಿಗೆ ಬೇಕಾದರೆ ಅವಶ್ಯಕ ಸಹಕಾರ ನೀಡಬಹುದು.

ಹಿಂದುಸ್ತಾನದ ಭಾಷೆಗಳಿಗೆಲ್ಲ ಒಂದೇ ಬಗೆಯ ಪಾರಿಭಾಷಿಕ ಶಬ್ದಗಳನ್ನು ಕಂಡುಹಿಡಿಯುವದಕ್ಕಾಗಿ ಭಾಷಾಶಾಸ್ತ್ರಜ್ಞರ ಹಾಗೂ ವಿಜ್ಞಾನಿಗಳ ಒಂದು ಸಮಿತಿಯನ್ನು ನೇಮಿಸಬೇಕು. ಈ ಸಮಿತಿಗೆ ಬೇಕಾಗುವ ಧನ ಸಹಾಯವನ್ನೆಲ್ಲ ಕೇಂದ್ರ ಸರಕಾರವೇ ಕೊಡಬೇಕು. ಈ ಸಮಿತಿಯು ಐದು ವರ್ಷಗಳಲ್ಲಿ ತನ್ನ ಕೆಲಸವನ್ನು ಪೂರೈಸಬೇಕು.

ಬೇರೆ ಬೇರೆ ಪ್ರಾಂತಗಳಲ್ಲಿರುವ ಭಾಷಾವಾರ ಅಲ್ಪಸಂಖ್ಯಾಕರ ಸಮಸ್ಯೆಗಳನ್ನು ಬಗೆಹರಿಸುವದಕ್ಕೆ ಕೇಂದ್ರ ಸರಕಾರವು ಪ್ರಾಂತಗಳಿಗೆ ವಿಶೇಷ ಪ್ರಾದೇಶಿಕ ಅಧಿಕಾರಗಳನ್ನು ಕೊಡಬೇಕು.

ಫೆಡರಲ್ ಪಬ್ಲಿಕ್ ಸರ್ವೀಸ ಕಮೀಶನ್ನಿನ ಪರೀಕ್ಷೆಗಳು ಆಯಾ ವಿದ್ಯಾರ್ಥಿಗಳ ಪ್ರಾಂತಿಕ ಭಾಷೆಯಲ್ಲಿ ನಡೆಯಬೇಕು. ಆದರೆ ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರು ರಾಷ್ಟ್ರಭಾಷೆ ಪರೀಕ್ಷೆಯಲ್ಲಿಯೂ ತೇರ್ಗಡೆ ಹೊಂದಬೇಕು.

ನೀಲಗಿರಿಯಲ್ಲಿ ಜರುಗಲಿರುವ ತಮಿಳನಾಡು ಹಿಂದೀ ಪ್ರಚಾರಕ ಸಮ್ಮೇಳನದ ಅಧ್ಯಕ್ಷತೆ ವಹಿಸಲು ಶ್ರೀ ರಂಗನಾಥ ದಿವಾಕರರು ೩ ನೇ ತಾರೀಕಿನ ದಿನ ಬೆಂಗಳೂರು ಮಾರ್ಗವಾಗಿ ಹೋದರು. ಬೆಂಗಳೂರಿನಲ್ಲಿ ಅವರು ಏಕೀಕರಣವನ್ನು ಕುರಿತು ಅಲ್ಲಿನ ಮುಖಂಡರೊಡನೆ ಅವರು ವಿಚಾರ ವಿನಿಮಯ ಮಾಡುವರು.

ದಲಿತರು ಮೂರನೆಯ ಪಕ್ಷವಾಗಲಿ

ಡಾ. ಅಂಬೇಡಕರರ ಅಧಿಕಾರ ಲಾಲಸೆ

ಹೋದ ಎಪ್ರೀಲ ೨೫ ನೇ ತಾ- ದಿನ ಡಾ. ಅಂಬೇಡಕರರು ಲಖನೌದಲ್ಲಿ ಸೇರಿದ್ದ ದಲಿತ ವರ್ಗದ ಮಹಾಮಂಡಲದ ಪರಿಷತ್ತಿನಲ್ಲಿ ಒಂದು ಭಾಷಣ ಮಾಡಿದರು. ಅದರಲ್ಲಿ ಅವರು ದಲಿತರೂ ಅಸ್ಪೃಶ್ಯರೂ ಸೇರಿ ಮೂರನೆಯದೊಂದು ಸ್ವತಂತ್ರ ಪಕ್ಷ ಕಟ್ಟಿಕೊಳ್ಳಬೇಕೆಂದೂ ಕಾಂಗ್ರೆಸನ್ನಾಗಲೀ ಸಾಮ್ಯವಾದಿ ಪಕ್ಷವನ್ನಾಗಲೀ ಸೇರಿಕೊಳ್ಳಬೇಕೆಂದೂ ಉಪದೇಶಿಸಿದರು. ಹೀಗೆ ಮೂರನೆಯ ಪಕ್ಷ ಕಟ್ಟಿಕೊಳ್ಳುವದರಿಂದ ರಾಜಕಾರಣದ ಬಲಾಬಲವನ್ನು ತಮ್ಮ ಕೈಯಲ್ಲಿ ಇಟ್ಟುಕೊಳ್ಳಲು ಬರುವದೆಂದೂ ಉಳಿದೆರಡೂ ಪಕ್ಷಗಳು ಸದಾ ತಮ್ಮ ಶರಣಾಗತರಾಗುವದರಿಂದ ತಮಗೆ ಬೇಕಾದದ್ದನ್ನು ಕೇಳಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳಬಹುದೆಂದೂ ಈ ಹೊಸ ಪಕ್ಷ ಕಟ್ಟಿಕೊಳ್ಳುವದರ ರಹಸ್ಯವನ್ನು ಬಿಂಗಡಿಸಿ ಹೇಳಿದರು.

ಡಾ. ಅಂಬೇಡಕರರ ಈ ಉಪದೇಶವು ಹೊಣೆಗೆಟ್ಟಿದ್ದೆಂಬುದಾಗಿ ದೇಶದಾದ್ಯಂತ ಪ್ರತಿಭಟನೆಯು ಕೂಗೆದ್ದಿತು. ಇದಕ್ಕೆ ಡಾ. ಅಂಬೇಡಕರರು ಒಂದು ಸ್ಪಷ್ಟೀಕರಣ ಪ್ರಕಟಿಸಿದ್ದು ಅದರ ಸಾರಾಂಶವು ಈ ಕೆಳಗಿನಂತಿದೆ.

ಹರಿಜನರಿಗೆ ಆಡಳಿತ ಸೂತ್ರ ಬೇಕು

ಕಾಂಗ್ರೆಸ್ಸಿನ ವಿರೋಧಿಯೂ ಟೀಕಾಕಾರನೂ ನಾನಾಗಿರುವೆನೆಂಬುದು ನಿಜ. ಸಹಕಾರದಿಂದ ಲಾಭವಾಗುತ್ತಿದ್ದರೆ ಸಹಕಾರ ತೋರಬೇಕೆಂದು ನನ್ನ ಮತ. ಇದೇ ದೃಷ್ಟಿಯಿಂದ ನಾನು ಕಾಂಗ್ರೆಸಿನೊಡನೆ ಸಹಕರಿಸಲು ನಿರ್ಧರಿಸಿದೆ. ಘಟನೆಯಲ್ಲಿ ದಲಿತರಿಗೆ ಕೆಲ ಹಿತ ರಕ್ಷಣೆಗಳು ದೊರಕಿವೆ. ಯಾವ ಕರಾರುಗಳನ್ನೂ ಹಾಕದೆ ಸರಕಾರದಲ್ಲಿ ನನಗೆ ಸ್ಥಳ ಕೊಟ್ಟರು. ಸರಕಾರದಲ್ಲಿದ್ದು ನನ್ನ ಬಾಂಧವರನ್ನು ಸೇವಿಸಬಹುದೆಂದು ಭಾವಿಸಿ ಅಧಿಕಾರ ಪದ ಸ್ವೀಕರಿಸಿದೆ. ಹರಿಜನರ ವಿರುದ್ಧ ಕಾಯದೆಗಳಾಗುವ ಭಯವಿಲ್ಲ ಆದರೆ ಆಡಳಿತದಲ್ಲಿ ಹರಿಜನರಿಗೆ ಹೆಚ್ಚು ಪ್ರಾತಿನಿಧ್ಯ ಬೇಕು.

ಕಾಂಗ್ರೆಸ್ಸನ್ನು ಸೇರುವಲ್ಲಿ ಪ್ರಯೋಜನವಿಲ್ಲ

ಸರಕಾರವನ್ನು ಟೀಕಿಸಲು ವಿರೋಧಿ ಪಕ್ಷ ಒಂದು ಬೇಕೇ ಬೇಕು ಇಲ್ಲದಿದ್ದರೆ ಸರ್ವಾಧಿಕಾರವು ತಲೆದೋರುವದು. ಈಗ ಸಾಮ್ಯವಾದಿಗಳು ಕಾಂಗ್ರೆಸಿನಿಂದ ಹೊರ ಬಂದಿದ್ದಾರೆ ಇನ್ನು ಮುಂದೆ ಕಾಂಗ್ರೆಸು, ಸಾಮ್ಯವಾದಿ ಪಕ್ಷ ಎಂದು ಎರಡು ಬಣಗಳಾಗುವವು. ಆಗ ನಾವು ದಲಿತರು ಯಾವ ಬಣ ಸೇರಬೇಕೆಂಬ ಪ್ರಶ್ನೆ ಉಂಟಾಗುವದು. ಆಗ ದಲಿತರು ಮೂರನೆಯದೊಂದು ಪಕ್ಷ ಕಟ್ಟಿ ಅಧಿಕಾರ ಪ್ರಾಪ್ತಿಗೆ ದಾರಿ ಮಾಡಿಕೊಳ್ಳಬೇಕೆಂದು ನನ್ನ ಅಭಿಮತ. ಇದನ್ನೇ ನಾನು ಅಂದಿನ ಭಾಷಣದಲ್ಲಿ ಹೇಳಿದೆ. ಒಂದು ಪಕ್ಷದ ಅನುಯಾಯಿಗಳಾಗುವದರಿಂದ ನಮಗೆ ಪ್ರಾತಿನಿಧ್ಯ ದೊರಕಬಹುದಲ್ಲದೆ ಆಡಳಿತದಲ್ಲಿ ಅಧಿಕಾರ ದೊರೆಯದು. ಯುಕ್ತ ಪ್ರಾಂತದ ಸರಕಾರದ ನೌಕರಿಯಲ್ಲಿ ಪಂ. ಪಂತರು ದಲಿತರಿಗೆ ನೂರಕ್ಕೆ ೧೦ ರಷ್ಟು ಸ್ಥಳ ಕೊಟ್ಟದ್ದರಿಂದ ನೀವು ಆ ಸರಕಾರವನ್ನು ಖಂಡಿಸಿ ಒಂದು ಗೊತ್ತುವಳಿಯನ್ನು ಸ್ವೀಕರಿಸಿದ್ದೀರಿ. ಶಾಸನ ಸಭೆಯಲ್ಲಿ ಬಹುಮತ ಪಕ್ಷವನ್ನು ಕಟ್ಟಲು ಪಂ. ಪಂತರು ನಿಮ್ಮನ್ನು ಅವಲಂಬಿಸಿರಬೇಕಾಗಿಲ್ಲ. ಆದ್ದರಿಂದ ನೀವೂ ಪ್ರಬಲವಾದ ಸ್ವತಂತ್ರ ಪಕ್ಷವಾದರೆ ನೀವೂ ಸರಕಾರದಲ್ಲಿ ನೂರಕ್ಕೆ ೨೨ ರಷ್ಟು ಸ್ಥಳಗಳನ್ನು ಕೇಳಬಹುದಲ್ಲವೆ?

ಹಿಂದುಳಿದವರೂ ದಲಿತರೂ ಸೇರಿಕೊಳ್ಳಲಿ

ರಾಜಕೀಯ ಉದ್ದೇಶ ಸಾಧನೆಗಾಗಿ ಹಿಂದುಳಿದ ವರ್ಗದವರು ದಲಿತ ವರ್ಗದವರೊಡನೆ ಸಹಕರಿಸಲಿ. ದಲಿತ ವರ್ಗದವರಂತೆ ಹಿಂದುಳಿದವರೂ ರಾಜಕಾರಣದಲ್ಲಿ ಸೇರಿ ತಮ್ಮ ಸ್ಥಿತಿಯನ್ನೇಕೆ ಸುಧಾರಿಸಿಕೊಳ್ಳಬಾರದು ಎಂಬುದನ್ನು ಅಂದಿನ ಭಾಷಣದಲ್ಲಿ ಎತ್ತಿ ತೋರಿಸಿದೆ. ದಲಿತರೂ ಹಿಂದುಳಿದವರೂ ಪ್ರೌಢ ಮತದಾನ ಪದ್ಧತಿಯ ಪೂರ್ಣ ಲಾಭ ಪಡೆದುಕೊಂಡು ಅಧಿಕಾರ ಗ್ರಹಣಕ್ಕಾಗಿ ಸಂಘಟಿತರಾಗಬೇಕೆಂತಲೂ ಅಂದು ಹೇಳಿದೆ. ಪಂ. ನೆಹರು, ಸರದಾರ ಪಟೇಲರಂಥ ಉಜ್ವಲ ಕಾಂಗ್ರೆಸಿಗರು ಸ್ಥಾಪಿಸಿದ ಸರಕಾರವು ಸಹ ಪ್ರಜಾ ರಾಜ್ಯದಲ್ಲಿ ಶಾಶ್ವತವಾಗಿ ನಿಲ್ಲಲಾರರು. ನೀವು ಸಂಘಟಿತರಾದರೆ ಸರಕಾರವು ನಿಮ್ಮ ಕೈ ಸೇರುವಲ್ಲಿ ಸಂದೇಹವಿಲ್ಲ.

ಸ್ವಚ್ಛಂದ ಆಳಿಕೆಯನ್ನು ನೋಡುತ್ತ ಕೂಡಲಾರೆವು

ಸುದ್ದಿಗಾರ ಸಭೆಯಲ್ಲಿ ಪಂ. ನೆಹರು

ಹೊಸದಿಲ್ಲಿ ತಾ ೧ ರಂದು ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತ ಪಂ. ಜವಾಹರಲಾಲರು ಹೈದರಾಬಾದದ ಪರಿಸ್ಥಿತಿಯನ್ನು ಪೃಥಕ್ಕರಿಸಿ ಹೇಳಿದರು. ಕಾಶ್ಮೀರದ ಬಗ್ಗೆಯೂ ಕೆಲ ಮಾತು ಹೇಳಿದರು. ಹೈದರಾಬಾದದತ್ತ ಹೊರಳಿ ಹೀಗೆ ನುಡಿದರು. ಹೈದರಾಬಾದವು ಹಿಂದಿ ಒಕ್ಕೂಟದ ಭಾಗವಾಗುವದು ಅನಿವಾರ್ಯವಾಗಿದೆ. ಈ ವರೆಗೆ ಹಿಂದುಸ್ತಾನವು ಯಾವದೇ ಸಂಸ್ಥಾನವನ್ನು ಸೈನ್ಯಬಲದಿಂದ ಸೇರ್ಪಡೆ ಮಾಡಿಕೊಳ್ಳಬಯಸಿಲ್ಲ. ಅದು ಸಾರ್ವತ್ರಿಕ ಮತಗಣನೆಗೇ ಹೆಚ್ಚು ಮಹತ್ವ ಕೊಡುತ್ತ ಬಂದಿದೆ. ಹೈದರಾಬಾದ ಸಂಸ್ಥಾನದ ಹೊರತು ಉಳಿದಲ್ಲೆಲ್ಲಿಯೂ ಸ್ವಚ್ಛಂದ ಆಡಳಿತವಿಲ್ಲ. ಹೈದರಾಬಾದದಲ್ಲಿ ಹೊಣೆಗಾರ ಸರಕಾರವು ಸ್ಥಾಪಿತವಾಗಬೇಕು ಅಲ್ಲಿ ನಡೆವ ಪ್ರಜಾ ಪೀಡೆಯನ್ನು ನೋಡುತ್ತಾ ನಾವು ಸುಮ್ಮನೇ ಕುಳಿತಿರಲಾರೆವು, ಅದಕ್ಕೆ ತಕ್ಕ ಉಪಾಯವನ್ನು ನಾವು ಅನಿವಾರ್ಯವಾಗಿ ಹೂಡಬೇಕಾಗುವದು.

ರಜಾಕಾರ ದಲ ವಿಸರ್ಜಿಸಬೇಕು

ರಜಾಕಾರರೂ ನಿಜಾಮ ಪೋಲೀಸರೂ ಒಕ್ಕೂಟದ ಹಳ್ಳಿಗಳಲ್ಲಿ ನುಗ್ಗಿ ಲಗ್ಗೆ ಕೊಳ್ಳೆ ಕೊಲೆ ಮೊದಲಾದ ಅತ್ಯಾಚಾರ ಮಾಡಿದ್ದಾರೆ. ಹಿಂದೀ ಒಕ್ಕೂಟದ ಪ್ರದೇಶದಲ್ಲಿ ನಾಗರಿಕರು ೨೦ ಜನರಂತೆ ಸಾಲಾಗಿ ನಿಲ್ಲಿಸಲ್ಪಟ್ಟು ಗುಂಡಿನಿಂದ ಹೊಡೆಯಲ್ಪಟ್ಟಿರುವರಾಗಿ ತಿಳಿಯುತ್ತದೆ. ಇಂತಹ ಅತ್ಯಾಚಾರವನ್ನು ಯಾವ ಸರಕಾರವೂ ಸಹಿಸದು. ರಜಾಕಾರರು ಖಾಸಗೀ ಸೈನಿಕರು ಅವರ ಸ್ವಯಂಸೇವಕ ದಲವನ್ನು ಅಕ್ರಮಗೊಳಿಸಿ ವಿಸರ್ಜಿಸಬೇಕೆಂದು ನಿಜಾಮ ಸರಕಾರಕ್ಕೆ ಕೇಳಲಾಗಿದೆ. ಈಗ ಹೈದರಾಬಾದದಲ್ಲಿ ರಜಾಕಾರರ ಸತ್ತೆಯೇ ಪ್ರಬಲವಾಗಿದೆ. ನಿಜಾಮ ಸರಕಾರವು ಇವರಿಗೆ ಉತ್ತೇಜನ ಕೊಡುತ್ತಿರಬೇಕು ಇಲ್ಲವೆ ಅವರನ್ನು ಹತ್ತಿಕ್ಕಲು ಅಸಮರ್ಥರಿರಬೇಕು. ಎರಡರಲ್ಲಿ ಒಂದಿರಲೇಬೇಕು. ಇದರಲ್ಲಿ ಯಾವುದಿದ್ದರೂ ಈ ಪರಿಸ್ಥಿತಿಯಲ್ಲಿ ಹಿಂದುಸ್ತಾನ ಸರಕಾರವು ಕೈಕಟ್ಟಿಕೊಂಡು ಸುಮ್ಮನೆ ಕುಳಿತಿರಬಾರದು. ನಿಜಾಮ ಸರಕಾರವು ರಜಾಕಾರರಿಗೆ ಉತ್ತೇಜನವನ್ನೇ ಕೊಡುತ್ತಿದ್ದರೆ ಆ ಸರಕಾರವು ಹಗೆತನದ ಆರೋಪಕ್ಕೆ ಗುರಿಯಾಗುವದು.

ಆರ್ಥಿಕ ದಿಗ್ಬಂಧ

ಹೈದರಾಬಾದದ ಆರ್ಥಿಕ ದಿಗ್ಬಂಧ ಮಾಡಲಾಗಿದೆಯೋ ಎಂದು ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಆರ್ಥಿಕ ದಿಗ್ಬಂಧ ಮಾಡಿರುವೆವೆಂದು ಹೇಳಲು ಬರುವಂತಿಲ್ಲ. ಹಾಗೆಂದರೆ ಆಹಾರ ಪದಾರ್ಥ ಮೊದಲಾದ ನಿತ್ಯೋಪಯೋಗಿ ವಸ್ತುಗಳನ್ನೂ ತಡೆಹಿಡಿಯಬೇಕಾಗುತ್ತದೆ. ಆದರೆ ಶಸ್ತ್ರಾಸ್ತ್ರಗಳನ್ನು ಮಾತ್ರ ಸಾಗಿಸದಂತೆ ಎಚ್ಚರಿಕೆ ವಹಿಸಿದ್ದೇವೆ

ಹೈದರಾಬಾದವು ಯಥಾಸ್ಥಿತಿ ಒಪ್ಪಂದವನ್ನು ಪ್ರಾರಂಭದಿಂದೇ ಮುರಿಯುತ್ತಾ ಹೊರಟಿದೆ. ಪಾಕಿಸ್ತಾನಕ್ಕೆ ಹೈದರಾಬಾದವು ಕೊಟ್ಟ ಸಾಲ, ನಮ್ಮ ನಾಣ್ಯಗಳ ಮೇಲೆ ಹೇರಿದ ನಿರ್ಬಂಧ, ಸೈನಿಕರ ಸಂಖ್ಯೆಯನ್ನು ೭ಸಾವಿರದಿಂದ ೨೦ಸಾವಿರದ ವರೆಗೆ ಹೆಚ್ಚಿಸಿದ್ದು, ರಜಾಕಾರರಿಗೆ ಅವಕಾಶ ಕೊಟ್ಟಿದ್ದು, ಪೋಲೀಸರನ್ನು ಹೆಚ್ಚಿಸಿದ್ದು ಇವೆಲ್ಲ ಒಪ್ಪಂದವನ್ನು ಮುರಿದದ್ದರ ನಿದರ್ಶನವೆಂದು ಹೇಳಬಹುದು.

ಎರಡೇ ಮಾರ್ಗಗಳು

ಹೈದರಾಬಾದಕ್ಕೆ ಎರಡೇ ದಾರಿಗಳಿವೆ. ಒಂದು, ಹಿಂದೀ ಒಕ್ಕೂಟದಲ್ಲಿ ಸೇರ್ಪಡೆ ಹೊಂದಿ ಸಂರಕ್ಷಣ, ಮಾರ್ಗ ಸೌಕರ್ಯ ವಿದೇಶ ಸಂಬಂಧ ಇವುಗಳನ್ನು ಒಕ್ಕೂಟದ ನಿಯಂತ್ರಣಕ್ಕೆ ಒಪ್ಪಿಸುವದು. ಎರಡು, ಸೇರ್ಪಡೆ ಹೊಂದದೆ ಹಿಂದುಸ್ತಾನದೊಡನೆ ಸಹಕಾರ ರೀತಿಯಿಂದ ಇರುವದು. ಹೀಗಾದರೂ ಮೇಲ್ಕಾಣಿಸಿದ ೩ ಮಾತುಗಳನ್ನು ಒಕ್ಕೂಟಕ್ಕೆ ಒಪ್ಪಿಸಬೇಕಾಗುವದು. ಮೊದಲನೆಯ ರೀತಿಯಲ್ಲಿ ಹೈದರಾಬಾದಕ್ಕೆ ಬೇಕಾದಷ್ಟು ಪ್ರಾತಿನಿಧ್ಯ ದೊರೆವುದು ಎರಡನೆಯ ರೀತಿಯಲ್ಲಿ ಉಳಿವುದಾದರೆ ಒಕ್ಕೂಟದ ಸೌಕರ್ಯಗಳಿಂದ ಎರವಾಗಬೇಕಾಗುವದು ಎಂದು ಮೊದಲಾಗಿ ಹೇಳಿದರು.

ನಾಲ್ಕು ಮಾತು — ರಂಗನಾಥ ದಿವಾಕರ

ಶ್ರದ್ಧೆ

ಇಂಗ್ಲಿಷ ವೃತ್ತಪತ್ರ ವ್ಯವಸಾಯದಲ್ಲಿ ತೊಡಗಿದ ಓರ್ವ ಕನ್ನಡಿಗರು 'ನನ್ನ ಶ್ರದ್ಧೆ' ಎಂಬ ವಿಷಯವನ್ನು ಕುರಿತು ಹಲವು ಮಹನೀಯರ ಲೇಖಗಳನ್ನು ಕಲೆಹಾಕಿ ಒಂದು ಲೇಖ ಸಂಗ್ರಹವನ್ನು (ಸಿಂಪೋಸಿಯಮ್) ರಾದೇಶದಲ್ಲಿ ಪ್ರಕಟಿಸಲಿರುವರು. ಅವರು ನನ್ನನ್ನು ಕೇಳಿದ್ದರಿಂದ ಆ ವಿಷಯವಾಗಿ ವಿಚಾರಮಾಡುವ ಪ್ರಸಂಗವು ಬಂದಿತು.

* * *

ಪ್ರಗತಿಯ ಅಥವಾ ಆತ್ಮವಿಕಾಸದ ಕ್ಷೇತ್ರದಲ್ಲಿ ಶ್ರದ್ಧೆಗೆ ಬಹಳ ದೊಡ್ಡ ಸ್ಥಾನವಿರುವದು. ಶ್ರದ್ಧೆ ಇಲ್ಲದೆ ಆತ್ಮವಿಕಾಸವು ಸಾಧ್ಯವೇ ಇಲ್ಲ ಎಂದು ಹೇಳಬಹುದು. ಯಾವದೇ ಬಗೆಯ ಸಾಧನಗಳನು ಕೈಕೊಂಡರೂ ಮನೆ ಮಂದಿಗಳಿಗೆ ತಳಹದಿ ಬೇಕಾಗುವಂತೆ ಮೂಲದಲ್ಲಿ ಶ್ರದ್ಧೆ ಬೇಕು. ಶ್ರದ್ಧಾವಿರಹಿತವಾದ ಯಜ್ಞಾದಿಗಳು ವ್ಯರ್ಥ ಎಂದು ಗೀತೆಯು ಸಾರಿದೆ. ಗೀತೆಯು ಶ್ರದ್ಧೆಗೆ ಬಹಳ ಮಹತ್ವ ಕೊಟ್ಟಿದೆ. ಶ್ರದ್ಧೆಯೆ ಮನುಷ್ಯನ ಸರ್ವಸ್ವ—ಶ್ರದ್ಧಾಮಯೋಽಯಂ ಪುರುಷಃ— ಎಂದು ಹೇಳಿ, ತನ್ನ ಶ್ರದ್ಧೆಗನುಸರಿಸಿಯೆ ಮನುಷ್ಯನು ವಿಕಾಸಹೊಂದುವನು—ಯೋ ಯಚ್ಛ್ರದ್ಧಃ ಸ ಏವ ಸಃ—ಎಂದು ಸಾರಿದೆ. ಸಾಧನ, ಚಟುವಟಿಕೆ, ಇವೆಲ್ಲ ಬಾಹ್ಯ ಸಂಪತ್ತುಗಳಾದರೆ ಶ್ರದ್ಧೆ ಅಂತರಂಗದ ಸಂಪತ್ತು ಎಂದು ಹೇಳಿದರು.

* * *

ಇನ್ನು ಈ ಶ್ರದ್ಧೆ ಎಂದರೆ ಏನು? ಶ್ರದ್ಧೆ ಇದೊಂದು ಕೇವಲ ಬೌದ್ಧಿಕ ಮನವರಿಕೆಯಲ್ಲ. ತರ್ಕದಿಂದ ಸಿದ್ಧಪಡಿಸಿದ ಸಿದ್ಧಾಂತವಲ್ಲ. ಹೊಸದೊಂದು ತರ್ಕ ಸರಣಿಯನ್ನು ಮುಂದಿಟ್ಟರೆ ಕೊಚ್ಚಿಕೊಂಡು ಹೋಗುವ ವಿಚಾರವಲ್ಲ. ಇದು ಹಲವೊಂದು ಸಿದ್ಧಾಂತಗಳಲ್ಲಿ ಇದ್ದ ನಮ್ಮ ಅಚಲ ಅಂತರಿಕ ವಿಶ್ವಾಸ. ನಾವು ನಮ್ಮ ಶಕ್ತಿ ಸರ್ವಸ್ವದಿಂದ ಯಾವದೊಂದು ಸತ್ಯದಲ್ಲಿ 'ಇದು ಸತ್ಯ' ಎಂದು ಇಟ್ಟ ಅಚಲ ವಿಶ್ವಾಸವೆ ಶ್ರದ್ಧೆ. ನಮ್ಮ ಭಾವನೆ, ನಮ್ಮ ಬುದ್ಧಿಶಕ್ತಿ, ನಮ್ಮ ನಿರೀಕ್ಷಣೆ ಪರೀಕ್ಷಣ ಶಕ್ತಿ ಇವೆಲ್ಲವನ್ನು ಮನದಂದು ಒಂದು ಸತ್ಯವನ್ನು ಗ್ರಹಿಸಿ ಅದರಲ್ಲಿ ಪೂರ್ಣ ನಂಬುಗೆಯನ್ನಿಟ್ಟೆವೆಂದರೆ ಆ ನಂಬುಗೆ ಶ್ರದ್ಧೆಯೆನಿಸುವದು.

* * *

ಪ್ರತಿಯೊಬ್ಬ ವಿಚಾರವಂತನು ಹಲವೊಂದು ಪ್ರಮೇಯಗಳಲ್ಲಿ ಶ್ರದ್ಧೆಯನ್ನಿಟ್ಟು ತನ್ನ ಜೀವನವನ್ನು ಸಾಗಿಸುವನು. ಇಲ್ಲದೆ ಹೋದಲ್ಲಿ ಮುಂದರಿಯಲು ಆಸ್ಪದವೇ ಇರಲರಿಯದು ಆ ಶ್ರದ್ಧೆ ಎಷ್ಟು ಶುದ್ಧವೊ ಎಷ್ಟು ದೃಢವೊ ಎಷ್ಟು ವ್ಯಾಪಕವೊ ಅಷ್ಟು ಅವನ ಜೀವನವೂ ಶ್ರೇಷ್ಠವೂ ವಿಕಾಸಪೂರ್ಣವೂ ಆಗಬಲ್ಲದು.

ಡಾ. ಜಾನ್ ಮಥಾಯಿಯರು

ಹೋದ ೨೮-೪-೪೮ನೆ ದಿನ ಹುಬ್ಬಳ್ಳಿ ಗದಗುಗಳಿಗೆ ಭೆಟ್ಟಿಕೊಟ್ಟ ಕೇಂದ್ರ ಸರಕಾರದ ರೇಲ್ವೆ ಮಂತ್ರಿಗಳಾದ ಡಾ. ಮಥಾಯಿಯವರು ಇಷ್ಟೊಂದು ಸಾದಾ ವ್ಯಕ್ತಿಯಾಗಿರಬಹುದೆಂದು ನಾನು ಭಾವಿಸಿರಲಿಲ್ಲ. ಅವರ ಆಚಾರವನ್ನು ಕೈಕೊಳ್ಳುವ ಮೊದಲು 'ನೀವು ಎಲ್ಲಿಲ್ಲಿ ಹೋಗಲಿರುವಿರಿ' ಎಂದು ಕೇಳಿದೆನು 'ಪುಣೆಯಿಂದ ಗುಂತಕಲ್ ಮಾರ್ಗವಾಗಿ ಮದ್ರಾಸಿಗೆ ಹೋಗುವೆ' ಎಂದರು. 'ಇಂದೇಕೆ ನಮ್ಮ ಮೀಟರ ಗೇಜ ಅನಾಥವೇನು' ಎಂದು ನಾನು ಕೇಳಲು, 'ಒಳ್ಳೇದು ವಿಚಾರ ಮಾಡುತ್ತೇನೆ' ಎಂದು ಅಂದರು. ಮುಂದೆ ನಾಲ್ಕೆಂಟು ದಿನಗಳ ನಂತರ ಮತ್ತೊಮ್ಮೆ ಭೆಟ್ಟಿಯಾದಾಗ 'ಹುಬ್ಬಳ್ಳಿಯು ದೊಡ್ಡ ಕೇಂದ್ರ, ರೇಲ್ವೆ ಕೇಂದ್ರ, ಅಲ್ಲಿ ರೇಲ್ವೆ ಕಾರಖಾನೆಯಿದೆ ಅದನ್ನು ಸಂದರ್ಶಿಸುವದು ಅವಶ್ಯ' ಎಂದು ಮುಂತಾಗಿ ಹೇಳಲು ಒಪ್ಪಿಕೊಂಡು ಬಿಟ್ಟರು. ದೊಡ್ಡ ಉದ್ಯೋಗಗಳಲ್ಲಿ ಅಭಿರುಚಿಯುಳ್ಳವರಿದ್ದರೂ ಸಣ್ಣ ಕೈಗಾರಿಕೆಗಳ ಬಗ್ಗೆಯೂ ಅವರ ಪ್ರೇಮ ಈಗ ಹೆಚ್ಚುತ್ತಲಿದೆ. ಆದುದರಿಂದ ಗದುಗಿನ ಪ್ರದರ್ಶನದ ಉದ್ಘಾಟನಕ್ಕೂ ಅವರು ಒಪ್ಪಿದರು.

* * *

ಕೇಂದ್ರ ಸರಕಾರದ ಮಂತ್ರಿಗಳು ಇತ್ತ ಕರ್ನಾಟಕಕ್ಕೆ ಬಂದುದು ಇದು ಮೊದಲನೆ ಸಾರೆ ಎಂಬ ಮಾತು ನನಗೂ ಗೊತ್ತಿರಲಿಲ್ಲ. ಆ ಮಾತನ್ನು ಅವರಿಗೆ ಹೇಳಲು 'ಹಾಗಾದರೆ ಈ ಪ್ರಾಂತದತ್ತ ಬಹಳ ದುರ್ಲಕ್ಷವಾದುದು ತೀರ ನಿಜ' ಎಂಬ ಮಾತನ್ನಾಡಿದರು! ಅವರು ಸ್ವತಃ ಮಲಯಾಳಿಗಳು ಅಂದರೆ ಕೇರಳದವರು. ಆದರೂ ಈ ಭಾಗವನ್ನು ಎಂದೂ ಸಂದರ್ಶಿಸಿರಲಿಲ್ಲ. ಅವರ ಜೀವನದಲ್ಲಿ ವಿವಿಧ ಪರಿವರ್ತನೆಗಳಾದುವುಂಟು ಮೊದಲು ವಕೀಲಿ ವೃತ್ತಿ, ಬಳಿಕ ಸಹಕಾರಿ ಸಂಘಗಳ ಸಂಘಟಕರಾದುದು, ಅನಂತರ ವ್ಯಾಪಾರ, ನಂತರ ಟಾಟಾ ಅವರಲ್ಲಿ ಉದ್ಯೋಗಗಳ ಮೇಲ್ವಿಚಾರಕರು ಆದುದು ಹೀಗೆ ಅವರು ಒಳ್ಳೆ ಅನುಭವಿಕರು. ಇಷ್ಟು ದೊಡ್ಡ ಕೆಲಸವನ್ನು ಮಾಡುತ್ತಿದ್ದರೂ ಅವರವೃತ್ತಿ ಬಹಳ ಸಾದಾ ಇರುವದು. ರಾತ್ರಿಯ ಬಟ್ಟೆಗಳನ್ನು ಹಾಕಿಕೊಂಡು ಮಲಗಿದವರು ಹುಬ್ಬಳ್ಳಿಯ ಹಮಾಲರು ಕಾಣಬೇಕೆನ್ನುವರು ಎಂದು ಹೇಳಿದೊಡನೆ ಅವರು ಹೊರಗೆ ಬಂದು ಅವರ ಹೂಮಾಲೆಗಳನ್ನು ಸ್ವೀಕರಿಸಿದರು.

* * *

ಇಲ್ಲಿ ಮುಖ್ಯವಾಗಿ ರೇಲ್ವೆ ಕಾರಖಾನೆಯನ್ನು ಅವರು ಎರಡು ತಾಸು ನೋಡಿಕೊಂಡರು. ಯಂತ್ರ ಸಾಮಗ್ರಿ ಹಾಗೂ ಶಕ್ತಿ (ಪಾವರ) ಇವೆರಡೂ ಇಲ್ಲಿ ಕಡಿಮೆ ಎಂಬುದು ಅವರಿಗೆ ಹೊಳೆದಿರಲಿಕ್ಕೆ ಸಾಕು. ಜೋಗ ಜಲಶಕ್ತಿಯನ್ನು ಇತ್ತ ಬರಮಾಡಿಕೊಂಡು ೨೦೦೦ ದಷ್ಟು ಕಿಲೋವ್ಯಾಟ ನೀವು ಉಪಯೋಗಿಸಿದರೆ ಕಾರಖಾನೆ ಬೇಕಾದಷ್ಟು ಊರ್ಜಿತಾವಸ್ಥೆಗೆ ಬಂದು ಅದರ ಉತ್ಪಾದನ ಶಕ್ತಿ ಬೆಳೆಯಬಲ್ಲದು ಎಂದು ನಾನು ಸೂಚಿಸಲಾಗಿ, 'ಇದು ಹೊಸ ಸೂಚನೆ ವಿಚಾರಿಸುತ್ತೇನೆ' ಎಂದು ಅಂದಿದ್ದಾರೆ ಇಲ್ಲಿಯ ರೇಲ್ವೆ ಅಡಚಣಿಗಳಂತೂ ಅವರಿಗೆ ಪ್ರತ್ಯಕ್ಷವೆ ಆಗಿವೆ. ಪಣಿಕ್ ಸಂಘದವರು ಅವರೆದುರಿಗೆ ಇಲ್ಲಿಯ ಅಡಚಣಿಗಳನ್ನು ಚನ್ನಾಗಿ ಮಂಡಿಸಿದರು. ಎಮ್. ಎಲ್. ಎ., ಎಮ್ ಸೀ ಏ. ರವರೆಲ್ಲರೂ ಅವುಗಳನ್ನು ವಿಧವಿಧದಿಂದ ಹೇಳಿದರು.

* * *

ಹರಿಹರದಲ್ಲಿ ಕಿರ್ಲೋಸ್ಕರ ಕಂಪನಿಯಲ್ಲಿ ಆಗುತಿರುವ ಯಂತ್ರ ಸಾಮುಗ್ರಿಯನ್ನು ನೋಡಿ ಅವರಿಗೆ ಆ ಬಗ್ಗೆ ಕುತೂಹಲವುಂಟಾದುದು ಸ್ವಾಭಾವಿಕ. ಸದ್ಯಕ್ಕೆ ಈ ಮಟ್ಟಿನ ಕಾರಖಾನೆಗಳು ಹಿಂದುಸ್ತಾನದಲ್ಲಿ ಎರಡೇ ಇರುವವು. ಪ್ರತಿಯೊಂದು ರೇಲ್ವೆ ಕಾರಖಾನೆಗೆ ಹಾಗೂ ಪ್ರತಿಯೊಂದು ರಿಪೇರಿ ಕೆಲಸಕ್ಕೆ ಯಂತ್ರ ಸಾಮುಗ್ರಿ (ಮಶೀನ ಟೂಲ್ಸ) ಅತ್ಯವಶ್ಯ. ಅವು ಹಿಂದುಸ್ತಾನದಲ್ಲಿಯೇ ಬಹಳ ದೊಡ್ಡ ಪ್ರಮಾಣದಲ್ಲಿ ಆಗುವದು ಅವಶ್ಯ. ಇಲ್ಲದಿದ್ದರೆ ನಾವು ಪರದೇಶಗಳನ್ನು ಅವಲಂಬಿಸಿ ಕೂಡಬೇಕಾಗುವದು. ಇಂಜಿನು ಮುಂತಾದವುಗಳ ತರುವಾಯ ಈ ಉದ್ಯೋಗವು ಅತ್ಯಂತ ಮಹತ್ವದ್ದು. ಅದರ ವಿಕಾಸದ ಬಗ್ಗೆ ಹಾಗೂ ಇಂಥ ಇನ್ನೂ ಅನೇಕ ಕಾರಖಾನೆಗಳು ತೆರೆಯುವಂತೆ ಕೇಂದ್ರ ಸರಕಾರದವರು ತಮ್ಮ ಧೋರಣೆಯನ್ನಿಡುವದು ಅಪರಿಹಾರ್ಯವು.

* * *

ಪ್ರಾಂತೀಕರಣ, ಏಕೀಕರಣ ಇವುಗಳ ಬಗ್ಗೆ ಡಾ. ಮಥಾಯಿಯವರು ಪೂರ್ಣ ಸಹಾನುಭೂತಿಯುಳ್ಳವರಿರುವರು ಅವರಿಗೆ ಆ ಪ್ರಶ್ನೆ ಮನಸಿಯದೇ ಎಂದೆನಿಸುವದು. ಯಾಕಂದರೆ ಕೇರಳಕ್ಕೂ ಅದು ಜೀವಜೀವಾಳದ ಪ್ರಶ್ನೆ. ಸ್ಥಾನಿಕ, ಪ್ರಾಂತೀಯ ಅಭಿಮಾನಗಳನ್ನು ಜಾಗ್ರತಗೊಳಿಸಿ ತನ್ಮೂಲಕ ಹೆಚ್ಚು ಉತ್ಸಾಹದಿಂದ ಕೆಲಸವಾಗುವಂತೆ ಮಾಡಿ ರಾಷ್ಟ್ರದ ಹಿತವನ್ನು ಸಾಧಿಸುವದು ಅವಶ್ಯ. ಎಂದು ಅವರ ಅಭಿಪ್ರಾಯವಿರುವದು.

* * *

ನಂಸು ಮುಂತಾದವುಗಳ ತೊಂದರೆ ಇಲ್ಲದೆ ಜಪಾನಿನಂತೆ ಸಣ್ಣ ಉದ್ಯೋಗಗಳಿಗೆ, ಕೈಗಾರಿಕೆಗಳಿಗೆ, ಪ್ರೋತ್ಸಾಹ ಕೊಟ್ಟು ಉತ್ಪಾದನವನ್ನು ಹೆಚ್ಚಿಸುವದು ಶಕ್ಯ ಹಾಗೂ ಅವಶ್ಯ ಎಂದು ಅವರ ಅಭಿಪ್ರಾಯ ಇದ್ದಿತು.

ಅಧರ್ಮ ಹಾಗೂ ಗಾಯತ್ರಿ ಜಪ

ಜಗತ್ತಿನಲ್ಲಿ ಬೆಳೆದು ನಿಂತ ಅಧರ್ಮವನ್ನು ತೊಡೆಯಲು ಗಾಯತ್ರೀ ಜಪವನ್ನು ಕೋಟಿಗಟ್ಟಲೆ ಕೈಕೊಳ್ಳಬೇಕೆಂದು ಓರ್ವ ಶ್ರದ್ಧಾವಂತರು ನನಗೆ ಬರೆದಿರುವರು ತಮ್ಮ ವಿಶ್ವಾಸಕ್ಕನುಸರಿಸಿ ಅವರು ಬರೆದುದು ಯೋಗ್ಯವೆ ಸೈ. ಗಾಯತ್ರಿ ಜಪವಿರಲಿ, ಇನ್ನಾವದೆ ಜಪವಿರಲಿ, ಅದನ್ನು ಪ್ರಕ್ರಿಯೆಯಂತೆ ಶ್ರದ್ಧಾಪೂರ್ವಕವಾಗಿ ಮಾಡಿದರೆ ಶಕ್ತಿ ಸಂಗ್ರಹದ ಒಂದು ಶ್ರೇಯಸ್ಕರ ಸಾಧನವೆಂದು ಅದು ಉಪಯುಕ್ತವಾಗಬಹುದು. ಆದರೆ ಅದನ್ನು ಕೇವಲ ಯಾಂತ್ರಿಕವಾಗಿ ಅನೇಕರಿಗೆ ಮಾಡಹೇಳಿ ಅದರ ಲೆಕ್ಕವನ್ನಿಟ್ಟು, "ಇಷ್ಟು ಕೋಟಿ ಜಪವಾಯಿತು" ಎಂದು ಮನಸಿಗೆ ಸಮಾಧಾನ ಹೇಳುವದರಲ್ಲಿ ಏನೂ ತಾತ್ಪರ್ಯವಿಲ್ಲ ಎಂದು ನನ್ನ ಭಾವನೆ. ಕಾರ್ಯಕಾರಣಮೀಮಾಂಸೆ ಮಾಡಿ ಅಧರ್ಮಕ್ಕೆ ಪ್ರತಿಯಾಗಿ ಧರ್ಮವನ್ನು ಮಾಡುತ್ತ ಹೋಗುವದೆ ಅಧರ್ಮದ ನಿರಾಕರಣಕ್ಕೆ ತಕ್ಕ ಉಪಾಯವೆಂದು ನನ್ನ ಭಾವನೆ. ಜಪತಪಮುಂತಾದವು ವೈಯಕ್ತಿಕ ಅಂತರಿಕ ಶಕ್ತಿ ಸಂಗ್ರಹದ ಸಾಧನಗಳು. ಯಮನಿಯಮಗಳನ್ನು ಪರಿಪಾಲಿಸುವವರೆ ಅವುಗಳನ್ನು ಮಾಡಿದರೆ ಅವುಗಳಿಂದ ಸಾತ್ವಿಕ ಶಕ್ತಿಸಂಗ್ರಹವಾಗಬಲ್ಲದು ಇಲ್ಲದೆ ಹೋದರೆ ಶಕ್ತಿಸಂಗ್ರಹದ ಉಪಯೋಗವು ದುಷ್ಕೃತ್ಯಗಳಿಗಾಗಿ ಆಗುವ ಸಂಭವವೇ ಬಹಳ ಈ ಎಲ್ಲ ವಿಷಯಗಳ ವಿಚಾರವು ಈ ಸಂದರ್ಭದಲ್ಲಿ ಅವಶ್ಯ.

ವ್ಯಾಪಾರ ಪ್ರಪಂಚ

ತಾ. ೫

ಮುಂಬಯಿ ಶೇರಪೇಟೆ

ಕಳೆದ ವಾರ ಶೇರಪೇಟೆಯಲ್ಲಿ ಅನೇಕ ಕಾರಣಗಳಿಂದ ತೇಜಿಯಾಗಿದ್ದ ಬೆಲೆಗಳು ಈ ವಾರ ಅಷ್ಟು ಗಟ್ಟಿಯಾಗಿ ನಿಲ್ಲಲಿಲ್ಲ. ಬಟ್ಟೆಯ ಮೇಲಿನ ಬೆಲೆ ಮುದ್ರಣದ ನಿಯಮ ತಳ್ಳಿಹಾಕಲ್ಪಟ್ಟದರಿಂದಲೂ ಉದ್ಯಮಗಳ ರಾಷ್ಟ್ರೀಕರಣ ಸದ್ಯಕ್ಕೆ ಉಭವಾಯಕವಲ್ಲವೆಂದು ಮುಖ್ಯ ಮಂತ್ರಿ ಜವಾಹರಲಾಲರು ಅಭಿಪ್ರಾಯಪಟ್ಟದ್ದರಿಂದಲೂ ಜವಳಿ ಹಾಗು ಇತರ ಕಂಪನಿಗಳ ಪಾಲಗಳಿಗೆ ಒಳ್ಳೇ ತೇಜಿಯಿದ್ದರೂ ಬಟ್ಟೆಯ ಬೆಲೆನಿಯಂತ್ರಣ ಹೋದಂದಿನಿಂದ ಬೆಲೆಗಳು ಸಿಕ್ಕಾಬಟ್ಟೆ ಏರಿದ್ದರ ಫಲವಾಗಿ ಸರಕಾರ ಮತ್ತೆ ನಿಯಂತ್ರಣ ಹೇರಬಹುದೆಂಬ ಭೀತಿಯೂ ಅಂತರ್ ರಾಷ್ಟ್ರೀಯ ಪರಿಸ್ಥಿತಿ ತೀರ ಹದಗೆಡುತಿರುವದೂ ತೇಜಿ ವ್ಯಾಪಾರಸ್ಥರಿಗೆ ಅನುಕೂಲವಾಗಿಲ್ಲ. ಆದರೂ ಬೆಲೆಗಳು ವಿಶೇಷವೇನೂ ತಗ್ಗಿರದೆ ಸದ್ಯದ ಬೆಲೆಯಲ್ಲಿ ಕೊಂಡಿಟ್ಟರೆ ಹಾನಿಯಾಗದೆಂಬ ನಂಬಿಕೆ ಬಲ್ಲವರಲ್ಲಿದೆಯಂತೆ. ಇಂದಿನ ಕೊನೆಯ ಬೆಲೆಗಳು ಇಂತಿದ್ದವು:

ಜವಳಿ

ಅಹಮ್ಮದಾಬಾದ ಅಡ್ವಾನ್ಸ	೩೮೫-೦-೦
ಬಾಂಬೇ ಡಾಯಿಂಗ	೧೧೧೫-೮-೦
ಸೆಂಚುರಿ	೫೧೫-೦-೦
ಫೀನಿಕ್ಸ	೪೫೦-೦-೦
ಇಂಡಿಯನ್ ಬ್ಲೀಚಿಂಗ	೬೬೭-೦-೦

ಇತರ

ಬೇಲಾಪುರ ಸಕ್ಕರೆ	೩೬೦-೦-೦
ಬಾಂಬೇ ಬರ್ಮಾ	೪೨೩-೧೨-೦
ಬಾಂಬೇ ಸ್ಟೀಮ	೫೩೭-೮-೦
ಟಾಟಾ ಸ್ಟೀಲ ಡೆಫರ್ಡ್ಸ	೧೬೧೦-೮-೦
,, ಆರ್ಡಿನರಿ	೩೨೪-೦-೦
ಅಸೋ. ಸಿಮೆಂಟ್ಸ	೧೭೦-೪-೦
ಇಂಡಿಯನ್ ಅಯರ್ನ	೨೯-೬-೦
ಸೆಂಟ್ರಲ ಬ್ಯಾಂಕ	೮೫-೮-೦
ಇಂಪೀರಿಯಲ (ಪೂರ್ಣ)	೨೦೦೨-೮-೦
,, (ಅಂಶ)	೪೯೩-೧೨-೦
ರಿಝರ್ವ	೧೬೧-೪-೦

ಚಿನ್ನ ಬೆಳ್ಳಿ

ಚಿನಿವಾರ ಪೇಟೆಯಲ್ಲಿ ಮಾತ್ರ ಬೆಲೆಗಳು ಹಿಂದೆಂದಿಗಿಂತಲೂ ಏರುತ್ತಿವೆ. ಹೊರಗಿಂದ ಚಿನ್ನ ತರಿಸಲು ಅವಕಾಶವೇ ಇಲ್ಲದ್ದು, ಅಮೇರಿಕೆಯ ಯುದ್ಧಸಿದ್ಧತೆ ಮೊದಲಾದ್ದು ಚಿನ್ನದ ಪೇಟೆಯ ಮೇಲೆ ವಿಶೇಷ ಪರಿಣಾಮಮಾಡಿದೆ. ಲಾಭಬಡಕರು ಪೇಟೆಗೆ ಬಂದ ಚಿನ್ನವನ್ನೆಲ್ಲ ಕೊಂಡು ಇಡುತಿದ್ದಾರೆ ಹೈದರಾಬಾದ ಪರಿಸ್ಥಿತಿಯೂ ಈ ಏರ್ಪಟ್ಟಿಗೆ ಪುಟ ಕೊಟ್ಟಿದೆ ಚಿನ್ನ ಬೆಳ್ಳಿಗಳ ದರ ಇಂದು ವ್ಯಾಪಾರ ಮುಗಿಯುವಾಗ ಹೀಗಿದ್ದವು :

ಕಯಾರಿ	ಚಿನ್ನ	೧೦೭-೭-೦
ವಾಯದಾ	,,	೧೦೭-೧೦-೦
ಕಯಾರಿ	ಬೆಳ್ಳಿ	೧೭೬-೨-೦
ವಾಯದಾ	,,	೧೭೬-೨-೦

ಅರಳೆ ಪೇಟೆ

ತಾ. ೬

ಹೊರಗಿನ ಅರಳೆ ಬರುವ ಸಂಭವವಿಲ್ಲವೆಂದೂ ಈ ವರ್ಷದ ಪೀಕು ಕಡಿಮೆಯೆಂದೂ ನಂಬಿ ಅರಳೆಯ ವ್ಯಾಪಾರಿಗಳು ಬೆಲೆಯನ್ನು ಏರಿಸಿದ್ದರಿಂದ ಕಳೆದ ವಾರ ೭೨೮ ರೂಪಾಯಿಗೆ ಮುಟ್ಟಿತ್ತು. ಆದರೆ ಅನಂತರ ಪಾಕಿಸ್ತಾನದ ಅರಳೆಗೆ ಇಲ್ಲಿ ಅಪ್ರತಿಬಂಧ ಪ್ರವೇಶ ದೊರೆಯುತ್ತದೆ ತಿಳಿದದ್ದರಿಂದ ಬೆಲೆಗಳು ಇಳಿದವು ಇಂದು ದಿನಾಂತ್ಯದಲ್ಲಿ ಬೆಲೆಗಳು ಹೀಗಿದ್ದವು:

ಮೇ	೬೯೮-೦-೦
ಜುಲೈ	೭೦೫-೮-೦
ಸಪ್ಟಂಬರ	೭೨೨-೦-೦

ಎಣ್ಣೆ ಕಾಳುಗಳು

ಕೆಂಗಾ	೦೬೩-೦-೦
ಹೊಸ ಬೆಳೆ ಕೆಂಗಾ	೦೬೫-೦-೦
ಅಗಸಿ	೨೭-೦-೦
ಅಗಸಿ ಎಣ್ಣೆ	೦೬-೪-೦

ಕೊಲ್ಲಾಪುರ

(ಗುಜರಾತ) ಬೆಲ್ಲ ರೂ ೩೫-೨-೦ ರಿಂದ ೪೪ ಕರ್ನಾಟಕ ಬೆಲ್ಲ ಮತ್ತು ಕೆಂಗಾದ ಧಾರಣೆಯಾಗಿಲ್ಲ.

ಶಿವಮೊಗ್ಗ

ತಾ. ೫

ಶಿವಮೊಗ್ಗ ಅಡಿಕೆಪೇಟೆಯ ಧಾರಣೆ ಮಣ ೧ ಕ್ಕೆ ಈರೀತಿ ಇದೆ—

ದೇಶಾವರ ನಂ. ೧ ಮಣ ೧ ಕ್ಕೆ	೩೩-೩೪
,, ,, ೨	೩೦-೩೨
,, ,, ೩	೨೬-೨೯
ಬೆಟ್ಟೆ ವಂತಿ	೨೦-೨೨
ರಾಜಾಅಲವು	೩೦-೩೩
ಕೊರಸಾಲು	೨೬-೨೮
ಬೆಟ್ಟೆ	೧೭-೧೮
ಸೀಗೆಕಾಯಿ	೭॥
ಮೆಣಸು	

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ	೧	೪೯೦-೪೯೨
,,	೨	೪೮೦-೪೮೨
,,	೩	೪೭೦-೪೭೨
ಅಪಲಂಡ ಹತ್ತಿ	೧	೪೧೫-೪೪೦
ಜಿನ		೩೨೦-೩೩೦
ಅ. ದಬಲರೋಲ		೩೦೦-೩೦೫
ಜ. ಹತ್ತಿ ಕಾಳು	೯೧.	ಖಂಡು
ದ. ,,	೯	,,

ಕರ್ಮವೀರ

ಶ್ರೀ[illegible] ವಿಕ್ರಮ ವರ್ಷ [illegible]
ವೈ. ಶು. ೧

ಆರೋಗ್ಯ ಸಂವರ್ಧನೆ

ಪರರಾಜ್ಯದಲ್ಲಿ ಬಿದ್ದಿದ್ದ ಭಾರತದ ಉಳಿದ ಅನೇಕ ವಿಷಯಗಳು ಅಲಕ್ಷಿಸಲ್ಪಟ್ಟಂತೆ ಆರೋಗ್ಯ ಸಂವರ್ಧನೆಯೂ ಅಲಕ್ಷಿಸಲ್ಪಟ್ಟಿದೆಂದು ಹೇಳಿದರೆ ತಪ್ಪಾಗದು. ಅಂತೆಯೇ ಭಾರತದಲ್ಲಿ ವಿವಿಧ ರೋಗಗಳು ತಾಂಡವವಾಡುತಿವೆ. ಈಗ ಭಾರತವು ಸ್ವತಂತ್ರವಾಗಿ ಸ್ವತಂತ್ರ ರಾಷ್ಟ್ರೀಯ ಸರಕಾರವು ಅಧಿಕಾರವನ್ನು ವಹಿಸಿಕೊಂಡಿದ್ದರಿಂದ ಭಾರತೀಯರ ಆರೋಗ್ಯ ಭಾಗ್ಯವನ್ನು ಹೆಚ್ಚಿಸುವತ್ತ ಗಮನಹರಿಸಲಿದೆ. ಭೋರ ಸಮಿತಿಯವರು ಸೂಚಿಸಿದ ಉಪಾಯಗಳನ್ನು ಕಾರ್ಯರೂಪದಲ್ಲಿ ತರುವ ಸಿದ್ಧತೆಯೂ ಕಂಡು ಬರುತ್ತದೆ. ಹಿಂದುಸ್ತಾನ ಸರಕಾರದ ಆರೋಗ್ಯ ಖಾತೆಯ ಡಾಯರೆಕ್ಟರ ಜನರಲ್‌ರಾದ ಡಾ. ಜೀವರಾಜ ಮೆಹ್ತಾ ಇವರು ಮೊನ್ನೆ ಎರಡನೆಯ ತಾರೀಕಿನ ದಿನ ಆಕಾಶವಾಣಿ ಭಾಷಣ ಮಾಡಿ ಈ ವಿಷಯವನ್ನು ವಿವೇಚಿಸಿದ್ದಾರೆ.

ಮಾನವರ ಸುತ್ತಲಿನ ಪರಿಸ್ಥಿತಿಯನ್ನು ನಿಯಂತ್ರಿಸುವಲ್ಲಿಯೆ ಅವರ ಆರೋಗ್ಯ ರಕ್ಷಣೆಯ ಮೂಲವಿದೆ ಎಂದು ಅವರ ಅಭಿಪ್ರಾಯ. ಇತರ ಪ್ರಾಣಿಗಳಿಗಿಂತ ಮಾನವನಿಗೆ ಈ ಪರಿಸ್ಥಿತಿಯನ್ನು ಹಿಡಿತದಲ್ಲಿಟ್ಟುಕೊಳ್ಳುವ ಅನುಕೂಲತೆಗಳು ಬೇಕಾದಷ್ಟಿದ್ದರೂ ಸರಕಾರ ಮತ್ತು ಸಾರ್ವಜನಿಕರು ಅತ್ತ ಗಮನಿಸದಿದ್ದುದರಿಂದ ಬಗೆಬಗೆಯ ರೋಗಗಳಿಗೆ ಬಲಿಯಾಗಬೇಕಾಗುತ್ತದೆ. ಆಹಾರ, ವಸತಿ, ಬಟ್ಟೆ, ಸ್ವಚ್ಛತೆ ಮೊದಲಾದ ವಿಷಯಗಳಲ್ಲಿ ಮಾನವನು ತನ್ನ ಶಾಸ್ತ್ರೀಯ ಜ್ಞಾನವನ್ನು ಉಪಯೋಗಿಸಿ ಬೇಕಾದಷ್ಟು ಸುಧಾರಣೆ ಮಾಡಿಕೊಂಡು ಆರೋಗ್ಯವನ್ನು ರಕ್ಷಿಸಿಕೊಳ್ಳಬಹುದಾಗಿದೆ. ಇದರಿಂದ ಬಗೆ ಬಗೆಯ ರೋಗಗಳಿಗೆ ಕಾರಣವಾವುದೆಂಬುದನ್ನು ಹುಡುಕಿ ಅವು ಸಮೂಲ ಇಲ್ಲದಂತೆ ಮಾಡುವದೂ ಅವನಿಗೆ ಶಕ್ಯವಿದೆ. ಉಳಿದ ಪ್ರಾಣಿಗಳಿಗೆ ಇದು ಶಕ್ಯವಿಲ್ಲ. ಮೇಲೆ ಹೇಳಿದಂತೆ ಸುತ್ತಲಿನ ಪರಿಸ್ಥಿತಿ ಆರೋಗ್ಯಕರವಿಲ್ಲದ್ದರಿಂದ ಮಾನವನು ಹೆಚ್ಚಾಗಿ ಬಳಲಬೇಕಾಗುತ್ತದೆ. ಅದರಲ್ಲಿಯೂ ಹಳ್ಳಿಗಳಲ್ಲಿ ಅನುಕೂಲತೆಗಳು ಹೆಚ್ಚಿಗೆ ಇಲ್ಲದ್ದರಿಂದ ಅಲ್ಲಿ ಬಗೆ ಬಗೆಯ ಪಿಡುಗುಗಳು ಹೆಚ್ಚಾಗುವವು. ಅದರಲ್ಲಿಯೂ ನಮ್ಮ ಹಳ್ಳಿಗರು ಹೆಚ್ಚಿಗೆ ಮಲೇರಿಯದಿಂದ ಬಳಲುವರು. ಅದರೆ ಪನಾಮಾದಲ್ಲಿ ಮಲೇರಿಯವನ್ನು ಸಂಪೂರ್ಣವಾಗಿ ಇಲ್ಲವಂತೆ ಮಾಡಿರುದನ್ನು ನೋಡಿದರೆ ಭಾರತೀಯ ಹಳ್ಳಿಗಳಲ್ಲಿಯೂ ಮಲೇರಿಯ ಇಲ್ಲದಂತೆ ಮಾಡುವದು ಶಕ್ಯವಿದೆಯೆಂದೆನಿಸದಿರಲಾರದು. ಹಳ್ಳಿಗಳಲ್ಲಿ ಮಲೇರಿಯ ಹೆಚ್ಚಾಗಿ ಮಳೆಗಾಲದಲ್ಲಿಯೆ ಹಬ್ಬುವುದರಿಂದ ಒಕ್ಕಲತನಕ್ಕೆ ಅರ್ಥಾತ್ ಬೆಳೆ ಬೆಳೆಯಲು ಬಹಳ ಅಡ್ಡಿಯುಂಟಾಗುವದು. ಹಿಂದುಸ್ತಾನದಲ್ಲಿ ನೂರಕ್ಕೆ ಎಂಭತ್ತೈದರಷ್ಟು ಹಳ್ಳಿಗರಿದ್ದು ಅವರಲ್ಲಿ ಬಹುಸಂಖ್ಯಾಕರು ಒಕ್ಕಲತನವನ್ನೇ ಅವಲಂಬಿಸಿರುವರು. ಅಲ್ಲಿನ ಜನರೇ ಮಲೇರಿಯದಿಂದ ಬಳಲಹತ್ತಿದರೆ ಒಕ್ಕಲತನವೆಂತು ಯಶಸ್ವಿಯಾಗಿ ಸಾಗಬೇಕು, ಉತ್ಪಾದನೆ ಎಂತು ಹೆಚ್ಚಾಗಬೇಕು, ಅವರ ಆರ್ಥಿಕ ಪರಿಸ್ಥಿತಿ ಪ್ರಗತಿ ಹೊಂದಬೇಕೆಂತು?

ಈ ರೀತಿ ಮಲೇರಿಯವಲ್ಲದೆ ಅಸಮಾಧಾನಕರ ಆರೋಗ್ಯ ಪರಿಸ್ಥಿತಿಯ ಮೂಲಕ ಬೇರೆ ಬೇರೆ ರೋಗಗಳೂ ನಮ್ಮ ಹಳ್ಳಿ ಪಟ್ಟಣಗಳಲ್ಲಿ ಪಸರಿಸಿವೆ. ಮಂಉಬಧ್ಧಕ, ಹಾರೀಬೇನೆ, ಅಮಾಂಶ, ಮತ್ತು ವಿಷಮಜ್ವರದಂಥ ಮಲಕೋಶ ಸಂಬಂಧದ ರೋಗ ತಲೆದೂರುತ್ತಿವೆ. ಹಳ್ಳಿಪಟ್ಟಣಗಳ ಸ್ವಚ್ಛತೆಯನ್ನು ಸುಧಾರಿಸುವ ಉಪಾಯಗಳನ್ನು ಯೋಜಿಸಿದ್ದಾದರೆ ಈ ರೋಗಗಳು ನೂರಕ್ಕೆ ಐವತ್ತರಷ್ಟು ಕಡಿಮೆಯಾಗುವವೆಂದು ಡಾ. ಜೀವರಾಜರ ಅಭಿಪ್ರಾಯ.

ಆದರೆ ಇದು ಸಾಧ್ಯವಾಗಬೇಕಾದರೆ ನಿಶ್ಚಿತ ಯೋಜನೆ ಮಾಡಿಕೊಂಡು ಅದನ್ನು ಕಾರ್ಯರೂಪದಲ್ಲಿ ತರುವದು ಅವಶ್ಯ. ಹಳ್ಳಿಗಳ ರಚನೆ, ವಸತಿ, ನೀರಿನ ಪೂರೈಕೆ, ಗಟಾರು ಮೊದಲಾದವುಗಳ ಯೋಜನೆ, ರೋಗಗಳನ್ನು ತರುವ ಹುಳಹುಪ್ಪಡಿ, ಇಲಿ, ನೊಣ ಮೊದಲಾದವುಗಳ ನಿಯಂತ್ರಣ, ಜನತೆಯ ಆರೋಗ್ಯಕ್ಕೆ ಘಾತಕ ವಾದಂತಹ ಉದ್ಯೋಗ ಧಂದೆಗಳನ್ನು ನಿಯಂತ್ರಿಸುವದು ಮೊದಲಾದವುಗಳ ಮೂಲಕ ಹಳ್ಳಿ ನಗರಗಳ ಆರೋಗ್ಯವನ್ನು ಸುಧಾರಿಸಬಹುದೆಂದು ಭೋರ ಸಮಿತಿಯು ಸೂಚಿಸಿದೆ.


ಭೋರ ಸಮಿತಿಯ ಸೂಚನೆಗಳನ್ನು ಪತ್ತೆ ಹಚ್ಚಿ ಪ್ರಾಂತೀಯ ಸರಕಾರಗಳು ಇಟ್ಟುಕೊಂಡ ಆರೋಗ್ಯ ಸುಧಾರಣೆಯ ಪಂಚವಾರ್ಷಿಕ ಯೋಜನೆಗಳನ್ನು ಪರ್ಯಾಲೋಚಿಸಿ ಸೂಚನೆಗಳನ್ನು ಮಾಡಲು ಸಮಿತಿಯೊಂದು ನೇಮಿಸಲ್ಪಟ್ಟಿದೆ. ಈ ಸಮಿತಿಯವರು ಸೂಚಿಸಬಹುದಾದ ಉಪಾಯಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಹಣವು ಹೆಚ್ಚಿಗೆ ಬೇಕಾಗುವದರಿಂದ ಅವಶ್ಯಕ ಹಣವನ್ನೆಂತು ಪಡೆಯಬೇಕೆಂಬುವದನ್ನೂ ಅವರು ಸೂಚಿಸಬೇಕಾಗಿದೆ.

ಆದರೆ ಇವೆಲ್ಲ ಸೂಚನೆಗಳು ಯಶಸ್ವಿಯಾಗಬೇಕಾದರೆ ಕುಶಲ ಕಾರ್ಯಕರ್ತರು ಆಯಾ ವಿಷಯಗಳಲ್ಲಿ ತಜ್ಞರಾದವರು ಬೇಕಾಗುವರು. ರೋಗಗಳು ಬಾರದಂತಹ ಪರಿಸ್ಥಿತಿಯನ್ನು ನಿರ್ಮಿಸುವದಲ್ಲದೆ ಬಂದ ಪಿಡುಗುಗಳನ್ನು ನಿವಾರಿಸಿಕೊಳ್ಳುವ ಅನುಕೂಲತೆಗಳೂ ಹಳ್ಳಿಗಳಲ್ಲಿ ಇರಬೇಕಾಗುವದು. ಈ ದೃಷ್ಟಿಯಿಂದಲೆ ಸರಕಾರದವರು ಸಂಚಾರಕ ಆಸ್ಪತ್ರೆಗಳ ಯೋಜನೆಯನ್ನು ಕೈಕೊಂಡಿದ್ದಾರೆ. ಇದು ಅಭಿನಂದನೀಯವಾದ ಸಂಗತಿಯಾಗಿದೆ. ಪೌಷ್ಟಿಕವಲ್ಲದ ಮತ್ತು ಅವಶ್ಯಕಕ್ಕಿಂತ ಕಡಿಮೆಯಾದಷ್ಟು ಆಹಾರವನ್ನು ತಿನ್ನುವದರಿಂದಲೂ ಹಳ್ಳಿಗರ ಆರೋಗ್ಯ ಕೆಡುವುದುಂಟೆಂಬುದು ಸ್ಪಷ್ಟವಿದೆ. ಅವರಿಗೆ ಸಾಕಷ್ಟು ಪೌಷ್ಟಿಕ ಆಹಾರ ದೊರೆಯುವಂತೆ ನೋಡಿಕೊಳ್ಳುವದೂ ಅವಶ್ಯವಾಗಿದೆ.

ಅಡಿಗೆಯನ್ನು ಚನ್ನಾಗಿ ಮಾಡಬಲ್ಲ ಹೆಂಗಸು ನಾಗರಿಕತೆಯ ಉಚ್ಚ ಶಿಖರದಲ್ಲಿ ರಾರಾಜಿಸುತ್ತಾಳೆ. —ಜಾರ್ಜ ಮೆರಿಡಿತ್

ಡಾ ಚಕ್ರವರ್ತಿ ರಾಜಗೋಪಾಲಾಚಾರಿಯವರನ್ನು, ನಾಳೆ ಜೂನ್ ೨೧ಕ್ಕೆ ಲಾರ್ಡ ಮೌಂಟಬ್ಯಾಟನ್ನರು ಹಿಂದುಸ್ತಾನದ ಗವ್ಹರ್ನರ ಜನರಲ್ ಪದದಿಂದ ಮುಕ್ತರಾದೊಡನೆ ಆ ಸ್ಥಾನಕ್ಕೆ ನೇಮಿಸಲಾಗಿದೆಯೆಂದು ಜಾರ್ಜ ಅರಸರ ಪ್ರಕಟನೆ ಹೊರಟಿದೆ.

ಹಿಂದೀಯರಿಗೆ "ರಾಜಾಜಿ" ಯೆಂಬ ಅಚ್ಚುಮೆಚ್ಚಿನ ಹೆಸರಿಂದ ಪರಿಚಿತರಾಗಿರುವ ರಾಜಗೋಪಾಲಾಚಾರ್ಯರು ಈಗ ಪಶ್ಚಿಮ ಬಂಗಾಲದ ಗವ್ಹರ್ನರರಾಗಿದ್ದಾರೆ. "ಗಾಂಧೀಜಿಯ ಮನಸ್ಸಾಕ್ಷಿ" ಎಂದು ಇವರ ಪ್ರಸಿದ್ಧಿಯಿತ್ತು. ಎಂಥ ಪ್ರಸಂಗದಲ್ಲೂ ಉದ್ರೇಕಗೊಳ್ಳದ ಪ್ರಶಾಂತ ಬುದ್ಧಿ ಇವರದು. ದೂರದರ್ಶಿತ್ವ, ವಿಷಯಗಳನ್ನು ತೂಗಿ ನೋಡುವ ಸಾಮರ್ಥ್ಯ, ದುಡುಕಿಲ್ಲದ ಕರ್ತವ್ಯಪರತೆ, ಸವಿ ಮಾತಿನಿಂದ ವಿರೋಧಿಯನ್ನೊಲಿಸಿಕೊಳ್ಳುವ ತರ್ಕಶಕ್ತಿ ಇವುಗಳಲ್ಲಿ ರಾಜಾಜಿಯವರಿಗೆ ಸರಿದೂಗುವ ಮುತ್ಸದ್ದಿಗಳು ವಿರಳ. ೧೯೩೭—೩೯ ರಲ್ಲಿ ಮದ್ರಾಸ ಮುಖ್ಯಮಂತ್ರಿಗಳಾಗಿ ಅವರು ತಮ್ಮ ಅಸಾಧಾರಣ ಆಡಳಿತ ಶಕ್ತಿಯನ್ನು ಪ್ರದರ್ಶಿಸಿದ್ದರು. ಗಾಂಧೀಜಿಯ ಬಹಳ ಹಳೆಯ ಶಿಷ್ಯರೂ ಸಹಯೋಗಿಗಳೂ ಆಗಿದ್ದರೂ ಅವರೊಡನೆ ಮತಭೇದವಾದಾಗ ಅದನ್ನು ನಿರ್ಭಯದಿಂದ ಪ್ರದರ್ಶಿಸಲು ಅವರೆಂದೂ ಹಿಂದುಮುಂದೆ ನೋಡಿದ್ದಿಲ್ಲ. ಗೊಂದಲ ಬಡಕ ರಾಜಕಾರಣದಿಂದ ಯಾವಾಗಲೂ ದೂರವಾಗಿ ಸಮಬುದ್ಧಿಯನ್ನು ಕಾಯ್ದುಕೊಂಡಿದ್ದ ಈ ವೃದ್ಧ ನಾಯಕರಿಗಿಂತ ಉತ್ತಮರು ಈ ಪದವಿಗೆ ದೊರಕರೆಂದು ಎಲ್ಲರೂ ಒಪ್ಪಿದ್ದಾರೆ.



ವಾರದ ಸಿಂಹಾವಲೋಕನ

ಹೈದರಾಬಾದದೊಡನೆ ಯುದ್ಧ ?

ಹೈದ್ರಾಬಾದ ಸಮಸ್ಯೆ ಕಳೆದ ವಾರದಲ್ಲಿ ಮತ್ತೆ ಭೀಷಣ ಸ್ವರೂಪ ತಾಳಿದೆ. ಗಡಿ ದುರ್ಘಟನೆಗಳು ಹಾಗೆಯೇ ಸಾಗಿವೆ. ಗಡಿಯ ಹತ್ತರದ ಪ್ರದೇಶದ ಜನರ ವಿತ್ತ ಜೀವಿತಗಳನ್ನು ಸಂರಕ್ಷಿಸಲು ಮುಂಬಯಿ ಪ್ರಾಂತೀಯ ಸರಕಾರವು ಹಿಂದುಸ್ತಾನ ಸರ್ಕಾರದ ಜೊತೆಗೆ ಶಕ್ಯವಿದ್ದ ಎಲ್ಲ ಉಪಾಯಗಳನ್ನು ಯೋಜಿಸಿದೆ ಎಂದು ಮುಂಬಯಿ ಸರಕಾರದ ಗೃಹಮಂತ್ರಿ ಶ್ರೀ. ಮುರಾರಜಿಯವರು ಹೇಳಿರುವರು. ಹೈದರಾಬಾದ ಪರಿಸ್ಥಿತಿಯೆಲ್ಲ ತಮಗೆ ಗೊತ್ತಿದ್ದು ಅದನ್ನೆದುರಿಸಲು ತಾವು ಸರ್ವ ಬಗೆಯ ಸಿದ್ಧತೆ ಮಾಡಿರುವದಾಗಿಯೂ ಇನ್ನು ಒಂದು ತಿಂಗಳೊಳಗಾಗಿ ಹೈದರಾಬಾದ ಯುದ್ಧ ಪ್ರಾರಂಭವಾಗುವದೆಂದೂ ಅವರು ಹೇಳಿದರು. ಸಂಪೂರ್ಣ ಹೊಣೆಗಾರ ಸರಕಾರ ಸ್ಥಾಪನೆಯ ಬೇಡಿಕೆಯನ್ನು ಬಿಟ್ಟುಕೊಟ್ಟು ಯಾವದಾದರೊಂದು ಬಗೆಯ ಒಪ್ಪಂದಕ್ಕೆ ಬಂಬೇಕೆಂದು ಪ್ರಚಾರ ನಡೆಸಲು ನಿಜಾಮ ಸರಕಾರದವರು ಪತ್ರಿಕೆಗಳಿಗೆ ಕೇಳಿಕೊಂಡಿದ್ದಾರೆಂದು ತಿಳಿಯುತ್ತದೆ. ತತ್ಪರಿಣಾಮವಾಗಿಯೋ ಏನೋ ಕಲಕತ್ತೆಯ ಸ್ಟೇಟ್ಸ್‌ಮನ್‌ದಂಥ ಪತ್ರಿಕೆಯಲ್ಲಿ ಓರ್ವ ಹಿಂದು ಎಂಬ ಅಂಕಿತದಲ್ಲಿ ಕೂಡಲೆ ಹೊಣೆಗಾರ ಸರಕಾರ ಬೇಡೆಂಬಾಶಯದ ಲೇಖ ಪ್ರಸಿದ್ಧವಾಗಿದೆ. ನಿಜಾಮಶಾಹಿಯನ್ನು ಉಳಿಸಲಿಕ್ಕೂ ಇಸ್ಲಾಮ ಧರ್ಮಕ್ಕೆ ಬಂದ ಗಂಡಾಂತರವನ್ನೆದುರಿಸಲಿಕ್ಕೂ ಮುಸಲ್ಮಾನರು ಸಿದ್ಧರಾಗಬೇಕೆಂದು ಹೈದರಾಬಾದ ಆಕಾಶವಾಣಿ ಮತ್ತು ಸಭೆಗಳಲ್ಲಿ ಭಾಷಣ ಮೂಲಕ ಪ್ರಚಾರ ನಡೆದಿದೆ. ನಿಜಾಮ ಸರಕಾರದವರು ಹೈದರಾಬಾದ ಗಡಿ ರಕ್ಷಣೆಗೆ ೪೦ ಸಾವಿರ ಸೈನಿಕರನ್ನು ರಜಾಕಾರರ ಪಡೆಗಳನ್ನು ೨೯ನೇ ತಾರೀಕಿನ ದಿನ ಕಳಿಸಿರುವರೆಂದೂ ಸುದ್ದಿ. ಹಿಂದೂ ಜನರಲ್ಲಿ ಅಂಜಿಕೆ ಹುಟ್ಟಿಸುವದು ಮತ್ತು ಯುದ್ಧ ಸಿದ್ಧತೆ ಹೀಗೆ ದ್ವಿಮುಖ ಧೋರಣವನ್ನು ನಿಜಾಮ ಸರಕಾರ ವಹಿಸಿದೆ. ಬೀದರ ಜಿಲ್ಲೆಯಲ್ಲಿಯ ದುರ್ಘಟನೆಗಳ ಬಗ್ಗೆ ನಿಲುವಳಿ ಸೂಚನೆಯ ಚರ್ಚೆಗೆ ಅವಕಾಶ ಕೊಡದ್ದರಿಂದ ಶಾಸನ ಸಭೆಯಲ್ಲಿಯ ಲಿಂಗಾಯತ ಸದಸ್ಯರೆಲ್ಲ ಮಂತ್ರಿಗಳ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು. ನಿಜಾಮ ಸಾಹೇಬರು ರಜಾಕಾರರ ಸೆರೆಯಾಳುಗಳಾದಂತಾಗಿದೆ. ಪ್ರಗತಿಪರ ಧೋರಣೆಯ ರಾಜಕೀಯನಾರಿಗೂ ಅವರಿಗೂ ಭೆಟ್ಟಿ ಕೂಡ ಇಲ್ಲದಂತಾಗಿದೆ. ಹಿಂದುಸ್ತಾನವನ್ನು ಸೇರಿ ಎಂದು ಬೋಧಿಸಿದ ಅವರ ಸೊಸೆ ಇಂಗ್ಲಂಡದಲ್ಲಿಯೇ ಕಾಲಕಳೆಯುತಿರುವಳು. ಸಂಸ್ಥಾನದಲ್ಲಿಯ ಕಮ್ಯುನಿಷ್ಟ ಪಕ್ಷದ ಮೇಲಿನ ನಿರ್ಬಂಧವನ್ನು ತೆಗೆದುಹಾಕಿ ಕಾಂಗ್ರೆಸ್ಸಿನ ವಿರುದ್ಧ ಹೋರಾಡಲು ಅದನ್ನು ಪ್ರೋತ್ಸಾಹಿಸಲಾಗಿದೆ.

ನಿಜಾಮರ ಪಲಾಯನ?

ಲಂಡನದ ಎಂಪಾಯರ ನ್ಯೂಜ ಎಂಬ ಜನಪ್ರಿಯ ಸಾಪ್ತಾಹಿಕ ಪತ್ರಿಕೆಯಲ್ಲಿ ಹೈದರಾಬಾದ ನಿಜಾಮರು ತಮ್ಮ ೨೦೦ ಹೆಂಡಂದಿರು ಹಾಗು ಕೋಟ್ಯಂತರ ರೂಪಾಯಿ ಬೆಲೆಬಾಳುವ ಚಿನ್ನ ರತ್ನಗಳ ಸಮೇತ ಹೈದರಾಬಾದದಿಂದ ಪಲಾಯನ ಮಾಡುವ ಸಿದ್ಧತೆ ನಡೆಸಿದ್ದಾರೆಂದು ಸುದ್ದಿ ಪ್ರಕಟವಾಗಿದೆ. ನಿಜಾಮರು ಹೈದರಾಬಾದವನ್ನು ಬಿಟ್ಟು ಹೋದರೆ ರಜಾಕಾರರ ಧುರೀಣರಾದ ಕಾಶೀಮ ರಜವಿಯವರೇ ಸರ್ವಾಧಿಕಾರಿಗಳಾಗಿ ಆಡಳಿತ ಸೂತ್ರಗಳನ್ನು ತಾವೇ ವಹಿಸಿಕೊಳ್ಳುವರೆಂದು ಸುದ್ದಿ ಹಬ್ಬಿದೆ. ಹಿಂದುಸ್ತಾನ ಸರಕಾರದವರು ಕಾಶೀಮ ರಜವಿಯನ್ನು ಬಂಧಿಸಬೇಕೆಂದೂ ರಜಾಕಾರ ದಲದ ವಿಸರ್ಜನೆ ಮಾಡಬೇಕೆಂದೂ ಕೊನೆಯ ಎಚ್ಚರಿಕೆ ಕೊಟ್ಟಿರುವರೆಂದು ಆ ಧೈರ್ಯ ಸಾಲದೆ ನಿಜಾಮರು ತಾವೇ ಪಲಾಯನ ಸೂತ್ರ ಹಿಡಿಸುವ ಸಿದ್ಧತೆ ಮಾಡಿರುವರೆಂದೂ ಸುದ್ದಿ. ಹಿಂದುಸ್ತಾನ ಸರಕಾರದ ಏಜಂಟ ಜನರಲ್ ಕಚೇರಿಯಿಂದ ಹೆಚ್ಚಿನ ಸುದ್ದಿ ಹೊರ ಬರುವದಿಲ್ಲ. ನಿಜಾಮರ ಪಲಾಯನಕ್ಕೆ ಕಾಶೀಮ ರಜವಿಯವರ ಒಪ್ಪಿಗೆ ಇದೆಯಂತೆ. ಹಾಗಾದರೆ ತಾವೇ ಅಧಿಕಾರ ವಹಿಸುವ ಅವಕಾಶ ಸಿಕ್ಕುವದೆಂದು ಅವರ ಹಿರಿಯಾಸೆ. ಚರ್ಚಿಲ್ ಪಕ್ಷದವರೂ ನಿಜಾಮರಿಗೆ ಬೆಂಬಲಕೊಟ್ಟಿದ್ದಾರೆ. ನಿಜಾಮರು ಸ್ವತಂತ್ರರಾಗಲಿಚ್ಛಿಸುವದು ಸಮಂಜಸವಿದೆ. ಬ್ರಿಟಿಶ ಸರಕಾರವು ಅವರ ಬೇಡಿಕೆಗೆ ಬೆಂಬಲ ಕೊಡಬೇಕು. ಬ್ರಿಟಿಶ ಕಾಮನ್‌ವೆಲ್ತದಲ್ಲಿ ಹೈದರಾಬಾದು ಸೇರಲಿಚ್ಛಿಸಿದರೆ ಅದನ್ನು ಸೇರಿಸಿಕೊಳ್ಳಬೇಕು. ಈ ಸಂಧಿಯನ್ನು ಕಳೆದುಕೊಳ್ಳಬಾರದೆಂದು ಕಾಂಜರ್ವೇಟಿವ್ ಪಕ್ಷದ ರಿಚಾರ್ಡ ಬಟ್ಲರರು ಕಾಮನ್ಸ್ ಸಭೆಯಲ್ಲಿ ಹೇಳಿದರು.

ಸಿಂಧದಲ್ಲಿ ಸರ್ವಾಧಿಕಾರಿತ್ವ

ಸಿಂಧದ ಮುಖ್ಯಮಂತ್ರಿಗಳಾಗಿದ್ದ ಜನಾಬ ಖುರ್ರೋರವರನ್ನು ಗವರ್ನರರಾದ ಸರ್ ಗುಲಾಮ ಹುಸೇನ ಹಿದಾಯತುಲ್ಲಾರವರು ಪದಚ್ಯುತ ಮಾಡಿದ್ದಾರೆ ಲಂಚಗುಳಿತನ, ಪಕ್ಷಪಾತ ಮೊದಲಾದ ಆರೋಪಗಳು ಅವರ ಮೇಲಿದ್ದು ಈ ಆರೋಪಗಳ ಬಗ್ಗೆ ವಿಚಾರಣೆ ನಡೆಯುವದೆಂದೂ ಸಾರಲಾಗಿದೆ. ೧೯೩೭ರಲ್ಲಿ ಹಿಂದುಸ್ತಾನದಲ್ಲಿ ಪ್ರಾಂತಿಕಸ್ವಾಯತ್ತತೆ ಸ್ಥಾಪಿತವಾಗುವಾಗ ಸಿಂಧ ಪ್ರಾಂತವು ಮುಂಬಯಿಯಿಂದ ಸ್ವತಂತ್ರ ಪ್ರಾಂತವಾಯಿತು. ಈ ಘಟನೆಯನ್ನಯ ಮಂತ್ರಿಯು ಶಾಸನ ಸಭೆಗೆ ಹೊಣೆಗಾರನು. ಸಾಮಾನ್ಯ ಪರಿಸ್ಥಿತಿಯಲ್ಲಿ ಶಾಸನ ಸಭಾ ಸದಸ್ಯರ ಬಹುಮತದಿಂದಲೆ ಅಧಿಕಾರದಲ್ಲಿ ಉಳಿಯಬಲ್ಲನು. ಆ ಬಹುಮತ ತಪ್ಪಿದರೆ ಪದಚ್ಯುತನಾಗಬೇಕಾಗುವದು. ಅತ್ಯಂತ ಗಂಡಾಂತರ ಪರಿಸ್ಥಿತಿಯಲ್ಲಿ ಮಾತ್ರ ಗವರ್ನರರು ಅವರನ್ನು ಕಿತ್ತಿಹಾಕಬಲ್ಲರು. ಆದರೆ ಸಿಂಧದಲ್ಲಿ ಅಂಥ ವಿಷಮ ಪರಿಸ್ಥಿತಿ ಈಗ ಏನಿದ್ದಿತೋ ಗವರ್ನರರೆ ಅವರನ್ನು ಕಿತ್ತಿಹಾಕಿರುವರು. ಗವರ್ನರ ಜನರಲ್‌ರಾದ ಜಿನ್ನಾಸಾಹೇಬರ ಹಸ್ತಕ್ಷೇಪವೂ ಇದರಲ್ಲಿ ಇದೆ. ಖುರ್ರೋರವರ ಪದಚ್ಯುತಿಯಿಂದ ತೆರವಾದ ಸ್ಥಳಕ್ಕೆ ಪೀರ ಇಲಾಹಿ ಬಕ್ಷರು ಮುಖ್ಯ ಮಂತ್ರಿಗಳಾಗಿ ಹೊಂದಿದ್ದಾರೆ. ಮೀರ ಗುಲಾಮ ಅಲ್ಲಿ ಖಾನ ತಾಲಪೂರ, ಸಿಂಧ ಶಾಸನ ಸಭೆಯ ಸದ್ಯದ ಅಧ್ಯಕ್ಷ ಪಿರಾನ ಮಹಮ್ಮದ ಶಹಾ ಮತ್ತು ಮಹಮ್ಮದ ಆಜಂ ಇವರು ಉಳಿದ ಮೂವರು ಮಂತ್ರಿಗಳು. ಸಿಂಧ ಸ್ವತಂತ್ರ ಪ್ರಾಂತವಾದಂದಿನಿಂದ ಇಲ್ಲಿಯ ವರೆಗಿನ ಅಲ್ಲಿನ ಮಂತ್ರಿ ಮಂಡಳದ ಇತಿಹಾಸವನ್ನು ಅವಲೋಕಿಸಿದ್ದಾದರೆ ಯಾವ ಮಂತ್ರಿಯ ಆಸನವೂ ಭದ್ರವಾದುದಲ್ಲವೆಂಬುದು ಗೊತ್ತಾಗುವದು. ಪಾಕಿಸ್ತಾನ ಪಡೆದುಕೊಂಡನಂತರ ಬ್ಯಾ. ಜಿನ್ನಾರವರು ಸರ್ವಾಧಿಕಾರಿಗಳಂತೆ ಆಡಳಿತ ಸಾಗಿಸುತಿರುವದರಿಂದ ಅವರ ಅವಕೃಪೆಗೆ ಪಾತ್ರರಾದವರಿಗೆಲ್ಲ ಅರ್ಧಚಂದ್ರವೆ. ಸಿಂಧದ ಆಡಳಿತವೂ ಸರ್ವಾಧಿಕಾರಿತ್ವದ ತಳಹದಿಯಲ್ಲಿಯೇ ಸಾಗಿದೆಂದು ಹೇಳಿದರೆ ತಪ್ಪಾಗದು. ಸಿಂಧದಲ್ಲಿಯ ೧೪ ಲಕ್ಷ ಹಿಂದೂ ಶೀಖರಲ್ಲಿ ೫ ಲಕ್ಷ ಜನರು ಪಾಕಿಸ್ತಾನದಲ್ಲಿ ೧೩ ಕೋಟಿ ರೂಪಾಯಿಗಳಷ್ಟು ಸ್ಥಿರಾಸ್ತಿಯನ್ನು ಬಿಟ್ಟುಕೊಟ್ಟು ಹಿಂದುಸ್ತಾನಕ್ಕೆ ಹೊರಟಿದ್ದಾರೆ. ಜಿನ್ನಾರ ಜನ್ಮಸ್ಥಳವಾದ ಕರಾಚಿಯು ಇನ್ನು ಮುಂದೆ ಜಿನ್ನಾಬಾದ ಎಂಬ ಹೊಸ ನಾಮಕರಣ ಹೊಂದಿ ಅವರ ಸರ್ವಾಧಿಕಾರಿತ್ವಕ್ಕೆ ಕಳಸವನ್ನಿಡುವದು.

ಕರ್ನಾಟಕಕ್ಕೆ ರೇಲ್ವೆಗಳು

ರೇಲ್ವೆ ಮಂತ್ರಿಗಳಾದ ಡಾ. ಜಾನ ಮಥಾಯಿರು ಕರ್ನಾಟಕ ಸಂಚಾರಕ್ಕೆ ಬರುವ ಮುನ್ನ ಶ್ರೀ ದಾತಾರ ಬಳವಂತರಾಯರು ಕರ್ನಾಟಕಕ್ಕೆ ಅವಶ್ಯವಿದ್ದ ರೇಲ್ವೆಗಳ ಬಗೆಗೆ ಮನವಿಯೊಂದನ್ನು ಸಮರ್ಪಿಸಿದರು. ಅದರಲ್ಲಿ ಅವರು ಮಾಡಿಕೊಂಡ ಬೇಡಿಕೆಗಳು ಇಂತು ಇವೆ. ಮೊದಲಿದ್ದ ಸದರ್ನ ಮರಾಠಾ ರೇಲ್ವೆಯೇ ಉಳಿದಿದ್ದರೆ ಕರ್ನಾಟಕದಲ್ಲಿ ರೇಲ್ವೆಗಳು ಹೆಚ್ಚುತಿದ್ದವು. ಆದರೆ ಮದ್ರಾಸ ರೇಲ್ವೆಗೆ ಅದನ್ನು ಜೋಡಿಸಿದರಿಂದ ಕರ್ನಾಟಕ ಅಲಕ್ಷಿಸಲ್ಪಟ್ಟಿದೆ. ಕಳೆದ ಮೂವತ್ತು ವರ್ಷಗಳಲ್ಲಿ ಹುಟಗಿ ಸೊಲ್ಲಾಪುರ ನಡುವಿನ ೮ ಮೈಲು ರೇಲ್ವೆ ಬಿಟ್ಟರೆ ಉಳಿದ ಯಾವ ಭಾಗದಲ್ಲಿಯೂ ರೇಲ್ವೆಗಳು ಹಾಕಲ್ಪಟ್ಟಿಲ್ಲ ಉತ್ತರ ಕನ್ನಡ ಜಿಲ್ಲೆ, ಜಮಖಂಡಿ, ಮುಧೋಳ ರಾಮದುರ್ಗಗಳಿಗೆ ರೇಲ್ವೆ ಸೌಕರ್ಯವಿಲ್ಲ ಹುಬ್ಬಳ್ಳಿಯು ಕರ್ನಾಟಕದ ಮುಖ್ಯ ನಗರವಾಗಿದ್ದರಿಂದ ಉತ್ತರಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಅದಕ್ಕೆ ರೇಲ್ವೆಯಿಂದ

—೧೦ನೆಯ ಪುಟಕ್ಕೆ

ಕಾಶ್ಮೀರದ ದುರಂತ

ಯುರೋಪಿನ ಆ ಸುಂದರ ದೇಶವಾದ ಸ್ವಿಝರ್ಲಂಡಿನ ಚಿತ್ರಗಳನ್ನು ಕಂಡಾಗಲೆಲ್ಲ ನನ್ನ ಮನಸ್ಸು ತಪ್ಪದೆ ಕಾಶ್ಮೀರದ ಕಡೆ ಹೊರಳುತ್ತದೆ. ಯುದ್ಧಪೂರ್ವದ ದಿನಗಳಲ್ಲಿ ಹೇಮಂತ ಶಿಶಿರ ವಸಂತ ಗ್ರೀಷ್ಮಗಳೆನ್ನದೆ ಎಲ್ಲ ಋತುಮಾನಗಳಲ್ಲಿಯೂ ಜನರು ತಮ್ಮ ವಿರಾಮ ದಿನಗಳನ್ನು ಕಳೆಯಲು ಬಯಸುತ್ತಿದ್ದ ಒಂದು ದಿವ್ಯ ರಾಜ್ಯವೆಂದರೆ ಸ್ವಿಝರ್ಲಂಡಾಗಿತ್ತು. ಅಲ್ಲಿ ಚಳಿಗಾಲದಲ್ಲಿ ಆಟವಾಡಿ ಅದರಿಂದ ದೊರಕುವ ಆನಂದವನ್ನು ಅನುಭವಿಸಿದವನು ಅಂಥ ಆಟಗಳ ಮೋಹದಿಂದ ತಪ್ಪಿಸಿಕೊಳ್ಳುವದು ಬಹಳ ಕಠಿಣ. ಸಮುದ್ರಮಟ್ಟಕ್ಕಿಂತ ೫೦೦೦ ಅಡಿ ಎತ್ತರವಾಗಿದ್ದರೂ ಸ್ವಿಝರ್ಲಂಡಿನ ಕೆಲವು ಸ್ಥಳಗಳಲ್ಲಿ ಹಬ್ಬಿರುವ ಸುಂದರ ಸೂರ್ಯಪ್ರಕಾಶದ ಮೂಲಕ ಚಳಿಯೇ ತಿಳಿಯುವದಿಲ್ಲ. ಇದೇ ಕಾರಣದಿಂದ ಅಂಥ ಸ್ಥಾನಗಳು ಕ್ಷಯರೋಗಿಗಳಿಗೆ ಆದರ್ಶ ವಸತಿಗಳಾಗಿವೆ. ವಸಂತ ಕಾಲದಲ್ಲಿ ಸ್ವಿಝರ್ಲಂಡಿನ ಸರೋವರ ತೀರಗಳಲ್ಲಿಯೂ ಗಿರಿಕಂದರಗಳಲ್ಲಿಯೂ ವಿಹರಿಸುವದು ಮತ್ತು ಗುಡ್ಡ ಹತ್ತುವದು ಪರಮಾನಂದಕರವಾಗಿದ್ದರೆ ಸ್ವಿಝರ್ಲಂಡಿನ ಶರತ್ ಹೇಮಂತ ಕಾಲಗಳೂ ನಿಸರ್ಗೋಪಾಸಕರನ್ನು ತಮ್ಮದೇ ಆದ ಸೌಂದರ್ಯದಿಂದ ಮೆಚ್ಚಿಸುತ್ತವೆ.

ಇದೇ ಸೌಂದರ್ಯ, ಇನ್ನೂ ಅಧಿಕ ಪ್ರಮಾಣದಲ್ಲಿ, ಕಾಶ್ಮೀರದಲ್ಲಿದೆ. ಮಾರ್ಗ ಸೌಕರ್ಯ ವಸತಿ ಸೌಕರ್ಯಗಳು ಹೆಚ್ಚಿದರೆ ಅದನ್ನು ವಿಶಾಲ ಪ್ರಮಾಣದಲ್ಲಿ ಪ್ರವಾಸಿಗಳಿಗೆ ಒದಗಿಸಬಹುದು. ಸುಂದರ ಕಾಶ್ಮೀರ ಭೂಮಿ ಆಕರ್ಷಕ ವಿರಾಮ ಸ್ಥಳವಾಗಬಲ್ಲದು. ಕ್ಷಯರೋಗಿಗಳಿಗೆ ಅನುಕೂಲವಾಗುವ ಅತ್ಯುತ್ತಮ ಸ್ಥಾನಗಳನ್ನಾಯ್ದು ಆರೋಗ್ಯಧಾಮಗಳನ್ನು ಸ್ಥಾಪಿಸಲೂ ಮಂಡಿತ ಅವಕಾಶವುಂಟು.

ಆದರಿಂದು ಆ ದೇಶದ ಬಡ ಶಾಂತಿಪ್ರಿಯ ಪ್ರಜೆಗಳು ಕ್ರೂರ ದಾಳಿಗಳಿಗೊಳಗಾಗುತಿದ್ದಾರೆ. ದೇಶ ಹಾಳಾಗಿ ಹೋಗುತಿದೆ. ಯುದ್ಧದಂಥ ವಿಧ್ವಂಸಕ ಸಂಗತಿ ಬೇರೊಂದಿಲ್ಲ ಆದರೂ ನ್ಯಾಯಶೀಲ,ಬುದ್ಧಿವಂತ ಎಂದು ಹೇಳಿಸಿಕೊಳ್ಳುವ ಮಾನವನು ಯುದ್ಧವಿಲ್ಲದೆ ವಿವಾದಗಳನ್ನು ಬಗೆಹರಿಸಿಕೊಳ್ಳುವ ಶಕ್ತಿಯನ್ನು ಇನ್ನೂ ಪಡೆದಿಲ್ಲ.

ಶಾಂತಿಪ್ರಿಯವಾದ ಕಾಶ್ಮೀರವನ್ನು ಶಾಂತಿಯಿಂದ ಬೆಳೆಯಗೊಟ್ಟರೆ, ಎಷ್ಟು ಏಳಿಗೆ ಹೊಂದಬಲ್ಲ ಸೌಂದರ್ಯಧಾಮವಾದ ಅದು ಹಿಂದುಸ್ಥಾನಕ್ಕೆಷ್ಟೋ ಅಷ್ಟೇ ಪಾಕಿಸ್ತಾನಕ್ಕೂ ಭಾಗ್ಯಸಾಧನವಾಗಬಹುದು. ವಿರಾಮ ವಿಹಾರಿಗಳ ನಂದನವನವೆನಿಸಿ, ಆರೋಗ್ಯಸ್ಥಾನವೆನಿಸಿ, ಅದು ಹಿಂದುಸ್ತಾನ ಪಾಕಿಸ್ತಾನದ ಪ್ರಜೆಗಳಿಗೆ ಮಾತ್ರವಲ್ಲ ಇಡಿ ಜಗತ್ತಿನ ಪ್ರವಾಸಿಗಳ ಸಂಗಮಸ್ಥಾನವಾದೀತು.

ಹೊತ್ತು ಮೀರಿಹೋಗಿದ್ದರೂ ಇನ್ನಾದರೂ ವಿವೇಕಕ್ಕೆ ಗೆಲವು ದೊರೆತು, ಹಿಂದುಸ್ತಾನ ಪಾಕಿಸ್ತಾನಗಳು ಈ ಪ್ರಶ್ನೆಯನ್ನು ಬಾಹುಬಲದಿಂದ ಅಥವಾ ಹೊರಗಿನವರ ಮಧ್ಯಸ್ಥಿಕೆಯಿಂದ ಬಗೆಹರಿಸಿಕೊಳ್ಳುವ ಪ್ರಯತ್ನವನ್ನು ತೊರೆದು ತಮ್ಮ ಸ್ವಂತ ಸದ್ಬುದ್ಧಿಯನ್ನೆ ಉಪಯೋಗಿಸಿ ಬಗೆಹರಿಸಲಾರವೆ? ಮನಸೊಂದಿದ್ದರೆ ಯಾವ ಪ್ರಶ್ನೆಯೂ ಬಿಡಿಸಬಾರದ ಗಂಟೆನಿಸದು.

ಹೊಸದಿಲ್ಲಿ ಅ. ಕೌ.
೧೮–೪–೪೮

ಸೈನಿಕ ಶಿಕ್ಷಣ

ಪ್ರಶ್ನೆ:— ಸೈನ್ಯಶಿಕ್ಷಣ ಪಡೆಯಬೇಕೆಂದು ಬಯಸಿದ ಯುವಕ ಯುವತಿಯರಿಗೆ ಸರಕಾರವು ಸೌಕರ್ಯ ಕಲ್ಪಿಸುವದು ಯುಕ್ತವೆಂದು ತೋರುವದು ಸಹಜವಿದೆ. ಆದರೆ ಈ ಬಗೆಯ ಶಿಕ್ಷಣವು ಕಡ್ಡಾಯದ್ದಾದರೆ ಅಹಿಂಸೆಯಲ್ಲಿ ಶ್ರದ್ಧೆಯಿದ್ದ ಹಾಗೂ ಅಹಿಂಸಾ ತತ್ವದ ಅಸ್ತಿವಾರದ ಮೇಲೆ ಸಮಾಜವನ್ನು ಕಟ್ಟಬೇಕೆಂದವರ ಪಾಡೇನು ?

ಉತ್ತರ:— ಸ್ವತಂತ್ರ ಹಿಂದುಸ್ತಾನದಲ್ಲಿ ಒತ್ತಾಯದ ಸೈನ್ಯ ಭರತಿ ಎಂಬ ನನ್ನ ಲೇಖನದಲ್ಲಿ, (ಹರಿಜನ ತಾ. ೨-೫-೪೮) ಈ ಬಗ್ಗೆ ಸತ್ಯ ಅಹಿಂಸೆಗಳನ್ನು ಅನಿವಾರ್ಯವಾಗಿ ಭಂಗಿಸಬೇಕಾದ ಸೇವೆಯನ್ನಾಗಲೀ ಶಿಕ್ಷಣವನ್ನಾಗಲೀ ಕಡ್ಡಾಯದ್ದಾಗಿ ಮಾಡಕೂಡದೆಂದು ಹೇಳಿಯೇ ಇದ್ದೇನೆ. ಒಂದು ವೇಳೆ ಈ ಆಕ್ಷೇಪವನ್ನು ಉಪೇಕ್ಷಿಸಿ ಸರಕಾರವು ಈ ಬಗೆಯ ಸೇವೆಯನ್ನು ಸೈನ್ಯ ಶಿಕ್ಷಣವನ್ನು ಕಡ್ಡಾಯದ್ದಾಗಿ ಮಾಡಿದ್ದಾದರೆ ಸತ್ಯಾಗ್ರಹಿಯಾದವನು ಸವಿನಯ ಶಾಸನಭಂಗ ಮಾಡಿ ಈ ಬಗೆಯ ಶಾಸನವನ್ನು ಪ್ರತಿರೋಧಿಸಿ ಅದರ ಫಲವನ್ನು ಭೋಗಿಸಲು ಸಿದ್ಧನಿರಬೇಕು.

ಇಂದಿನ ಸಾರ್ವಜನಿಕ ಮನೋವೃತ್ತಿಯನ್ನು ಹೀಗೆ ವರ್ಣಿಸಬಹುದು. ಬಹುಸಂಖ್ಯಾಕರು ಕಡ್ಡಾಯದ ಸೈನ್ಯ ಶಿಕ್ಷಣಕ್ಕೆ ಅನುಕೂಲರಾಗಿ ಶಸ್ತ್ರಧಾರಣೆಯ ಹಕ್ಕನ್ನು ಉಳಿಸಿಕೊಳ್ಳಬೇಕೆನ್ನುವವರೇ. ಹಿಂಸೆಯ ಆಯುಧಗಳು ಎಷ್ಟೇ ಘಾತುಕವಿದ್ದರೂ ಅಹಿಂಸಾಸ್ತ್ರಕ್ಕಿಂತ ಈ ಶಸ್ತ್ರ ಚಾಲನೆಯ ರಹಸ್ಯ ಅರಿವಲ್ಲಿಯೇ ಅವರಿಗೆ ತುಂಬು ನಂಬಿಗೆಯಿದೆ. ಅಹಿಂಸೆಯಲ್ಲಿ ಅಚಲ ಶ್ರದ್ಧೆಯಿದ್ದವರು ವಿರಲವೇ. ಆದ್ದರಿಂದ ಕಡ್ಡಾಯದ ಸೈನ್ಯ ಶಿಕ್ಷಣಕ್ಕೆ ಬಹುಸಂಖ್ಯಾಕರ ಬಲ ಸಿಕ್ಕುವ ಸಂಭವವೇ ಹೆಚ್ಚು. ಈ ಬಗೆಯಾಗಿ ಬಹುಸಂಖ್ಯಾಕರ ಮನೋವೃತ್ತಿಯಿದ್ದರೂ ಯಾವದೇ ಕಾರಣದಿಂದ ಸರಕಾರವು ಸೈನ್ಯ ಶಿಕ್ಷಣವನ್ನು ಐಚ್ಛಿಕವಾಗಿರಿಸಿದರೆ ಸೋಮಾರಿಗಳಾದವರು ಸೈನ್ಯ ಜೀವನದ ಕಷ್ಟನಿಷ್ಠುರತೆಗಳನ್ನು ಸಹಿಸಲೊಲ್ಲದೆ ಜಾರಿಕೊಂಡುಬಿಡುವ ಸಂಭವವೂ ಬಹಳುಂಟು. ಸುಖ ಜೀವನಕ್ಕೂ ವಿಲಾಸಕ್ಕೂ ಮೆಚ್ಚಿಕೊಂಡವರು ಗಂಡಾಂತರಕ್ಕೆ ಗುರಿಯಾಗಲು ಒಪ್ಪಿಯಾರೇ? ಇದನ್ನೆಲ್ಲ ವಿಚಾರಿಸಿದರೆ ಈ ಬಗ್ಗೆ ನನ್ನ ಅಭಿಪ್ರಾಯ ಹೀಗೆ ಹಿಂಸೆಯ ಬಗ್ಗೆ ತಾತ್ವಿಕ ವಿರೋಧವಿದ್ದವರು ಹಾಗೂ ಅಹಿಂಸೆಯಲ್ಲಿ ಅಚಲ ಶ್ರದ್ಧೆಯಿದ್ದವರು ಮಾತ್ರ ಈ ಬಗೆಯ ಸೈನ್ಯ ಶಿಕ್ಷಣದಿಂದ ಪರಾವೃತ್ತರಾಗಬಹುದು. ಸೈನ್ಯ ಶಿಕ್ಷಣ ಕಡ್ಡಾಯವೆನ್ನುವಾಗ ಮೇಲ್ಕಾಣಿಸಿದ ನಿಯಮವನ್ನು ಅನುಲಕ್ಷಿಸುವದು ಯುಕ್ತವಾದೀತಾದರೂ ಸೋಮಾರಿತನದಿಂದ ಜಾರಲು ಬರದಂತೆ ನೋಡಿಕೊಳ್ಳುವದು ಅಗತ್ಯವಾದೀತು. ಅಹಿಂಸೆಯ ಹಾದಿಯನ್ನು ಹೇಡಿಯಾದವನು ಸಹ ನಡೆಯುಬರುವಷ್ಟು ಅದು ಸುಭವೆಂದು ಮಾತ್ರ ಯಾರೂ ಗ್ರಹಿಸಕೂಡದು.

ವರ್ಧಾ ಕಿಶೋರಲಾಲ
೨೯—೪—೪೮ ಮಶ್ರುವಾಲಾ

ಕಾಶ್ಮೀರ ಪ್ರಶ್ನೆಯಲ್ಲಿ ಗಾಂಧೀಜಿಯ ಹೇಳಿಕೆ

"ಇಂದು ಪ್ರಾರ್ಥನೋತ್ತರ ಭಾಷಣದಲ್ಲಿ ಗಾಂಧೀಜಿ ಕಾಶ್ಮೀರವನ್ನು ಕುರಿತು ಮಾತನಾಡಿದರು. ಕಾಶ್ಮೀರದ ಪ್ರಶ್ನೆಯನ್ನು ಮಧ್ಯಸ್ಥಿಗೊಪ್ಪಿಸುವ ವಿಚಾರ ಕೆಲ ಪತ್ರಿಕೆಗಳಲ್ಲಿ ಬಂದದ್ದನ್ನು ತಾವು ನೋಡಿದ್ದೇವೆಂದು ಅವರೆಂದರು. ಹಿಂದೀ ಒಕ್ಕೂಟವೂ ಪಾಕಿಸ್ತಾನವೂ ತಮ್ಮೊಳಗಿನ ಪ್ರಶ್ನೆಗಳನ್ನು ತೀರಿಸಲು ಯಾವಾಗಲೂ ಮೂರನೆಯವರ ಮುಖ ನೋಡಬೇಕೆ? ಎಷ್ಟು ದಿನ ಅವರು ಹೀಗೆ ಜಗಳಾಡುತ್ತ ಕೂಡುವರು?

"ಕಾಶ್ಮೀರ ವಿಭಜನೆಯ ಮಾತುಗಳೂ ಕೇಳಬರುತ್ತಿವೆ. ಅದು ಶುದ್ಧ ಹುಚ್ಚು. ಹಿಂದುಸ್ತಾನ ಎರಡು ಹೋಳಾದುದೆ ಸಾಕು. ದೇವರು ಒಂದು ಮಾಡಿದ ದೇಶವನ್ನು ಮನುಷ್ಯ ಎರಡಾಗಿ ಮಾಡಲಾರನೆಂದು ಯಾರೂ ನಂಬಬಹುದಾಗಿತ್ತು. ಆದರೂ ಅದು ಸಾಧ್ಯವಾಯಿತು. ಬೇರೆ ಬೇರೆ ಕಾರಣಗಳಿಗಾಗಿಯೆ ಇರಲೊಲ್ಲದೇಕೆ, ಕಾಂಗ್ರೆಸ್ಸು ಲೀಗು ಇವೆರಡೂ ಅದಕ್ಕೆ ಒಪ್ಪಿದರು. ಆದರೆ ಇದರಿಂದ ವಿಭಜನೆಯ ಕ್ರಮವನ್ನು ಇನ್ನೂ ವಿಸ್ತರಿಸಬೇಕೆಂದು ಅರ್ಥವಾಗುವದಿಲ್ಲ. ಕಾಶ್ಮೀರವನ್ನು ಪಾಲುಮಾಡಬೇಕಾದರೆ ಉಳಿದ ಸಂಸ್ಥಾನಗಳನ್ನೂ ಏಕೆ ಕೂಡದು? ಈ ಕ್ರಮಕ್ಕೆ ಕೊನೆಯೆಲ್ಲಿ?

"...... ಅವರೂ (ಪಾಕಿಸ್ತಾನ) ಹಿಂದೀ ಒಕ್ಕೂಟದ ಪ್ರತಿನಿಧಿಗಳೂ ಒಂದೆಡೆ ಸೇರಿ ಇನ್ನೂ ಅನೇಕ ವಿಷಯಗಳಲ್ಲಿ ಮಾಡಿದಂತೆ, ಕಾಶ್ಮೀರ ಪ್ರಶ್ನೆಯನ್ನೂ ಹಿಂಜರಿ ಹಾಗೆ ಮಾಡುವದು ವದು ಸಾಧ್ಯವಾಗದಿದ್ದರೆ, ತಮ್ಮೊಳಗಿಂದಲೇ ಒಳ್ಳೆಯ, ಸತ್ಯಸಂಧ ಜನರನ್ನಾರಿಸಿ ಅವರ ಮಾರ್ಗದರ್ಶನವನ್ನು ತೆಗೆದುಕೊಳ್ಳಬಾರದೇಕೆ? ಮೊಟ್ಟಮೊದಲು ಬೇಕಾದ್ದು ಹಿಂದಿನ ತಪ್ಪುಗಳನ್ನು ಬಾಯ್ಬಿಟ್ಟು ಒಪ್ಪಿಕೊಳ್ಳುವದು. ಹೃತ್ಪೂರ್ವಕ ಪಶ್ಚಾತ್ತಾಪ ಪಟ್ಟರೆ ಅದರಿಂದ ಪಾಪ ಶುದ್ಧಿ ಬಾಯಿ ವೊಂದಾಗಿ ಪರಸ್ಪರರನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುವದು. (೨೫-೧೨-೪೭ರ ಪ್ರಾರ್ಥನೋತ್ತರ ಭಾಷಣ ಹರಿಜನ ೪-೧-೪೮)

"ಪಾಕಿಸ್ತಾನದ ಮತ್ತು ಒಕ್ಕೂಟದ ಸರಕಾರಗಳು ಕಲಹವನ್ನು ದೂರ ಮಾಡಿ ನಿಷ್ಪಕ್ಷಪಾತಿ ಹಿಂದೀಯರ ಸಹಾಯದಿಂದ ಒಪ್ಪಂದಕ್ಕೆ ಬರಲಾರದೆ? ಅಥವಾ ನಿಷ್ಪಕ್ಷಪಾತವೆಂಬದೇ ಹಿಂದುಸ್ತಾನದಿಂದ ಪಲಾಯನ ಮಾಡಿದೆಯೆ? ಹಾಗಾಗಿಲ್ಲೆಂದು ನನ್ನ ನಂಬಿಕೆ" (ಪ್ರಾರ್ಥನೋತ್ತರ ಭಾಷಣ, ೨೯–೧೨–೪೭, ಹರಿಜನ ೧೧-೧-೪೮)

ಡೊಂಬರ ಕುಣಿತ

ನಮ್ಮ ವಿದೇಶ ವ್ಯಾಪಾರದ ತೂಕ ಅಸ್ಥಿರವಾಗಿದೆ. ಹೆಚ್ಚು ಆಹಾರವನ್ನು ಹೊರಗಿಂದ ತರಿಸಿಕೊಳ್ಳಲವಕಾಶವಾಗುವಂತೆ ನಾವು ಎಷ್ಟೋ ಕಚ್ಚಾವಸ್ತುಗಳನ್ನು ತರಿಸಿ ಅವುಗಳನ್ನು ಸಿದ್ಧವಸ್ತುಗಳಾಗಿ ಮಾಡಿ ತಿರುಗಿ ವಿದೇಶಗಳಿಗೆ ಕಳಿಸುತ್ತೇವೆ. ಇದು ಬಹಳ ಅತೃಪ್ತಿಕರ ಸಂಗತಿ. ಇಂಗ್ಲಂಡಿಗೆ ಹಿಂದುಸ್ತಾನ ಎರಡನೆ ಅತಿದೊಡ್ಡ ಪೇಟೆಯೆನಿಸಿದೆ. ಉಳಿದ ಯಾವದೇ ದೇಶಕ್ಕಿಂತ ಇಮ್ಮಡಿ ಯಂತ್ರ ಸಾಮಗ್ರಿಗಳನ್ನು ಹಿಂದುಸ್ತಾನ ಇಂಗ್ಲಂಡಿನಿಂದ ತರಿಸಿದೆ. ಈ ಭಾಗದಲ್ಲಿ ಅದು ಅತಿ ದೊಡ್ಡ ಗಿರಾಕಿಯೆಂದು ಹೇಳಬಹುದು. ಆದರೆ ಗಿರಣಿ ಯಂತ್ರಗಳ ವಿಷಯದಲ್ಲಂತೂ ಇಂಗ್ಲಂಡು ನಿರ್ಯಾತಮಾಡಿದ್ದರಲ್ಲಿ ಈ ದೇಶ ನೂರಕ್ಕೆ ಮುವತ್ತೇಳನ್ನು ಪಡೆದಿದೆ.

ನಮ್ಮ ಬೇಕುಗಳನ್ನು ಹೊರಗಿಂದ ಆಯಾತ ಮಾಡಿಕೊಳ್ಳುವದಕ್ಕೇನೂ ನಮ್ಮ ಅಡ್ಡಿಯಿಲ್ಲ. ಆದರೆ ಉದ್ದಿಮೆದಾರರ ಸಂಘದ ಅಧ್ಯಕ್ಷರು ನಾವು ಆಯಾತ ಮಾಡಿದ್ದನ್ನು ಸರಿದೂಗಿಸಲು ನಾವೀಗ ಸಿದ್ಧ ಸಾಮಗ್ರಿಗಳನ್ನು ನಿರ್ಯಾತಮಾಡುವದವಶ್ಯವೆಂದು ಹೇಳುತ್ತಾರೆ. ಇದುಮಾತ್ರ ಅಪಾಯಕರ.ಅದೂ ನಾವು ಆಯಾತ ಮಾಡುತ್ತಿರುವದು ಆಹಾರ ಮೊದಲಾದ ಜೀವನಾವಶ್ಯಕ ಸಾಮಗ್ರಿಗಳಾಗಿರುವಾಗ. ರಾಷ್ಟ್ರ ರಾಷ್ಟ್ರಗಳಲ್ಲಿ ಹೋರಾಟಕ್ಕೆ ಕಾರಣವಾಗುವ ವಿಷಯಗಳೆಂದರೆ ಇಂಥ ವ್ಯವಹಾರಗಳು. ರಾಷ್ಟ್ರೀಯ ಸರಕಾರದ ಕೈಕೆಳಗೆ ನಮ್ಮ ರಾಷ್ಟ್ರದ ಆರ್ಥಿಕ ಸ್ವರೂಪ ವೇಗವಾಗಿ ಬದಲಾಗುತ್ತಿದೆ. ಈ ಬದಲಾವಣೆ ಒಳ್ಳೆಯ ದಾರಿ ಹಿಡಿದು ನಡೆಯದೆ ಕೆಟ್ಟದಾರಿ ಹಿಡಿದಿದೆಯೆಂದು ಸಂಶಯ ಬರುತ್ತದೆ. ಜೀವನದ ಮುಖ್ಯ ಅವಶ್ಯಕತೆಗಳನ್ನೆ ಗಮನಿಸಿ ನಾವು ನಮ್ಮ ಆರ್ಥಿಕ ಕಟ್ಟಡದ ತಳಹದಿ ಹಾಕಬೇಕು ಮುಖ್ಯವಾಗಿ ಆಹಾರ ವಸ್ತ್ರಗಳ ವಿಷಯದಲ್ಲಿ ನಮ್ಮ ಉತ್ಪಾದನೆ ಪರದೇಶಗಳ ಆಯಾತವನ್ನು ನಂಬಿ ನಡೆಯಬಾರದು ಜವಳಿಯನ್ನು ನಿರ್ಯಾತ ಮಾಡುವ ಮೂಲಕ ನಾವು ಆಹಾರ ವಸ್ತುಗಳನ್ನು ತರಿಸಿಕೊಳ್ಳಬಹುದೆಂದು ಹೇಳುವದು ಒಂದು ವಾದವೇ ಅಲ್ಲ. ಅಂಥ ಕ್ರಮದ ಪರಿಣಾಮವೇನೆಂದು ನಾವು ವಿಚಾರಿಸಬೇಕು.

ಆಹಾರದ ಬೆಳೆ ಹೆಚ್ಚಿಸುವ ಸರಕಾರದ ಪ್ರಯತ್ನಗಳನ್ನು ನಾವು ಸ್ವಾಗತಿಸುತ್ತೇವೆ. ಆದರೆ ಇಲ್ಲಿಯೂ ಟ್ರ್ಯಾಕ್ಟರು, ರಸಾಯನಿಕ ಗೊಬ್ಬರಗಳೆ ಮೊದಲಾದವುಗಳಿಗಾಗಿ ಪರದೇಶದ ಪೆಟ್ರೋಲ, ಕ್ರೂಡಾಯಿಲ ಮೊದಲಾದವುಗಳನ್ನು ಅವಲಂಬಿಸುವ ಪ್ರಸಂಗಗಳನ್ನು ಆದಷ್ಟು ಕಡಿಮೆ ಮಾಡಿಕೊಳ್ಳಬೇಕೆಂದು ಸೂಚಿಸ ಬಯಸುವೆವು. ಏಕೆಂದರೆ ಕೊನೆಗಾದರೂ ಇವು ನಮ್ಮನ್ನು ಅಂತರ್ ರಾಷ್ಟ್ರೀಯ ಹೋರಾಟಕ್ಕೆ ಈಡುಮಾಡಬಹುದಾದ ಆರ್ಥಿಕ ವ್ಯವಸ್ಥೆಯಲ್ಲಿ ತೊಡಗಿಸಬಹುದು.

ನದಿಗಳನ್ನು ಉಪಯೋಗಿಸಿ ಪಡಭೂಮಿಗಳನ್ನು ಸಾಗುವಳಿಮಾಡುವ ಪ್ರಯತ್ನಗಳು ಒಳ್ಳೆಯವೇ. ಆದರೆ ನಮ್ಮ ಆಹಾರ ಬೆಳೆಯುವ ಭೂಮಿಗಳನ್ನು ವ್ಯಾಪಾರಿ ಪೈರುಗಳಿಗೆ ಉಪಯೋಗಿಸಿ ಅದರಿಂದ ಉತ್ಪನ್ನವಾದ ಬೆಳೆಗಳನ್ನು ವಿದೇಶಗಳಿಗೆ ನಿರ್ಯಾತಮಾಡಿ ಅವುಗಳ ಬದಲಿಗೆ ಆಹಾರಧಾನ್ಯವನ್ನು ತರಿಸಿಕೊಳ್ಳುವ ಸ್ಥಿತಿಗೆ ಅವಕಾಶ ಕೊಡಬಾರದು. ಇದೂ ತಪ್ಪುದಾರಿಯೆ.

ನಮ್ಮ ಹುಲ್ಲುಗಾವಲುಗಳ ಬಹುಭಾಗ ಹೋಗಿಬಿಟ್ಟಿದೆ. ನಾವು ನಮ್ಮ ದನಕರು ಮೊದಲಾದ ಪ್ರಾಣಿಗಳಿಗೆ ಮೇವನ್ನು ಬೆಳೆಸಬೇಕು. ಇದೂ ವ್ಯವಸಾಯ ಭೂಮಿಯ ಮೇಲೊಂದು ಬಗೆಯ ಭಾರವೆ. ಆದ್ದರಿಂದ ಮೇವನ್ನು ಬೆಳೆಸುವದಕ್ಕೆ ವ್ಯಾಪಾರಿ ಬೆಳೆಗಳಿಗಿಂತ ಮೇಲ್ಪಂಕ್ತಿ ಕೊಡಬೇಕು.

ನಮ್ಮ ಆಹಾರ ಸಂಪತ್ತನ್ನು ರಕ್ಷಿಸಿಕೊಳ್ಳುವ ಪ್ರಯತ್ನಗಳಲ್ಲಿ, ಅಕ್ಕಿಯ ಗಿರಣಿ, ಸಕ್ಕರೆ ಕಾರಖಾನೆ, ವನಸ್ಪತಿ ಕಾರಖಾನೆ ಇವೆಲ್ಲವುಗಳನ್ನು ಪ್ರತಿಬಂಧಿಸುವದೂ ಸೇರಬೇಕು. ಇವೆಲ್ಲವೂ ಒಟ್ಟಿನ ಮೇಲೆ ನಮ್ಮಲ್ಲಿ ದೊರೆಯುವ ಆಹಾರ ಸಾಮಗ್ರಿಗಳ ಸತ್ವವನ್ನು ನಾಶಮಾಡುವವು. ಇಂಥ ಕಾರಖಾನೆಗಳ ಹೆಚ್ಚಳದಿಂದ ಆಹಾರದ ಬೆಳೆ ಹೆಚ್ಚಿಸುವ ನಮ್ಮ ಧೋರಣೆಕ್ಕೆ ಧಕ್ಕೆ ತಗಲುತ್ತದೆ. ಒಂದೆಡೆ ಆಹಾರದ ಉತ್ಪಾದನೆಯನ್ನು ಹೆಚ್ಚಿಸಲು ದೃಢಪ್ರಯತ್ನಗಳನ್ನು ಮಾಡಬೇಕೆಂದು ಜನರಿಗೆ ಬೋಧಿಸುತ್ತ ಇನ್ನೊಂದೆಡೆ ಆಹಾರ ಸತ್ವಗಳನ್ನು ನಾಶಮಾಡುವದಕ್ಕೂ ಬೆಂಬಲ,ಕೊಟ್ಟರೆ ಹೇಗೆ?

ಈ ಪ್ರಕಾರ ನಮ್ಮ ಆರ್ಥಿಕ ಸಂಘಟನೆಗೆ ಕೆಲವರ ಭೌತಿಕ ಸಂಪತ್ತನ್ನು ಹೆಚ್ಚಿಸುವದನ್ನೇ ಉದ್ದೇಶ ಮಾಡಿಕೊಳ್ಳದೆ ಜನಸಾಮಾನ್ಯರ ಹಿತಕ್ಕೆ ಕಾರಣವಾಗುವಂತೆ ಉತ್ಪಾದನೆಯ ವಿವಿಧ ಅಂಗಗಳನ್ನು ಸಂಯೋಜಿಸುವ ಒಂದು ವಿಚಾರಪೂರ್ಣ ಯೋಜನೆ ಅವಶ್ಯವಿದೆ. ವಿದೇಶಿ ಆಯಾತಗಳಿಂದ ದೇಶದ ನಿರ್ಯೋಗೀಕರಣ ಮಾಡಿ, ನಮ್ಮ ಸಿದ್ಧ ಸಾಮಗ್ರಿಗಳನ್ನು ಹೊರಗೆ ಕಳಿಸಿ ಹೊರಗಿನಿಂದ ಆಹಾರವನ್ನು ತರಿಸಿಕೊಳ್ಳುವ ಹವ್ಯಾಸವೆಂದರೆ ಕಾಲುಗಳನ್ನು ಕಟ್ಟಿಕೊಂಡು ತಂತಿಯ ಮೇಲೆ ಕುಣಿಯುವ ಡೊಂಬರಾಟದಂತೆ. ಅದರಿಂದ ಪ್ರೇಕ್ಷಕರಿಗೆ ಕ್ಷಣಮಾತ್ರದ ಆಶ್ಚರ್ಯವಾಗಬಹುದಾದರೂ ಕುಣಿಯುವವನ ಜೀವನಕ್ಕೇ ಕುತ್ತು ಬಂದೀತು. ಅಂಥ ಡೊಂಬರ ಕುಣಿತಕ್ಕೆ ನಮ್ಮ ದೇಶ ಕೈಹಾಕದಿರಲಿ.

ಜೆ. ಸಿ. ಕುಮಾರಪ್ಪ

ಮಹಾದೇವ ದೇಸಾಯಿ ಸ್ಮಾರಕ ನಿಧಿ

(ಮುಂಬಯಿ)

ಮುಂಬಯಿಯ ಹಿಂದಿ ಪ್ರಚಾರ ಸಭಾದ ಭವನದಲ್ಲಿ ೮ ನೇ ಮಾರ್ಚ ೧೯೪೫ ರ ಕಾಲಕ್ಕೆ ದಿವಂಗತ ಶ್ರೀ. ಮಹಾದೇವ ದೇಸಾಯಿ ಅವರ ಮಿತ್ರರು ಮತ್ತು ಪ್ರಶಂಸಕರು ಸಭೆ ಸೇರಿದ್ದರು. ಆಗ ಶ್ರೀ. ಮಹಾದೇವಭಾಯಿ ಅವರ ಸ್ಮಾರಕಕ್ಕಾಗಿ ೧೫ ಲಕ್ಷ ರೂಪಾಯಿಗಳ ನಿಧಿ ಕೇಳುವ ಸಲುವಾಗಿ ಒಂದು ವಿಜ್ಞಾಪನಾ ಪತ್ರವನ್ನು ಹೊರಡಿಸಲಾಯಿತು.

ಈ ವರೆಗೆ ಈ ಸ್ಮಾರಕ ಸಮಿತಿಯವರು ೩ ಲಕ್ಷ ೨೪ ಸಾವಿರ ೩೬೦ ರೂಪಾಯಿ ೧೦ ಆಣೆ ೯ ಪೈಗಳನ್ನು ಮಾತ್ರ ಕೂಡಿಸಿದ್ದಾರೆ. ಈ ಹಣದಲ್ಲಿ ೪ ಸಾವಿರ ೩೬೯ ರೂಪಾಯಿ ೧೨ ಆಣೆ ಕಚೇರಿಯ ವೆಚ್ಚಕ್ಕಾಗಿ ಮತ್ತು ಅಂಚೆ ಕಾಗದಾದಿ ಚಿಲ್ಲರೆ ಪದಾರ್ಥಗಳಿಗಾಗಿ ನಿಧಿಯ ಕಾಗದ ನೋಂದಾಯಿಸಲು ವಿನಿಯೋಗವಾಗಿದೆ. ೧೨ ಸಾವಿರದ ರೂಪಾಯಿಗಳು ಗುಜರಾತ ಸ್ಮಾರಕ ಸಮಿತಿಯವರಿಂದ ಸ್ವೀಕರಿಸಲ್ಪಟ್ಟಿದ್ದವು. ಆ ನಿಧಿಯನ್ನು ಅವರಿಗೇ ಕಳಿಸಿಕೊಡಲಾಗಿದೆ. ಇನ್ನುಳಿದ ೩ ಲಕ್ಷ ೨ ಸಾವಿರ ೮೯೮ ರೂಪಾಯಿ ೧೨ ಆಣೆ ೯ ಪೈ ನಿಧಿಯನ್ನು ಧರ್ಮದರ್ಶಿಗಳ ಹೆಸರಿನಲ್ಲಿ ಇಡಲಾಗಿದೆ.

ಈ ಸ್ಮಾರಕ ನಿಧಿಗೆ ಗಾಂಧೀಜಿಯೇ ಧರ್ಮದರ್ಶಿಗಳ ನಾಮಕರಣ ಮಾಡಬೇಕೆಂಬುದಾಗಿ ಗೊತ್ತಾಗಿತ್ತು. ಅದರಂತೆ ಅವರು ಶ್ರೀ ವೈಕುಂಠಲಾಲ ಮೇಥಾ ಶ್ರೀ. ದಯಾಭಾಯಿ ವಿ. ಪಟೇಲ ಮತ್ತು ಶ್ರೀ ಶಾಂತಿಕುಮಾರ ಎನ್. ಮುರಾರಜಿ ಪ್ರಭೃತಿಗಳನ್ನು ಶ್ರೀ. ಮಹಾದೇವ ದೇಸಾಯಿ (ಮುಂಬಯಿ) ಸ್ಮಾರಕ ನಿಧಿಗೆ ಧರ್ಮದರ್ಶಿಗಳನ್ನಾಗಿ ನಾಮಕರಣ ಮಾಡಿದ್ದರು.

ಈ ನಿಧಿಯ ಕಾಗದಕ್ಕೆ ಮುಂಬಯಿಯಲ್ಲಿ ೧೮ ನೇ ನವೆಂಬರ ೧೯೪೬ ರ ದಿನ ಧರ್ಮದರ್ಶಿಗಳು ಅಂಕಿತವಿಟ್ಟರು. ಈ ಸ್ಮಾರಕ ನಿಧಿಯ ಧ್ಯೇಯ ಉದ್ದೇಶಗಳು ಈ ಕೆಳಗಿನಂತಿವೆ.

ಮಹಾತ್ಮಾ ಗಾಂಧಿಯವರ ಉಪದೇಶಕ್ಕನುಗುಣವಾಗಿ ಮತ್ತು ಕೆಳಗಣ ಎಲ್ಲ ಅಥವಾ ಕೆಲ ಉಪಾಯಗಳ ಮೂಲಕ ದರಿದ್ರರ ಸೇವೆ ಮಾಡಲು ಜನರನ್ನು ಅಣಿಗೊಳಿಸುವದು.

(ಅ) ಮಹಾದೇವ ಭಾಯಿಯವರು ಸ್ವತಃ ಬರೆದಿಟ್ಟ ಟಿಪ್ಪಣಿ ಬರಹಗಳನ್ನು ಆಧರಿಸಿ ಅವರ ಅಧಿಕೃತ ಜೀವನ ಚರಿತ್ರೆಯನ್ನೂ ಅವರ ಸಾಹಿತ್ಯವನ್ನೂ ಪ್ರಕಟಿಸುವದು, ಮತ್ತು ಇನ್ನುಳಿದ ಸಲಕರಣಗಳೊಡನೆ ಪ್ರಾಮುಖ್ಯವಾಗಿ ಮಹಾದೇವ ಭಾಯಿಯವರು ಕೂಡಿಟ್ಟ ಸಾಮಗ್ರಿಗಳನ್ನು ಬಳಸಿ ಗಾಂಧೀಜಿಯ ಆದರ್ಶ ಹಾಗೂ ಸಮಾಜ ಶಾಸ್ತ್ರದ ಬಗ್ಗೆ ಸಾಹಿತ್ಯ ಪ್ರಕಟಿಸುವದು.

(ಬ) ವ್ಯಾಖ್ಯಾನಮಾಲೆ, ಅಭ್ಯಾಸ ಮಂಡಲ ಅಥವಾ ಇನ್ನು ಬೇರೆ ಸಾಧನಗಳ ಮೂಲಕ ಗಾಂಧೀಜಿಯ ತತ್ವೋಪದೇಶಗಳ ಪ್ರಸಾರಮಾಡುವದು, ಮತ್ತು ಗಾಂಧೀಜಿಯವರಿಂದ ಪುರಸ್ಕರಿಸಲ್ಪಟ್ಟ ವಿಕೇಂದ್ರೀಕರಣದ ತತ್ವದ ಮೇಲೆ ಸಿದ್ಧವಾದ ಪದಾರ್ಥಗಳ ಪ್ರದರ್ಶನಾಲಯ ಸ್ಥಾಪಿಸುವದು, ಈ ಚಟುವಟಿಕೆಗಳನ್ನು ಮುಂದೆ ಸಾಗಿಸಲು ಕೆಲಸಗಾರರನ್ನು ನೇಮಿಸಿ ಅವರಿಗೆ ತಕ್ಕ ಪ್ರತಿಫಲದ ಏರ್ಪಾಟು ಮಾಡುವದು.

ಮೇಲ್ಕಾಣಿಸಿದ ಧ್ಯೇಯ ಪೂರ್ತಿಗಾಗಿ ಮಾಡಿದ ಎಲ್ಲ ಸಲಹೆ ಸೂಚನೆಗಳಿಗೂ ಸ್ವಾಗತವಿದೆ. ಈ ಬಗ್ಗೆ ಎಲ್ಲ ಪತ್ರವ್ಯವಹಾರವನ್ನೂ ಶ್ರೀ ಶಾಂತಿಕುಮಾರ, ಎನ್ ಮುರಾರಜಿ, ಧರ್ಮದರ್ಶಿ, ಮಹಾದೇವ ದೇಸಾಯಿ (ಮುಂಬಯಿ) ಸ್ಮಾರಕ ನಿಧಿ, ಸಿಂದಿಯಾ ಭವನ, ಬಲಾರ್ಡ ಇಸ್ಟೇಟ್, ಮುಂಬಯಿ, ಈ ವಿಳಾಸಕ್ಕೆ ಮಾಡುವದು. ಈ ನಿಧಿಯ ಕಚೇರಿಯು ಅಲ್ಲಿಯೇ ಇದೆ.

ಈ ನಿಧಿಯ ನೋಂದಾದ ಕಾಗದ ಪತ್ರವನ್ನು ನೋಡಬಯಸಿದವರು ಕಚೇರಿಯ ವೇಳೆಯಲ್ಲಿ ಮೇಲ್ಕಾಣಿಸಿದ ವಿಳಾಸಕ್ಕೆ ಹೋಗಿ ನೋಡಿಕೊಳ್ಳಬಹುದು.

ಗಾಂಧೀ ಮಾರ್ಗವನ್ನು ಬಿಟ್ಟು ಹೋಗುವುದಿಲ್ಲ

ಒಬ್ಬ ಪತ್ರಕರ್ತ ಬರೆಯುತ್ತಾರೆ.

“ ಶ್ರೀ ಆಚಾರ್ಯ ವಿನೋಬರವರ ಪ್ರಾರ್ಥನಾ ಭಾಷಣ ಎಂಬ [illegible] ಹರಿಜನದಲ್ಲಿ ಪ್ರಕಟವಾದ ಲೇಖನವನ್ನೋದಿ ಈ ವಿಷಯದ ಮೇಲೆ ಗಾಂಧಿಯವರ ಅಭಿಪ್ರಾಯವೇನಿದೆ ಎಂಬುದನ್ನು ಓದುಗರಿಗೆ ನೆನಪು ಮಾಡಿಕೊಡಬೇಕೆನಿಸುತ್ತದೆ. ಈ ಕೆಳಗೆ ಪತ್ರಕರ್ತನೊಬ್ಬನಿಗೆ ಗಾಂಧಿಯವರು ಕೊಟ್ಟ ಸಮಯೋಚಿತ ಉತ್ತರವನ್ನು ಉದ್ಧರಿಸುತ್ತೇನೆ.

“ಅವರಲ್ಲಿ (ಪ್ರಾರ್ಥನೆಯಲ್ಲಿ) ಹೇಳದ ಇಲ್ಲವೆ [illegible] ಶಬ್ದಗಳಿಗಿಂತ ಚಿತ್ತ ವೃತ್ತಿಯೇ ಮುಖ್ಯವಾದದ್ದು. ಅದೇ ವೇಳೆ ಪುರಾತನ ಕಾಲದಿಂದ ಬಂದ ಮಂತ್ರಗಳನ್ನು ತಾಯ್ನುಡಿಗೆ ಭಾಷಾಂತರಿಸಿದರೆ ಅವರ ಪ್ರಭಾವ ಕುಂದಿ ಹೋಗುತ್ತದೆ. ಗಾಯತ್ರಿಯನ್ನು ಗುಜರಾತಿಗೆ ಭಾಷಾಂತರಿಸಿದರೆ ಮೂಲದ ಪರಿಣಾಮ ಉಂಟಾಗದೆಂಬುದೊಂದು ಉದಾಹರಣೆ. ದೇವರೆಂದರೆ ಅರ್ಥ ತಿಳಿದ್ದರೂ ಅದರ ಉಚ್ಚಾರ ಹೃದಯವನ್ನು ಮುಟ್ಟುವುದಿಲ್ಲ; ಅದೇ ರಾಮ ಎಂಬ ಹೇಳಿದರೆ ಕೋಟಿಗಟ್ಟಲೆ ಹಿಂದೂಗಳ ಹೃದಯವನ್ನು ಮುಟ್ಟುತ್ತದೆ. ಶಬ್ದಗಳು ಬಹು ಕಾಲದ ಬಳಕೆ ಮತ್ತು ಪವಿತ್ರ ಭಾವಗಳ ಸಂಯೋಗದಿಂದ ಅರ್ಥ ಶಕ್ತಿಯನ್ನು ಪಡೆಯುತ್ತವೆ. ಆದುದರಿಂದ ಹಳೆಯ ಸಂಸ್ಕೃತ ಮಂತ್ರಗಳನ್ನು ಇಟ್ಟು ಕೊಳ್ಳುವ ಬಗ್ಗೆ ಹೇಳಬೇಕಾದ್ದು ಬಹಳವಿದೆ. ಅವುಗಳ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳಬೇಕೆಂಬುದನ್ನು ಹೊಸದಾಗಿ ಹೇಳಬೇಕಾಗಿಲ್ಲ.

“ ಮೇಲೆ ಕಾಣುವಂತೆ ಗಾಂಧಿಯವರು ತಮ್ಮ ಅಭಿಪ್ರಾಯ ಕಾಳಿದ್ದರೆಂದು [illegible] ಆಚಾರ್ಯ ವಿನೋಬರಿಗೆ ನಾವು ಸೂಚಿಸಬೇಕಾಗುತ್ತದೆ. ನಾನು ಗಾಂಧೀಮಾರ್ಗವನ್ನು ತಿಳಿದ ಮಟ್ಟಿಗೆ ಹೇಳುವುದಾದರೆ ಪ್ರಾರ್ಥನೆಗಳು ಮೂಲಧರ್ಮ ಗ್ರಂಥದಲ್ಲೇ ಇರಬೇಕು ಮತ್ತು ಉತ್ತಮರ ಹಿಂದುವಾಗಬೇಕಾದರೆ ಪ್ರತಿಯೊಬ್ಬ ಹಿಂದುವೂ ಸಂಸ್ಕೃತವನ್ನು ಕಲಿಯಬೇಕು ಎಂಬುದೇ ಅವರ ಅಭಿಪ್ರಾಯವಾಗಿತ್ತು. ಅಲ್ಲದೆ ಅವರು [illegible] ನಡೆಸಿದ ಪ್ರಾರ್ಥನಾ ಸಭೆಗಳಲ್ಲಿ ಗೀತೆ ಕುರಾನ್ ಬೌದ್ಧ ಧರ್ಮಗ್ರಂಥ ಮತ್ತು ಜೆಂದವೆಸ್ತಗಳಿಂದ ಆಯ್ದ ನುಡಿಗಳನ್ನು ಸಭಿಕರಲ್ಲಿ ಕೆಲ್ಲವು ಜನರು ಮಾತ್ರ ತಿಳಿದುಕೊಳ್ಳಬಲ್ಲರಾಗಿದ್ದರೂ ಮೂಲದಲ್ಲೇ ಉಚ್ಚರಿಸಿ ಹೇಳಲಾಗುತ್ತಿತ್ತು. ಆಚಾರ್ಯರ ಅಭಿಪ್ರಾಯ ಅದರದಾಗಿದ್ದರೆ ಮೂಲವನ್ನು ಬಿಡು ಅವರು ಅವುಗಳ ಭಾಷಾಂತರಗಳನ್ನು ಪ್ರಾರ್ಥನೆಯಲ್ಲಿ ಹೇಳಲು ಬಿಡುತ್ತಿದ್ದರು— ಏಕೆಂದರೆ, ಅವರು ಎಲ್ಲರಿಗಿಂತ ಹೆಚ್ಚಾಗಿ ಆಚಾರ ಪ್ರಧಾನರು ಹೀಗಿರುವುದರಿಂದ ಅವರು ಈ ಕ್ರಿಯೆಯನ್ನು ಎತ್ತುತ್ತದೆ. ನನ್ನ ಪ್ರಕಾರ ನಾನು ಅವರು ಒಳ್ಳೆಯವೆಂದು ಗಣಿಸುವ ಅಭಿಪ್ರಾಯಗಳಿಗೆ ಹರಿಜನದಲ್ಲಿ ಸ್ಥಳಕೊಡತಕ್ಕದ್ದು ಹರಿಜನದಲ್ಲಿ ಬರುವುದೆಲ್ಲ ಗಾಂಧಿಯವರ ಅಭಿಪ್ರಾಯದ ಸರಿಯಾದ ವ್ಯಾಖ್ಯೆ ಎಂದು ಯಾರೂ ಗ್ರಹಿಸದಂತಾಗಿ ಶ್ರೀ ಕೆ. ಜಿ. ಮಶ್ರುವಾಲರು ಮೊದಲೇ ಸಾರ್ವಜನಿಕರಿಗೆ ಎಚ್ಚರಿಕೆ ಕೊಟ್ಟಿದ್ದರು. ಹಾಗಿದ್ದರೂ ಸಾಮಾನ್ಯ ಜನರು ಗಾಂಧಿಯವರ ತತ್ವಗಳ ಸರಿಯಾದ ವಿವರಣವನ್ನು ಹರಿಜನ ಮತ್ತು ತತ್ಸಂಬಂಧಿ ಸಾಪ್ತಾಹಿಕಗಳಲ್ಲಿ ನಿರೀಕ್ಷಿಸುತ್ತಾರೆ. ಆದುದರಿಂದ ಹರಿಜನದಲ್ಲಿ ಪ್ರಕಟಿಸುವ ಪ್ರಬಂಧಗಳನ್ನು ಆಯ್ದುಕೊಳ್ಳುವಲ್ಲಿ ಬಹಳ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕೆಂದು ನನ್ನ ಮತ. ಜನತೆಯು [illegible] ಬಹಳ [illegible], ಆದುದರಿಂದ ಅದು ಸಂಪಾದಕನ ಎಚ್ಚರಿಕೆಯನ್ನು ಮರೆತುಬಿಡುತ್ತದೆ. ಇನ್ನು ನಾವು ಅವರ ಮತವೇ ಎಂಬ ಪ್ರಶ್ನೆಗೆ ಪ್ರಬಂಧ ಬಂದಾಗ ಕೇಳಿಕೊಳ್ಳಬೇಕು. ಉತ್ತರ ಇಲ್ಲವೆಂದು ಬಂದರೆ ಅದಕ್ಕೆ [illegible] ಸ್ಥಳವಿಲ್ಲ. ಆಚಾರ್ಯರಾಗಲಿ ಇತರರಾಗಲಿ ಗಾಂಧಿಯವರಿಗಿಂತ ಬೇರೆ ಅಭಿಪ್ರಾಯವನ್ನು ತಾಳಬಾರದೆಂದು ಇದರ ಅರ್ಥವಲ್ಲ. [illegible] ತಿಳಿಯಬಲ್ಲರು. ಹರಿಜನದ ಮಟ್ಟಿಗೆ [illegible] “ಜನಾನುರಾಗ ರೀತಿ [illegible] ಲಿಪಿಯನ್ನು ತೆಗೆಯುವಾಗ ನಾಗರಿ [illegible] ಬಳಸಬೇಕೆಂಬ ಬಗ್ಗೆ ಪ್ರಬಂಧ ಬರೆದು [illegible], ಅಗ [illegible] ಮೊದ್ದ [illegible], ಅವರ ಅಭಿಪ್ರಾಯ ಎಷ್ಟೇ [illegible]. ಅದು ಹರಿಜನಕ್ಕೆ ಗಾಂಧಿ [illegible], ಅವನ್ನು [illegible] ಬರಬೇಕಾಗುತ್ತದೆ. ದಾಸನವೂ ಸೇವಕನವೂ ಅದ [illegible] ಎಂದರೆ ನಾವು ಅವರು [illegible] ಎರಡೂ ಲಿಪಿಗಳನ್ನು ಬಳಸಬೇಕೆಂದು, ಒಬ್ಬ ಹೇಳು ತ್ತಿದ್ದರು. ಹರಿಜನವು ಗಾಂಧಿಯವರ ಅಭಿಪ್ರಾಯವನ್ನು ಹೊರಗೆಡಹುವ ಪತ್ರಿಕೆಯಾಗಿಉಳಿಯುವುದು ಕಷ್ಟಕರ ಬೇಕೆಂದು ನನ್ನ ಉತ್ಕಟೇಚ್ಛೆ.

“ನಾನು ಇದನ್ನು ಗಾಂಧಿಯವರ ಒಬ್ಬ ದೀನ ಅನುಯಾಯಿಯಾಗಿ ಬರೆದಿದ್ದೇನೆ, ಆದುದರಿಂದ ಮೇಲಿನ ಬರಹದಲ್ಲಿ ತಪ್ಪು ತೋರಿಸಿಕೊಟ್ಟರೆ ನಾನು ಯಾವಾಗಲೂ ತಿದ್ದಿಕೊಳ್ಳಲು ಸಿದ್ಧನಿದ್ದೇನೆ. ಅದರಹಿಂದೆ ದುರ್ಭಾವನೆಗೆ ಎಳ್ಳಷ್ಟು ಎಡೆಯಿಲ್ಲ”

ಪತ್ರಕರ್ತನು ೨ ಪ್ರಶ್ನೆಗಳನ್ನು ಎತ್ತಿದ್ದಾನೆ. ಮೊದಲನೆಯದು ಪ್ರಾರ್ಥನೆಯ ಭಾಷೆಯದು. ಗಾಂಧಿಯವರು ಒಮ್ಮೆ ಮೇಲಿನ ಅಭಿಪ್ರಾಯವನ್ನು ತಳೆದಿದ್ದರೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಪತ್ರಕರ್ತನು ಮೇಲಿನ ವಾಕ್ಯಗಳನ್ನು ಎಲ್ಲಿಂದ ಉದ್ಧರಿಸಿದ್ದಾನೋ ಗೊತ್ತಾಗುವದಿಲ್ಲ. ಹೇಗೇ ಆಗಲಿ, ಗಾಂಧಿಯವರು ಅಭಿಪ್ರಾಯವನ್ನು ಎಂದೂ ಬದಲಿಸಿದರೆಂಬುದನ್ನೂ ಹಾಗೆ ಬದಲಿಸಿದ ಅಭಿಪ್ರಾಯವನ್ನು ಎಂದು ಪ್ರಕಟವಾಗಿ ಹೇಳಿದರೆಂಬುದನ್ನೂ ನಾನು ತೋರಿಸಿ ಕೊಡಲಾರೆ.

ಪತ್ರಕರ್ತನಿಗೆ ಗಾಂಧಿಯವರ ಮತ್ತು ವಿನೋಬರ ಅಭಿಪ್ರಾಯಗಳಲ್ಲಿ ವ್ಯತ್ಯಾಸ ಕಾಣದಂತಾಗಬಹುದು; ಅವೆರಡನ್ನೂ ಹೊಂದಿಸಲು ಸಾಧ್ಯವಾದರೂ ಆಗಬಹುದು. ಆದರೆ ನಾವು ಈ ಊಹೆಗಳನ್ನು ಬಿಟ್ಟು ಕೊಡಬಹುದು. ಸೇವಾಗ್ರಾಮದ ಆಶ್ರಮದಲ್ಲಿ ಗಾಂಧಿಯವರು ಗೀತೆಯ ಮರಾಠಿ ಅನುವಾದಕ್ಕೆ ಅವಕಾಶ ಕೊಟ್ಟಿದ್ದರು. ಕೆಲವು ವರ್ಷಗಳವರೆಗೆ ಬೆಳಿಗ್ಗೆ ನಿತ್ಯವೂ ಮರಾಠಿ ಗೀತೆಯನ್ನೇ ಅಗ ಬಳಸಲಾಗುತ್ತಿತ್ತು. ಮರಾಠಿ ತಾಯ್ನುಡಿಯುಳ್ಳವರು ಕೂಡ ಸಂಸ್ಕೃತ ಗೀತೆಗಿಂತ ಮರಾಠಿ ಗೀತೆಯನ್ನು ಹೆಚ್ಚು ಅರ್ಥ ಮಾಡಿಕೊಳ್ಳಲು ಶಕ್ತರಾದರೆಂದು ತಿಳಿಯಬಂದಿತು. ಗುಜರಾತ್ ಮತ್ತು ಮಹಾರಾಷ್ಟ್ರಗಳ ಆಶ್ರಮಗಳಲ್ಲಿ ಬಹುಕಾಲದಿಂದ ಪ್ರಾಂತ ಭಾಷೆಯಲ್ಲೇ ಪ್ರಾರ್ಥನೆ ನಡೆಯುತ್ತಿತ್ತೆಂದು ನನ್ನ ತಿಳುವಳಿಕೆ. ೧೯೨೨ ಇಲ್ಲವೆ ೨೩ ರಲ್ಲಿ ನನ್ನ ಸಲಹೆಯ ಪ್ರಕಾರ ಮುಂಬಯಿಯ ರಾಷ್ಟ್ರೀಯ ಶಾಲೆಯಲ್ಲಿ ಸಂಸ್ಕೃತದಿಂದ ಗೀತಾ ಪಠನವನ್ನು ಗುಜರಾತಿಗೆ ಬದಲಾಯಿಸಲಾಯಿತು. ಅದರಿಂದ ಬಹಳ ಜನರಿಗೆ ಅನುಕೂಲವಾಯಿತು. ಧರ್ಮಗ್ರಂಥಗಳನ್ನು ಕೇವಲ ಗಿಳಿ ಪಾಠ ಮಾಡದೆ ಪಠಿಸಬೇಕಾದರೆ, ತಿಳಿದುಕೊಳ್ಳಬೇಕಾದರೆ, ಅನುಸರಿಸಬೇಕಾದರೆ, ಪ್ರಾರ್ಥನೆಗಳನ್ನು ಜನರು ಆಡುವ ಭಾಷೆಯಲ್ಲೇ ನಡೆಸಬೇಕೆಂದು ನನ್ನ ಮತ.

ಇದಕ್ಕಿಂತ ೨ ನೆಯ ಪ್ರಶ್ನೆ ಹೆಚ್ಚು ಮುಖ್ಯವಾದುದು. ಅದೆಂದರೆ, ಹರಿಜನವು ಗಾಂಧೀ ಮಾರ್ಗದಿಂದ (ಒಮ್ಮೆ ಅವರ ಕಡೆಯ ಅಭಿಪ್ರಾಯತಿದಿದ್ದಲ್ಲಿ) ಬಿಟ್ಟು ಹೋಗುವದು ಇಲ್ಲವೆ ಹೋದಂತೆ ತೋರುವುದು. ಓದುಗನನ್ನು ನಾನು ಮೊದಲು ಸಂಪಾದಕತ್ವದ ಹೊಣೆ ಹೊರುವಾಗ ಹೇಳಿದ್ದನ್ನು ನೆನಪಿಗೆ ತಂದುಕೊಳ್ಳಲು ಕೇಳಿಕೊಳ್ಳುತ್ತೇನೆ.

“ನಾನು ಇಲ್ಲವೆ ಇತರ ಲೇಖಕರು ಹರಿಜನದಲ್ಲಿ ಗಾಂಧಿವಾದ,ಗಾಂಧಿವಾದದವಾಖ್ಯೆಎಂದು ಬರೆದುದನ್ನು ಓದುಗ ತೆಗೆದುಕೊಳ್ಳಬಾರದು ಗಾಂಧಿಯವರು ಹೇಳಿದ್ದಕ್ಕೂ ನಾವು ಹೇಳಿದ್ದಕ್ಕೂ ಏನಾದರೂ ವ್ಯತ್ಯಾಸ ಕಂಡರೆ ಎರಡನ್ನೂ ವಿಮರ್ಶಿಸಿ ತನ್ನ ಮನಸ್ಸಿಗೆ ತೋರಿದ ನಿರ್ಣಯಕ್ಕೆ ಬರಬಹುದು. ಗಾಂಧೀ ಮಾರ್ಗವನ್ನು ವ್ಯಾಖ್ಯಾನಿಸಲು ನನಗೆ ಅಧಿಕಾರವಿಲ್ಲ. ಪ್ರತಿಯೊಂದು ವಿವರದಲ್ಲೂ ನಾನು ಗಾಂಧಿಯವರನ್ನು ಅನುಸರಿಸ ಶಕ್ತನಾಗಲಿಲ್ಲವೆಂದು ಕಂಡು ಬಂದರೆ ಓದುಗನು ತಾಳಿಕೊಳ್ಳಬೇಕು”

ನೆನೆಸಿನ್ನಯಿಸುವುದು ಹರಿಜನದಲ್ಲಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಇತರರಿಗೂ ಅನ್ವಯಿಸುತ್ತದೆ. ಇನ್ನೊಬ್ಬರ ಅಭಿಪ್ರಾಯವೇ ಒಮ್ಮೆ ಸರಿಯಿದ್ದರೂ ಹರಿಜನವು ಗಾಂಧಿಯವರ ಅಭಿಪ್ರಾಯವನ್ನೆ ಪುರಸ್ಕರಿಸಬೇಕೆಂದು ಪತ್ರಕರ್ತನೆನ್ನುತ್ತಾನೆ! ಹೀಗೆ ಮಾಡಬೇಕಾದರೆ ನಾವು ಗಾಂಧಿಯವರಿಗೇ ಅವಿಧೇಯರಾಗಬೇಕಾಗುತ್ತದೆ. ೧೯೪೮ ರ ಜನವರಿ ೩೦ ರ ನಂತರ ಗಾಂಧಿಯವರು ಬದುಕಿದ್ದರೆ ಅವರು ತಮ್ಮ ಅಭಿಪ್ರಾಯವನ್ನು ಬದಲಿಸುತ್ತಿದ್ದಿಲ್ಲವೆಂದು ಜಗತ್ತಿಗೆ ನಾವು ಸೂಚಿಸುವುದು ಸರಿಯಾಗಲಾರದು; ಏಕೆಂದರೆ, ನಾವು ಸತ್ಯವನ್ನು ಅಡಗಿಸಿಟ್ಟಂತಾಗುತ್ತದೆ; ಸತ್ಯ ಆ ಮೇಲೆ ಅವರಿಗೆ ಕಾಣುತ್ತಿದ್ದಿಲ್ಲ ಎಂದ ನಾವು ಹೇಗೆ ಹೇಳಬಲ್ಲೆವು? ಅಗಲೇ ಅವ ೨ ಕಡೆಯ ಸ್ಮರಣ ಒಂದು ವಿಷಯದಲ್ಲಿ ಕಂಡಿದ್ದರೆಂದು ನಮಗೆ ಗೊತ್ತಿದೆ [illegible] ಹರಿಜನದಲ್ಲಿ ವ್ಯಕ್ತಪಡಿ

ಸಲಾದ ಅಭಿಪ್ರಾಯಗಳನ್ನು ಗಾಂಧಿಯವರು ಜೀವಿಸಿದ್ದಾಗ ಹೇಳಿದ ಮಾತುಗಳೊಂದಿಗೆ ಹೋಲಿಸಿ ಬಿಟ್ಟರೆ ಸಾಲದು (ಹಾಗೂ ಮಾಡಬಹುದು) ಆದರೆ ಸರ್ವೋದಯದ ದೃಷ್ಟಿಯಿಂದ ಸತ್ಯಶಂಶೋಧಕನೊಬ್ಬನು ಸತ್ಯಾಹಿಂಸೆಗಳ ನಿಯಮಗಳನ್ನೂ ಇತರ ಆಕ್ಸಿಯಮ ತತ್ವಗಳನ್ನೂ ಅನ್ವಯಿಸಿ ನೋಡಿಕೊಳ್ಳುವಂತೆ ಪರೀಕ್ಷಿಸಬೇಕೆಂದು ಓದುಗನನ್ನು ಪ್ರಾರ್ಥಿಸುತ್ತೇನೆ.

ವರ್ಧಾ, ೩೦—೪—೪೮

—ಕೆ. ಜಿ. ಮಶ್ರುವಾಲ

ಮಹಾತ್ಮಾ ಗಾಂಧಿ—ಒಂದು ಅವತಾರ

ಮರಣಾನಂತರ ಎಲ್ಲ ಮಹಾತ್ಮರುಗಳ ಸುತ್ತ ನಾನಾವಿಧ ಕಾಲ್ಪನಿಕ ಕಥೆಗಳು ಬೆಳೆದಂತೆ ಈ ನಮ್ಮ ಮಹಾತ್ಮನ ಸುತ್ತಲೂ ಹಬ್ಬುತ್ತಿವೆ.

ಪುರಾಣಗಳ ರೀತಿಯಲ್ಲಿ ಗಾಂಧೀಜಿಯೊಂದು ಅವತಾರವೆಂದು ನಂಬುವದಕ್ಕೆ ಅವರು ಸರ್ವಥಾ ಒಪ್ಪಿಗೆ ಕೊಡುತಿದ್ದಿಲ್ಲ. ಅವರು ಎಂದೆಂದೂ ತಮ್ಮಲ್ಲಿ ದೇವತ್ವವನ್ನು ಆರೋಪಿಸಿಕೊಂಡಿದ್ದಿಲ್ಲ. ತಮ್ಮ ಸತ್ಯ ಅಹಿಂಸೆಗಳು ಕೂಡ ಪರಿಪೂರ್ಣವಾಗಿದ್ದವೆಂದು ಅವರು ಹೇಳಿಕೊಳ್ಳುತ್ತಿದ್ದಿಲ್ಲ. ಆಧುನಿಕ ಕಾಲದಲ್ಲಿ ಈ ಗುಣಗಳಲ್ಲಿ ಅವರೊಡನೆ ಸ್ಪರ್ಧಿಸಬಲ್ಲವರಾರೂ ನಮಗೆ ತಿಳಿದ ಮಟ್ಟಿಗೆ ಇದ್ದಿಲ್ಲವೆಂಬ ಮಾತು ಬೇರೆ.

ಒಂದು ದೃಷ್ಟಿಯಿಂದ ಎಲ್ಲ ಮಹಾಮಹಿಮರೂ ಪ್ರವಾದಿಗಳೂ ಸಾಧುಗಳೂ ಅವತಾರಿಗಳೆ. “ ಮಹತ್ತಾದುದು ಉದಾತ್ತವಾದುದು ಉಜ್ವಲವಾದುದು ಏನಿದೆಯೋ ಅದರಲ್ಲೆಲ್ಲ ನನ್ನ ತೇಜಸ್ಸಿನ ಅಂಶವಿದೆಯೆಂದು ತಿಳಿ” ಎಂದು ಗೀತೆಯಲ್ಲಿ ಹೇಳಿದೆ. ಜಗತ್ತಿನಲ್ಲಿರುವ ಎಲ್ಲ ವಿಭೂತಿಯುಕ್ತ ವಸ್ತುಗಳನ್ನು ಬಣ್ಣಿಸಿದ ನಂತರ ಪರಮಾತ್ಮನು ಈ ಮಾತನ್ನು ಇನ್ನೂ ವಿಸ್ತರಿಸಿ “ ನಾನು ನನ್ನೊಂದು ಅಂಶಮಾತ್ರದಿಂದ ವಿಶ್ವವನ್ನು ವ್ಯಾಪಿಸಿ ಧರಿಸಿದ್ದೇನೆ ” ಅವತಾರದ ತರ್ಕಶುದ್ಧ ಅರ್ಥ ಹೀಗೆ ಮಾತ್ರ ಇರಬಲ್ಲದು. ಪ್ರತಿಯೊಂದು ಹುಲ್ಲು ಕಡ್ಡಿಯೂ ಕಸ್ಪೆಯೂ ಹಲ್ಲಿಯೂ ಆ ಪರಮಾತ್ಮನ ರೂಪಗಳಾಗಿರುವಾಗ ಮಾನವ ಕುಲಕ್ಕಾಗಿಯೆ ಬದುಕಿ ಕೆಲಸ ಮಾಡಿದ ಮಹಾ ಆತ್ಮಕ್ಕೆ ಅವತಾರತ್ವವನ್ನೇಕೆ ಅಲ್ಲಗಳೆಯಬೇಕು ?

ಆದರೆ ಜನರು ಪೌರಾಣಿಕ ರೀತಿಯಲ್ಲಿ ಗಾಂಧೀಜಿಯನ್ನು ಕುರುಡು ನಂಬಿಕೆಯಿಂದ ಅವತಾರವೆಂದು ನಂಬುವದು ಬೇರೆ ಇದು ಬೇರೆ. ೧೪—೩—೪೮ ಧರ್ಮಾಧಿಕಾರಿ

ಗಾಂಧೀ ಮೂರ್ತಿಗಳು

ಮೂರ್ತಿಪೂಜೆ ಮುನಿಸಿಕೊಳ್ಳಬಹುದಾದ ರೀತಿಯಿಂದ ಗಾಂಧೀಜಿಯ ಸ್ಮಾರಕವನ್ನು ರಚಿಸುವುದು ಯುಕ್ತವಲ್ಲವೆಂದು ಪಂಡಿತ ಜವಾಹರಲಾಲ ನೆಹರು ಮತ್ತು ಸರದಾರ ಪಟೇಲರು ನಮ್ಮ ನಾಡಿಗರನ್ನು ಕೇಳಿಕೊಂಡಿರುವುದು ಬಹಳ ಯೋಗ್ಯವಾಗಿದೆ.

ಗಾಂಧಿಯವರ ಪ್ರತಿಬಿಂಬವನ್ನು ಬಣ್ಣದ ಚಿತ್ರ ಮತ್ತು ಮೂರ್ತಿಗಳಲ್ಲಿ ಮೂಡಿಸಿ ವಸ್ತು ಸಂಗ್ರಹಾಲಯಗಳಲ್ಲಿ ಇಲ್ಲವೆ ಸಾರ್ವಜನಿಕ ಸ್ಥಳಗಳಲ್ಲಿ ಇಡಬಹುದು ಆದರೆ ಮೂರ್ತಿಪೂಜೆಗೆ ಮಾತ್ರ ಎಡೆಗೊಡಬಾರದು. ಗಾಂಧಿಯವರು ಮೂರ್ತಿಪೂಜಾವಿರೋಧಿಗಳಾಗಿದ್ದರೆಂದು ನಾನು ಬಲ್ಲೆ. ಅವರು ಸತ್ಯ ಪವಿತ್ರ ಚೈತನ್ಯಗಳನ್ನು ಆರಾಧಿಸಿದರು.

ವೇದಗಳು, ಉಪನಿಷತ್ತುಗಳು ಗೀತೆ ಇವು ಮೂರ್ತಿಪೂಜೆಯನ್ನು ಮಾಡಹೇಳುವುದಿಲ್ಲ. ಪ್ರಚ್ಛನ್ನ ವಾಕ್ಯಗಳಲ್ಲಿ ಪುರಾಣಗಳು ಕೂಡ ದೇವತಾ ಮೂರ್ತಿಗಳು ಕಲ್ಪಿತವೆಂದು ಹೇಳಿವೆ. ನಾವು ಗಾಂಧಿಯವರನ್ನು ದೇವತ್ವಕ್ಕೇರಿಸುವುದು ಬೇಡ, ಆದರೆ ಅವರ ಮಾರ್ಗದಲ್ಲಿ ಪ್ರಾಮಾಣಿಕತೆಯಿಂದ ವರ್ತಿಸಿ ಅವರ ನೆನಪನ್ನು ಗೌರವಿಸೋಣ.

ಅವರ ನೆನಪಿಗಾಗಿ ದೇವಾಲಯಗಳನ್ನೂ ಮೂರ್ತಿಗಳನ್ನೂ ರಚಿಸುವುದರಲ್ಲಿ ನಮ್ಮ ನ ಧನ ಅಲ್ಪ ಐಶ್ವರ್ಯವನ್ನು ದುರ್ವ್ಯಯ ಮಾಡದಿರೋಣ ನಮ್ಮ ರಾಷ್ಟ್ರೀಯ ಕಾಣಿಕೆಗಳನ್ನು ಜನರ ಏಳಿಗೆಗಾಗಿ ಬಳಸೋಣ.

ಓರ್ವ ಧರ್ಮಾಧ್ಯಾಸಿ

ಸ್ತ್ರೀಯರೂ ಸೈನಿಕ ಶಿಕ್ಷಣವೂ

ಸೈನಿಕ ಶಿಕ್ಷಣವನ್ನು ಪಡೆಯುವ ಆತುರ ಸ್ತ್ರೀಯರಲ್ಲಿ ಹೆಚ್ಚುತ್ತಿರುವದನ್ನು ನೋಡಿ ನನಗೆ ವಿಷಾದವಾಗಿದೆ ಒಂದು ದೃಷ್ಟಿಯಿಂದ ಇದರಲ್ಲಿ ವಿಚಿತ್ರವೇನೂ ಇಲ್ಲ ಏಕೆಂದರೆ ಈಚೆಗೆ ನಡೆದ ದುರಂತ ಘಟನೆಗಳಿಂದ, ಕ್ರೋಧೋನ್ಮತ್ತನಾದ ಗಂಡಸು ಅತಿ ಹೇಯ ಪ್ರವೃತ್ತಿಗಿಳಿಯುವನೆಂದೂ ಹಾಗೆ ಇಳಿದಾಗ ಅವನ ಮೊದಲನೆ ಆಹುತಿಯೆಂದರೆ ಹೆಂಗಸೇ ಎಂದೂ ಕಂಡುಬಂದಿದೆ. ಹೆಂಗಸು—ಮಕ್ಕಳನ್ನು ಅಪಹರಿಸುವದು ನಮ್ಮ ಸಮಾಜದ ಘನ ಕಲಂಕ. ಈ ಮಾನವ ಪ್ರಾಣಿಗಳನ್ನು ಪಾರುಮಾಡಲು ಪೋಲೀಸ ಮತ್ತು ಸೈನಿಕ ಬಲವನ್ನು ಪ್ರಯೋಗಿಸಬೇಕಾಗಿ ಬರುವದು ನಾಚಿಕೆಗೇಡೇ ಸರಿ. ಕ್ರೋಧ–ಉದ್ರೇಕಗಳು ಇಳಿದ ಬಳಿಕ, ತಾವು ಅಪಹರಿಸಿಟ್ಟವರನ್ನು ತಾವಾಗಿ ಬಿಡುಗಡೆ ಮಾಡಿ ಪಾಪಪ್ರಕ್ಷಾಲನೆ ಮಾಡಿಕೊಳ್ಳಲು ತಪ್ಪುಗಾರರಿಗೇಕೆ ಸಾಧ್ಯವಾಗಬಾರದು? ಏನೇ ಅಗಲಿ, ಹೆಂಗಸರು ಭಯಭೀತರಾಗಿದ್ದಾರೆ. ಆದರಿಂದ ಅವರು ಆತ್ಮರಕ್ಷಣೆಯ ಬಲವನ್ನು ಅಪೇಕ್ಷಿಸುತ್ತಾರೆ. ಮನುಷ್ಯ ಕುಲದಲ್ಲಿ ಬಹುಸಂಖ್ಯಾಕರು ನಂಬಿರುವಂತೆ, ತಮಗೆ ಬಂದೂಕು ಹಿಡಿಯಲು ತಿಳಿದರೆ ಎಷ್ಟೋ ಧೈರ್ಯ, ಎಂದು ಹೆಂಗಸರೂ ಭಾವಿಸುತ್ತಾರೆ.

ಶಿಸ್ತನ್ನೂ, ಸಹಕಾರಿ ಪ್ರಯತ್ನಗಳನ್ನೂ ಕಲಿಸುವ, ಪ್ರಥಮ ಚಿಕಿತ್ಸೆ, ಶುಶ್ರೂಷಾಕಾರ್ಯ ಇವುಗಳ ಅಭ್ಯಾಸ ಮಾಡಿಸುವ, ಅವರನ್ನು ಸ್ವಾವಲಂಬಿಗಳಾಗಿಯೂ ನಿರ್ಭಯರಾಗಿಯೂ ಮಾಡುವ ಸೈನಿಕ ಶಿಕ್ಷಣ ಸ್ತ್ರೀಯರಿಗೆ ಹಿತಕರವೇ ಅಗಿದೆ. ಆದರೆ ಬಂದೂಕು ಮೊದಲಾದ ಅಗ್ನ್ಯಸ್ತ್ರಗಳ ಪ್ರಯೋಗವನ್ನು ಕಲಿಯುವ ಆತುರ ಮಾತ್ರ ಪ್ರತಿಯೊಂದು ದೇಶದ ಸ್ತ್ರೀ ಜಾತಿ ಎಂದಿನಿಂದಲೂ ರಕ್ಷಿಸುತ್ತ ಬಂದ ಪ್ರಾಚೀನ ಸಂಸ್ಕೃತಿ ನಾಗರಿಕತೆಗಳ ಸಂಪ್ರದಾಯಕ್ಕೆ ವ್ಯತಿರಿಕ್ತವಾಗಿದೆ. ಗಾಂಧೀಜಿ ತಮ್ಮ ದೀರ್ಘ ಐಹಿಕ ಜೀವನದಲ್ಲಿ ಕಲಿಸಿದ ಪಾಠಗಳನ್ನು ನಾನು ನನ್ನ ಭಗಿನಿಯರ ಲಕ್ಷ್ಯಕ್ಕೆ ತರಬಯಸುವೆ. ಸೀತೆ ರಾವಣನ ಬಲವನ್ನೆದುರಿಸಿದ್ದು ಯಾವದೊಂದು ಭೌತಿಕ ಆಯುಧದ ಬಲದಿಂದಲ್ಲ ಕೇವಲ ಅಸ್ಖಲಿತವಾದ ಪಾರಿಶುದ್ಧ್ಯದಿಂದ; ಸ್ತ್ರೀಯರು ತಮ್ಮ ಶೀಲಸಾಮರ್ಥ್ಯ ಮತ್ತು ಆತ್ಮಶಕ್ತಿಯನ್ನೇ ಅವಲಂಬಿಸಬೇಕೆಂದು ಸ್ತ್ರೀ ಜಾತಿಯು ಸ್ವಂತ ಕಲ್ಯಾಣಕ್ಕಾಗಿ ಮಾತ್ರವಲ್ಲ, ಜಗತ್ತಿನ ಕಲ್ಯಾಣದ ದೃಷ್ಟಿಯಿಂದ ನಾನು ಪ್ರಾರ್ಥಿಸುತ್ತೇನೆ.

ಹೊಸದಿಲ್ಲಿ ೧೪—೪—೪೮ ಅ. ಕೌ.

ವಾರದ ಸಿಂಹಾವಲೋಕನ

(ಅನೇ ಪುಟದಿಂದ ಬಂದುದು)

ಕೂಡಿಸುವದು ಅವಶ್ಯವಾಗಿದೆ ಸೀರೆಗಳಿಗೆ ಪ್ರಸಿದ್ಧವಿದ್ದ ಇಳಕಲ್ಲ ತಂಬಾಕಿಗೆ ಪ್ರಸಿದ್ಧವಿರುವ ನಿಪ್ಪಾಣಿಗಳಿಗೆ ರೇಲ್ವೆಯಿಲ್ಲ. ಕರ್ನಾಟಕದ ರೇಲ್ವೆ ಕೊರತೆಗಳನ್ನು ಹೋಗಲಾಡಿಸಲು ಶ್ರೀ ದಾತಾರರು ಕೆಳಗಿನ ಸೂಚನೆಗಳನ್ನು ಮಾಡಿರುವರು. ಮುಂಬಯಿ ಕರ್ನಾಟಕದಲ್ಲಿ, ಹುಬ್ಬಳ್ಳಿ ಕಾರವಾರ (ಅಳಣಾವರ ದಾಂಡೇಲಿ ಮಾರ್ಗವಾಗಿ) ೨) ಕಾರವಾರ ಭಟಕಳ (ಮುಂಬಯಿ ಮಂಗಳೂರ ಕರಾವಳಿ ಮಾರ್ಗದ ಅಂಗವಾಗಿ ಇಲ್ಲವೆ ಬೇರೆ) ೩ ರಾಯಬಾಗ ಬಾಗಲಕೋಟೆ (ಕೊಲ್ಹಾಪುರ ಇಳಕಲ್ಲ ಮಾರ್ಗದ ಅಂಗ) ೪) ಬೆಳಗಾವಿ ಬೈಲಹೊಂಗಲ ಸವದತ್ತಿ ೫) ಹುಬ್ಬಳ್ಳಿ ಸಿರ್ಸಿ (ಹುಬ್ಬಳ್ಳಿ ಜೋಗ ಧಬಧಬೆ ಮಾರ್ಗದ ಅಂಗ) ೬) ಶೇಡಬಾಳ ಅಥಣಿ ವಿಜಾಪುರ ೭) ತೆಲಗಿ ಮುದ್ದೇಬಿಹಾಳ ತಾಳೀಕೋಟೆ ಇವಿಷ್ಟು ಅತ್ಯವಶ್ಯವಾದವುಗಳು. ಮದ್ರಾಸ ಪ್ರಾಂತದಲ್ಲಿ ೧) ಬಂಗಳೂರು ಉಡುಪಿ ೨) ಕಡೂರು ಚಿಕ್ಕಮಗಳೂರು ಮಂಗಳೂರು ೩) ಹಾಸನ ಮಂಗಳೂರು ೪) ರಾಯದುರ್ಗ ಚಿತ್ರದುರ್ಗ ೫) ಹರಿಹರ ಹೊಸಪೇಟೆ ಇವಿಷ್ಟು ಅತ್ಯವಶ್ಯವಾದವು. ಮೈಸೂರು ಸಂಸ್ಥಾನದಲ್ಲಿ ಚಾಮರಾಜನಗರ ಸತ್ಯಮಂಗಲಂ ೨) ತಾಳಗುಪ್ಪಾ ಜೋಗ ಧಬಧಬೆ ೩) ಹೊಸೂರು ಬೆಂಗಳೂರು ಪಶ್ಚಿಮ ಕರಾವಳಿ ರೇಲ್ವೆ ಮಾರ್ಗವನ್ನು ಹಾಕಿ ಮುಂಬಯಿಯನ್ನು ಕೊಂಕಣ ಮಂಗಳೂರು ಹಾಗು ಕೊಚ್ಚಿಯನ್ನು ಜೋಡಿಸುವದು ಅತ್ಯವಶ್ಯವಾಗಿದೆ. ಮಿರಜ ಕುರಂದವಾಡ ಬಾರ್ಶಿಯ ರೇಲ್ವೆ ಮಾರ್ಗವನ್ನು ಸರಿಪಡಿಸಬೇಕು. ಲಾತೂರಿನಿಂದ ಸಿಕಂದರಾಬಾದಕ್ಕೆ ಹೊಸ ಮಾರ್ಗ ಹಾಕಬೇಕು. ಕರ್ನಾಟಕದಲ್ಲಿ ರೇಲ್ವೆ ಸೌಕರ್ಯ ಅತ್ಯಲ್ಪವಿದೆ. ಮೈಸೂರು ಸಂಸ್ಥಾನದಲ್ಲಿ ೮೯೫ ಮೈಲು ಒಟ್ಟು ಕರ್ನಾಟಕದಲ್ಲಿ ೯೬೪ ಮೈಲು ರೇಲ್ವೆಯಿದೆ ಕರ್ನಾಟಕದಲ್ಲಿ ೧೦೦ ಚೌರಸ ಮೈಲುಗಳ ಕ್ಷೇತ್ರಕ್ಕೆ ೩ ಮೈಲು ರೇಲ್ವೆಯಿದೆ ಮೈಸೂರು ಸಂಸ್ಥಾನದಲ್ಲಿ ಈ ಪ್ರಮಾಣವು ೬ ಮೈಲು ಇದೆ. ಸಂಯುಕ್ತ ಪ್ರಾಂತದಲ್ಲಿ ಈ ಪ್ರಮಾಣವು ೫ ಮೈಲು ಇರುವದು. ಇಂಗ್ಲಂಡದಲ್ಲಿ ಮಾದರೋ ೧೧೦ಕ್ಕೆ ೨೫ ಮೈಲು ರೇಲ್ವೆಯಿದೆ ಕರ್ನಾಟಕದ ಉದ್ಯೋಗಾಭಿವೃದ್ಧಿಯಾಗಬೇಕಾದರೆ ರೇಲ್ವೆಗಳ ಪ್ರಗತಿ ಭರದಿಂದ ಆಗಬೇಕಾದುದು ಅವಶ್ಯವೆಂದು ಶ್ರೀ ದಾತಾರರು ಸೂಚಿಸಿದ್ದಾರೆ. ಕರ್ನಾಟಕ ವಣಿಕ್ ಸಂಘದವರೂ ರೇಲ್ವೆ ಸೌಕರ್ಯವನ್ನು ಹೆಚ್ಚಿಸಲು ಬಿನ್ನವಿಸಿಕೊಂಡಿದ್ದಾರೆ

ಭಾರತದ ಎಣ್ಣೆಯ ಸಮಸ್ಯೆ

ಎಣ್ಣೆ ಪೂರೈಕೆ ಹೆಚ್ಚಿಸಿಕೊಳ್ಳುವ ಉಪಾಯ

ನಮ್ಮ ರಾಷ್ಟ್ರದ ಹಿತಕ್ಕೆ ಸಂಬಂಧಿಸಿದ ಒಂದು ಸಂಗತಿಯು ಕಡೆ ಯಾರೂ ವಿಶೇಷ ಲಕ್ಷ್ಯ ಕೊಟ್ಟಂತಿಲ್ಲ ಅದೆಂದರೆ ನಮ್ಮ ಎಣ್ಣೆ (ಕಲ್ಲೆಣ್ಣೆ, ಪೆಟ್ರೋಲ, ಇತ್ಯಾದಿ) ಪೂರೈಕೆಯ ವಿಷಯ.

ಕಳೆದು ಮೂರು ದಶಕಗಳಿಂದ ಅಂತರ್‌ರಾಷ್ಟ್ರೀಯ ರಾಜಕಾರಣ ಎಣ್ಣೆಗಣಿಗಳಿಂದ ಪ್ರೇರೇಪಿಸಲ್ಪಟ್ಟಿದೆ. ಹೀಗಿರುವಾಗ ಹಿಂದುಸ್ತಾನದಂಥ ವಿಸ್ತಾರ ರಾಷ್ಟ್ರಕ್ಕೆ ಎಣ್ಣೆಯ ಮಹತ್ವ ಇಷ್ಟೇ ಎಂದು ಹೇಳಲಾಗಸಲ್ಲ.

ಹಿಂದುಸ್ತಾನಕ್ಕೆ ಬೇಕಾದ ಎಣ್ಣೆಯಲ್ಲಿ ನೂರಕ್ಕೆ ಹತ್ತರಷ್ಟು ಕೂಡ ಇಲ್ಲಿ ಹುಟ್ಟುವದಿಲ್ಲ. ಬಹಳಾದರೆ ನೂರಕ್ಕೆ ೭ ರಷ್ಟು ಮಾತ್ರ ಹೊರಡುತ್ತದೆ. ಯುದ್ಧ ಪ್ರಸಂಗದಲ್ಲಿ ನಾವು ನಮ್ಮ ಯುದ್ಧ ಯಂತ್ರಗಳ ಉರುಳಾಟಕ್ಕೆ ಪೂರ್ತಿ ಪರರಾಷ್ಟ್ರಗಳನ್ನೇ ಎಣ್ಣೆಗಾಗಿ ಅವಲಂಬಿಸಬೇಕಾಗುತ್ತದೆಂದು ಇದರ ಅರ್ಥ.

ಹಿಂದುಸ್ತಾನ-ಪಾಕಿಸ್ತಾನಗಳ ಎಣ್ಣೆ ಪರಿಸ್ಥಿತಿಯನ್ನೆ ನೋಡೋಣ. ಸ್ವಾತಂತ್ರ್ಯ ದೊರೆತಂದಿನಿಂದ ಹಿಂದುಸ್ತಾನದ ಎಣ್ಣೆ ಸಂಗ್ರಹ ಒಂದೇ ಸಮನೆ ಇಳಿಯುತಿದೆ. ಪಾಕಿಸ್ತಾನಕ್ಕೆ ಇಮ್ಮಡಿ ಎಣ್ಣೆ ಆಯಾತದ ಅವಕಾಶ ದೊರೆತು ಅದು ಎಣ್ಣೆಯ ಸಂಗ್ರಹವನ್ನು ಹೆಚ್ಚಿಸುತಿದೆ. ಹಿಂದುಸ್ತಾನಕ್ಕೆ ಎಣ್ಣೆಯನ್ನು ಈಗಿರುವ ಪ್ರಮಾಣದಲ್ಲಿ ಕೂಡ ಒದಗಿಸಲು ಹಾದಿಗಾಣದ ಎಣ್ಣೆಯ ಉತ್ಪಾದಕ ರಾಷ್ಟ್ರಗಳು ಪಾಕಿಸ್ತಾನಕ್ಕೆ ಇಮ್ಮಡಿ ಎಣ್ಣೆಯನ್ನು ಏನೂ ಅಡಚಣೆಯಿಲ್ಲದೆ ಹೇಗೆ ಪೂರೈಸುತಿವೆ? ಪಾಕಿಸ್ತಾನಕ್ಕೆ ಎಣ್ಣೆಯ ಅವಶ್ಯಕತೆ ಕಡಿಮೆಯಿರುವಾಗ ಅದು ಈ ಎಣ್ಣೆಯನ್ನೇನು ಮಾಡುತಿದೆ? ಉತ್ತರ ಸ್ಪಷ್ಟವಿದೆ: ಯುಕ್ತ ರಾಷ್ಟ್ರ ಸಂಘದಲ್ಲಿ ಪಾಕಿಸ್ತಾನವನ್ನು ಬೆಂಬಲಿಸಿದ ಮನೋವೃತ್ತಿಯೇ ಅದರ ಎಣ್ಣೆ ಪೂರೈಕೆಯನ್ನು ಹೆಚ್ಚಿಸುತಿದೆ. ಪಾಕಿಸ್ತಾನ ಆ ಎಣ್ಣೆಯನ್ನು ನೇರವಾಗಿ ಕಾಶ್ಮೀರ ರಂಗಕ್ಕೆ ಕಳಿಸುತ್ತಿದೆ.

ಎಣ್ಣೆಯ ಒಡೆಯರಲ್ಲಿ ನಮಗೆ ಗೆಳೆಯರು ಕಡಿಮೆ, ವಿರೋಧಿಗಳೇ ಹೆಚ್ಚು. ಹೀಗಿರುವಾಗ ಯುದ್ಧವೊದಗಿದರೆ ನಮ್ಮ ಪಾಡೇನು? ನಮ್ಮ ಯುದ್ಧ ಪ್ರಯತ್ನದಲ್ಲಿ ಆಸ್ಥೆಯಿಲ್ಲದ ಎಣ್ಣೆ ಉತ್ಪಾದಕರು ನಮಗೆ ಪೂರೈಕೆಯನ್ನು ಅಲ್ಲಗಳೆದರೆ ಗತಿ?

ಪ್ರಯತ್ನ ಬೇಕು

ನಾವು ಎಣ್ಣೆಗಾಗಿ ಈಗಿಂದಲೆ ಪ್ರಯತ್ನಿಸಬೇಕು ಇಲ್ಲವೆ ಹಾಳಾಗಿ ಹೋಗಬೇಕು. ಇದಕ್ಕೆ ಎರಡು ಹಾದಿಗಳು: ಒಂದು,-ನಾವು ದೇಶದೊಳಗೆ ಎಣ್ಣೆ ಎಲ್ಲೆಲ್ಲಿ ದೊರಕಬಹುದೆಂದು ಕಂಡು ಹಿಡಿದು ಉತ್ಪಾದನೆಯನ್ನು ಬೆಳಸಿಕೊಳ್ಳಬೇಕು. ಎರಡು, ಎಣ್ಣೆಯನ್ನು ಉತ್ಪಾದಿಸುವ ರಾಷ್ಟ್ರಗಳಿಗೆಲ್ಲ ನಮ್ಮ ಪ್ರತಿನಿಧಿಗಳನ್ನು ಕಳಿಸಿ ಸಾಧ್ಯವಿದ್ದಲ್ಲೆಲ್ಲ ಎಣ್ಣೆಯನ್ನು ಕೊಂಡು ತರಬೇಕು.

ಇದಕ್ಕೆ ಕೆಲ ಹಾದಿಗಳನ್ನು ನೋಡೋಣ. ಬ್ರಹ್ಮದೇಶದೊಡನೆ ಸಂಧಾನ ನಡೆಸಿ ಅದು ಎಣ್ಣೆ ಮಾರುವಾಗ ನಮಗೇ ಮೊದಲ ಪ್ರಾಶಸ್ತ್ಯ ಕೊಡುವಂತೆ ಮನವೊಲಿಸಬೇಕು.

ಇಂಡೋನೇಶಿಯಕ್ಕೆ ಪೂರ್ಣ ಸ್ವಾತಂತ್ರ್ಯ ದೊರೆತಾಗ ಅಲ್ಲಿಂದ ನಮಗೆ ಎಣ್ಣೆಯ ಪೂರೈಕೆ ಅಧಿಕ ಪ್ರಮಾಣದಲ್ಲಿ ದೊರೆಯಬಹುದೆಂದು ತಿಳಿಯಲು ಅಡ್ಡಿಯಿಲ್ಲ. ಇಂಡೋನೇಶಿಯನ್ನರ ಹತ್ತಿರ ಎಣ್ಣೆ ತೆಗೆಯಲು ಸಾಕಷ್ಟು ಸಾಧನ ಸಂಪತ್ತಿ ಇಲ್ಲ ವಿದ್ದರೆ ಉಳಿದ ವಿದೇಶಿಯರಿಗಿಂತ ಹೆಚ್ಚಿನ ಸವಲತ್ತು ಕೊಟ್ಟು ನಾವು ಅಲ್ಲಿ ಎಣ್ಣೆಯನ್ನು ತೆಗೆಯುವ ಹಕ್ಕು ಕೊಂಡುಕೊಳ್ಳಲು ಪ್ರಯತ್ನಿಸಬೇಕು. ಇದಕ್ಕೆ ಬಂಡವಲು ಮತ್ತು ತಾಂತ್ರಿಕ ಸಹಾಯ ವನ್ನೊದಗಿಸಲು ಸರಕಾರದ ಸಹಾಯದಿಂದ ಒಂದು ಸಾರ್ವಜನಿಕ ಕಂಪನಿ ಸ್ಥಾಪಿಸುವದೊಳಿತೆಂದು ಹೇಳಬಹುದು. ಇದಕ್ಕೆ ದೀಳುವ ಸರಕಾರಿ ವೆಚ್ಚವನ್ನು ಸಂರಕ್ಷಣ ವೆಚ್ಚವೆಂದೇ ಪರಿಗಣಿಸಬೇಕು.

ನಮ್ಮ ಸ್ವಂತ ಎಣ್ಣೆಗಣಿಗಳು

ಸ್ವತಃ ಹಿಂದುಸ್ತಾನದಲ್ಲಿಯೂ ಎಣ್ಣೆಯನ್ನು ಉತ್ಪಾದಿಸುವ ಅವಕಾಶ ಮಿತವಾಗಿದೆಯೆಂದು ತಿಳಿಯಕೂಡದು. ಅಸಾಮದ ಎಣ್ಣೆಗಣಿಗಳ ವಾಯವ್ಯದಲ್ಲಿ ಎಣ್ಣೆಯ ಅದುರುಗಳಿರುವದು ಈಗಾಗಲೆ ಗೊತ್ತಾಗಿದೆ. ಭೂಮಿಯ ಮೇಲಿನ ಎಣ್ಣೆಯ ಅದುರುಗಳ ನಕ್ಷೆ ನೋಡಿದರೆ ಮಧ್ಯಪೂರ್ವದಿಂದ ಹಿಂದುಸ್ತಾನದ ಮೂಲಕ ಹಾದು ಅದು ಬ್ರಹ್ಮದೇಶಕ್ಕೆ ಹೋದುದು ಕಾಣುತ್ತದೆ. ಅಸಾಮದಿಂದ ಕಾಶ್ಮೀರದ ವರೆಗೂ ಹಿಮಾಲಯದ ತಪ್ಪಲುಗಳಲ್ಲಿ ಎಣ್ಣೆಯ ಎಷ್ಟೋ ಅದುರುಗಳು ಸಿಗುವ ಸಂಭವವಿದೆ. ಕಾಶ್ಮೀರದಲ್ಲಿ ನಾವು ಎಣ್ಣೆಯನ್ನು ತೆಗೆಯಹತ್ತಿದರೆ ಅಟೋಕ ಗಣಿಗಳ ಸೆಲೆ ಸ್ವಲ್ಪ ಮಟ್ಟಿಗೆ ಬತ್ತಿ ಪಾಕಿಸ್ತಾನದ ಎಣ್ಣೆ ಉತ್ಪಾದನೆ ಕುಗ್ಗುವ ಸಂಭವವೂ ಉಂಟು.

ಇದಲ್ಲದೆ ಜರ್ಮನಿಯಂತೆ ಕ್ರೂಡ ಆಯಿಲನ್ನು ಪ್ರಾಕೃತಿಕ ಸಂಪತ್ತಿಯನ್ನು ಉಪಯೋಗಿಸುವ ಪ್ರಯತ್ನವನ್ನು ನಾವಿನ್ನೂ ಮಾಡಬೇಕಾಗಿದೆ. ಆದರೆ ಪೆಟ್ರೋಲಲ್ಲಿ ಮಿಶ್ರಿಸಲು ಕಾಕಂಬಿಯಿಂದ ಮದ್ಯಸಾರವನ್ನು ತೆಗೆಯುವ ವಿಚಾರವನ್ನು ಸರಕಾರ ನಡೆಸಿದ್ದು ಒಳಿತಾಯಿತು. ಕೆಲವು ವನಸ್ಪತಿ ದ್ರವ್ಯಗಳಿಂದಲೂ ಪೆಟ್ರೋಲಿಗೆ ಮಿಶ್ರಿಸಬಹುದಾದ ರಸಗಳು ಸಿಗುವ ಸಂಭವವಿದೆ. ಇವೆಲ್ಲವನ್ನು ಹುಡುಕುವದು ಅತ್ಯವಶ್ಯ.

ಎಣ್ಣೆ ತೆಗೆಯುವ ಮತ್ತು ಅದನ್ನು ಶುದ್ಧಗೊಳಿಸುವ ಕೆಲಸ ಅಗ್ಗವಾಗಿ ಆಗುವದಿಲ್ಲ. ಹತ್ತು ಕಡೆ ಅಗೆದರೆ ಒಂದೆಡೆ ಎಣ್ಣೆ ಸಿಗುವದು ದುರ್ಲಭ. ಇದಕ್ಕೆ ಕೋಟಿಗಟ್ಟಲೆ ಬಂಡವಳ ಬೇಕು. ಇದು ಸರಕಾರದ ಬೆಂಬಲ, ಸಹಾಯವಿಲ್ಲದೆ ಅಗಲಾರದು. ಸಾಲದ್ದಕ್ಕೆ ಪ್ರಾರಂಭದಲ್ಲಿ ವಿದೇಶಗಳಿಂದ ಬಹಳ ಸಂಖ್ಯೆಯಲ್ಲಿ ತಜ್ಞರನ್ನು ಕರೆಸಿಕೊಳ್ಳಬೇಕಾದೀತು. ಆದರೆ ಇಷ್ಟೆಲ್ಲ ತೊಂದರೆಗಳು ನಿರ್ಥಕವಾಗಲಾರವು. ಎಣ್ಣೆಯ ವಿಷಯದಲ್ಲಿ ಸ್ವಾವಲಂಬಿಯಾಗದ ಯಾವ ರಾಷ್ಟ್ರವೂ ಬಹುಕಾಲ ಆತ್ಮರಕ್ಷಣೆ ಮಾಡಿಕೊಳ್ಳಲಾರದು. ಅದರಿಂದ ಹಿಂದೀ ಸರಕಾರವೂ ಉದ್ದಿಮೆಗಾರರೂ ಇದನ್ನು ಅವಶ್ಯ ಗಮನಿಸಬೇಕು

ಉತ್ತರ ಕನ್ನಡ ಜಿಲ್ಲೆಯ ಸಂಪತ್ತು

(೫ನೆಯ ಪುಟದಿಂದ)

ಯಲ್ಲಿ ದೊರೆಯುವದು. ಈ ರೀತಿಯಾಗಿ ಉತ್ತರ ಕನ್ನಡದ ಭೂಪ್ರದೇಶದಲ್ಲಿ ಅಮೌಲ್ಯವಾದ ಸಂಪತ್ತುಗಳು ದೊರೆಯುತ್ತಿದ್ದರೂ ಉತ್ತರ ಕನ್ನಡಿಗರ ದುರ್ಭಾಗ್ಯದಿಂದ ಅವುಗಳ ಲಾಭ ಸಿಗದಾಗಿದೆ ಇದಕ್ಕೆಲ್ಲ ಕಾರಣಗಳಿವೆ. ಹಳ್ಳಿಗಳಲ್ಲಿ ಅಜ್ಞಾನ ಆವರಿಸಿದೆ. ಶಹರಗಳಲ್ಲಿಯ ವಿದ್ಯಾವಂತರು ವ್ಯಾಪಾರ, ವಕೀಲಿ, ನೌಕರಿ, ಮೊದಲಾದವುಗಳ ವಿನಾ ಉದ್ಯೋಗಾಭಿವೃದ್ಧಿಯ ಕಡೆಗೆ ಲಕ್ಷ್ಯ ಹಾಕಲಿಲ್ಲ. ಹಿಂದಿನ ಸರಕಾರವೂ ಬೆಂಬಲ ವೀಯಲಿಲ್ಲ. ಅದರಿಂದಲೂ ಮಾರ್ಗ ಮತ್ತು ಸಾರಿಗೆಯ ಸೌಕರ್ಯಗಳ ಅಭಾವದಿಂದಲೂ, ಮಲೇರಿಯಾ ಬಾಧೆಯಿಂದಲೂ, ಇಲ್ಲಿ ಯಾವುದೊಂದು ಪ್ರಸಿದ್ಧ ಉದ್ಯೋಗಗಳೂ ಪ್ರಾರಂಭವಾಗಲಿಲ್ಲ.

ಉತ್ತರ ಕನ್ನಡದ ಭೂ ಸಂಪತ್ತು ಈ ರೀತಿಯಾಗಿ ದೇಶಾಭ್ಯುದಯಕ್ಕೆ ಸಹಾಯಕವಾಗಿದ್ದಾಗ ಇದೀಗ ಜನತಾ ಸರಕಾರವು ದೇಶಾಭಿವೃದ್ಧಿಗೆ ಅನುಕೂಲವಾಗಿದ್ದಾಗ, ಹಲವಾರು ಉದ್ಯೋಗಗಳನ್ನು ಪ್ರಾರಂಭಿಸಲಿಕ್ಕೂ, ಪ್ರಾರಂಭಿಸುವ ಜನರಿಗೆ ಸಲಹೆ, ಸೌಕರ್ಯವಿತ್ತು ಪ್ರೋತ್ಸಾಹವೀಯಲಿಕ್ಕೆ ಸಿದ್ಧವಿರುವಾಗ ಉತ್ತರ ಕನ್ನಡಿಗರೂ, ಅಖಿಲ ಕನ್ನಡಿಗರೂ ಇತ್ತ ಲಕ್ಷ್ಯ ಪೂರೈಸಬೇಕು. ಸರಕಾರವು ಸಂಶೋಧನಾ ಕಾರ್ಯ ನಡೆಸಬೇಕು.

ರೂಪರಂಗ

ಮಹಾತ್ಮಾಗಾಂಧಿ

ಈ ಚಿತ್ರಕ್ಕೆ ವಸ್ತುಸಂಗ್ರಹ ಮಾಡಲು ೧ ಲಕ್ಷ ಮೈಲು ಪ್ರವಾಸ ಮಾಡಬೇಕಾಯಿತು; ನಾಲ್ಕು ಖಂಡಗಳಲ್ಲಿ ಸಂಚರಿಸಬೇಕಾಯಿತು. ಚಿತ್ರಗ್ರಹಣದಲ್ಲಿ ವಿವಿಧ ರಾಷ್ಟ್ರಗಳ ಸುಮಾರು ನೂರು ಜನ ಚಿತ್ರಗ್ರಾಹಕರ ಕೈವಾಡವಿದೆ; ಅವರ ೩೭ ವರ್ಷಗಳ ಕೆಲಸ ಅದರಲ್ಲಿ ಅಡಗಿದೆ. ಚಿತ್ರದ ಸಂಗತಿಗಳ ಸಂಕಲನಕ್ಕೆ ಸುಮಾರು ಜಗತ್ತಿನ ನಾನಾ ಭಾಷೆಗಳಲ್ಲಿ ಬರೆದಿರುವ ೨೦೦ ಪುಸ್ತಕಗಳನ್ನು ಅವಲೋಕಿಸಬೇಕಾಯಿತು.

ಚಿತ್ರಗ್ರಹಣದ ವಿಚಾರವು ೧೯೩೭ ರ ಅಕ್ಟೋಬರ ೨ ನೆಯ ತಾರೀಕಿನಲ್ಲಿ (ಗಾಂಧಿಯವರ ಹುಟ್ಟು ಹಬ್ಬದ ದಿನ) ಡಬ್ಲಿನ್ನಿಗೆ ಹೋಗುತ್ತಿದ್ದ ಹಡಗಿನಲ್ಲಿ ಕುಳಿತ ಒಬ್ಬ ವಿದ್ಯಾರ್ಥಿಗೆ ಹೊಳೆಯಿತು. ಆ ವಿದ್ಯಾರ್ಥಿಯೆಂದರೆ ಶ್ರೀ ಏ. ಕೆ. ಚೆಟ್ಟಿಯಾರರು; ಯುರೋಪುಖಂಡವನ್ನು ಅವರು ೩ ತಿಂಗಳುಗಳ ಕಾಲ ಸಂಚರಿಸಿ ೧೯೩೮ ರಲ್ಲಿ ಭಾರತಕ್ಕೆ ಹಿಂದಿರುಗಿದರು.

ಬೇರೆ ಬೇರೆ ಚಿತ್ರಕರ್ತರೊಡನೆ ಬಹಳ ಚರ್ಚೆ, ಸಂಧಾನಗಳನ್ನು ನಡೆಸಿದ ನಂತರ ಚೆಟ್ಟಿಯಾರರು ಮದ್ರಾಸಿನಲ್ಲಿ "ಡಾಕ್ಯುಮೆಂಟರಿ ಫಿಲ್ಮ್ಸ್ ಲಿಮಿಟೆಡ್" ಎಂಬುದನ್ನು ತಮ್ಮ ಮಿತ್ರರ ಸಹಾಯದಿಂದ ಸ್ಥಾಪಿಸಲು ಶಕ್ತರಾದರು. ಅನಂತರ ಪುನಃ ಅವರು ತಮ್ಮ ತಿರುಗಾಟವನ್ನು ಪ್ರಾರಂಭಿಸಿದರು. ಅವರು ಅತ್ಯುತ್ತಮ ದರ್ಜೆಯ ಚಿತ್ರಗ್ರಾಹಕರನ್ನು ಕರೆದುಕೊಂಡು ಹಿಂದುಸ್ತಾನವನ್ನಷ್ಟೇ ಅಲ್ಲದೆ ಅರ್ಧ ಭೂಗೋಲವನ್ನೇ ಅತಿಶೀಘ್ರಗಾಮಿಯಾದ ವಾಹನವನ್ನೇರಿ ಸಂಚರಿಸಿ ಬಂದರು. ವಿಶೇಷತಃ ಅವರು ಅಮೇರಿಕ ಮತ್ತು ಫ್ರಾನ್ಸ್‌ದೇಶಗಳಲ್ಲಿಯ ಗಾಂಧಿ ಸಂಬಂಧಿ ಚಲನಚಿತ್ರಗಳ ಅಂಶಗಳನ್ನೆಲ್ಲ ಕಲೆಹಾಕಿದರು. ಈಯೆಲ್ಲ ಪ್ರಯತ್ನಗಳ ಫಲವಾಗಿ ನಾವಿಂದು ಅಮರರಾದ ಮಹಾತ್ಮಾ ಗಾಂಧಿಯವರ ಜೀವನದ ಚಟುವಟಿಕೆಗಳನ್ನು ಚಿತ್ರರೂಪದಲ್ಲಿ ಸಮಗ್ರವಾಗಿ ಕಂಡು ಆನಂದಿಸುವ ಸಂದರ್ಭ ಉಂಟಾಗಿದೆ. ಹುಬ್ಬಳ್ಳಿಯ 'ರೂಪಂ' ಚಿತ್ರಮಂದಿರದಲ್ಲಿ ಈಗ ಅದನ್ನು ಪ್ರದರ್ಶಿಸಲಾಗುತ್ತಿದೆ.

× × ×

ರೂಸ್ವೆಲ್ಟರ ಕಥೆ

ಒಂದು ಒಳ್ಳೆಯ ಭಾವವಿದೆ, ಅದನ್ನು ತಾನು ಜನರಿಗೆ ಮಾರಬಲ್ಲೆ—ಎಂದು ಚಿತ್ರಕರ್ತನು ಭಾವಿಸುವುದೇ ಚಿತ್ರದ ತಯಾರಿಕೆಯ ಬೀಜ ಆದರೆ "ರೂಸ್ವೆಲ್ಟರ ಕಥೆ" ಯಲ್ಲಿ ಇದಕ್ಕೆ ವಿಪರೀತವೆನಿಸುವ ಸಂಗತಿ ನಡೆದು ಹೋಗಿದೆ ಸಹಚಿತ್ರಕರ್ತನಾದ ಮಾರ್ಟಿನ್ ಲೆವೈನನು— "ರೂಸ್‌ವೆಲ್ಟರು ಶ್ವೇತಭವನದಲ್ಲಿ ಮಾತ್ರವಲ್ಲ, ವಾರ್ತಾಚಿತ್ರಗಳಲ್ಲಿ ಮತ್ತು ... ಕೂಡ ಉಪಸ್ಥಿತರಿದ್ದಿಲ್ಲ. ... ಯ ಗೆಳೆಯರಿದ್ದರು. ಒಮ್ಮೆ ... ರನ್ನು ಕಾಲಪು ಅವುಗಳಿಂದ ಎತ್ತಿ ... ಯ್ದನು. ಅವರ ಅಭಾವವನ್ನು ... ಶಕ್ತಿಯನ್ನು ಪಡೆಯಬೇಕಾದರೆ ಅವು ... ಬಹಳ ಕಾಲ ಬೇಕು, ಎಂದಿದ್ದಾನೆ.

ಚಿತ್ರದಲ್ಲಿ ರೂಸ್ವೆಲ್ಟರ ಜೀವನದ ... ಳನ್ನು ತರುವ ವಿಚಾರಕ್ಕೆ ... ಎಲೀನರರು ಒಪ್ಪಿಗೆಯಿತ್ತರು. ... (ನಟ)ನೂ ರೂಸ್ವೆಲ್ಟರ ಪಾತ್ರವನ್ನು ಅಭಿನ... ಗಾವುದಿಲ್ಲವೆಂದೂ ಸತ್ಯ ಸಂಗತಿಗಳನ್ನೇ ... ಟಿಸಲಾಗುವುದೆಂದೂ ... ಜನರಲ್ ಇಲಿಯಟ್ ರೂಸ್ವೆಲ್ಟರು ... ಕೀಯ ಸಲಹೆಗಾರರಾಗಲೊಪ್ಪಿದರು. ... ಗಟ್ಟಲೆಯ ಚರ್ಚೆಗಳ ನಂತರ ... ಯೂ ರೇಡಿಯೋ ಲೇಖಕನೂ ಆದ ... ಎಂ. ಕ್ಲೀ ಎಂಬವನು ಚಿತ್ರ... ಪೂರ್ಣಗೊಳಿಸಿದರು. ಆತನ... ಮುನ್ನ ೧೦ ಜನ ಉಮೇದುವಾರರನ್ನು ... ರೂಸ್ವೆಲ್ಟರು ನಿರಾಕರಿಸಿದ್ದರು. ಆ ... ಮಾಲಿಕೆ ೧೦ ಲಕ್ಷ ಅಡಿ ಉದ್ದವಿದೆ. ಅದರ... ಅವಶ್ಯವಿದ್ದ ಸಂಗತಿಗಳ ಚಿತ್ರಗಳನ್ನು ... ಕೂಡಿಸಿ ಚಿತ್ರಕ್ಕೆ ಅಂತ್ಯದ ರೂಪವನ್ನು ... ಲಾಯಿತು.

\+ \+

ಸ್ನೇಹಪ್ರಭೆಯ ಮುನ್ನಡೆ

ಜಯಶಕ್ತಿ ಉತ್ಪಾದನ ಕೇಂದ್ರದ "... ಮೋತಿ" "ಅಮೂಲ್ಯ ಮುಕ್ತಾಫಲ" ... ದಲ್ಲಿ ಸ್ನೇಹಪ್ರಭಾ ಪ್ರಧಾನಳು ... ಲೆಂದು ಸುದ್ದಿಯಿದೆ. ಅವರ ಕರ್ತ... ಗುಪ್ತನು ಈ ಮುಕುಟದ ಉತ್ತ... ಚಿತ್ರಗಳ ವರ್ಗಕ್ಕೆ ಸೇರುವಂತೆ ಅದನ್ನು ... ಸಲು ಹವಣಿಸಿರುವನಂತೆ. ಪಂಡಿತ ... ವರು ಕಥನಕಾರರು ಮತ್ತು ರಾಮು ... ವರು ಸಂಗೀತ ದಿಗ್ದರ್ಶಕರು.

ಪಾತ್ರವರ್ಗದಲ್ಲಿ ಇಂದುಪಾಲ್, ... ಕಾಂತ್ ರಮೇಶ ಸಿನ್ಹ ಮತ್ತು ... ಎಂಬವರು ಮುಖ್ಯರು. ಶಾಂತಿ ... ಚಿತ್ರದಿಗ್ದರ್ಶಕರು.

ಬಾಂಬೇ ಟಾಕೀಸಿನಲ್ಲಿ ನಾಳೆ "ಮಜಬೂ..." ಚಿತ್ರ ಹೊರಬೀಳಲಿದೆ. ಅಶೋಕ ... ಮತ್ತು ಸಾವರ್‌ವಚಾ ಇವರು ಬಹಳ ... ಅಭಿನಯಿಸಿರುವರೆಂದು ಪ್ರತೀತಿಯಿದೆ.


ಮೇ ದಿನದ ಸಮಾರಂಭದ ಮೂಲವೆಲ್ಲಿ?

ಹಿಂದೀ ಕೂಲಿಕಾರ ಚಳವಳಿಯ ಕಥೆ

ಮೇ ದಿನ— ಅಂದರೆ ಮೇ ತಿಂಗಳ ಮೊದಲನೆ ದಿನ— ಹೆಚ್ಚು ಕಡಿಮೆ ಇಡಿ ಜಗತ್ತಿನಲ್ಲಿಂದು ಕೂಲಿಕಾರರ ದಿನವಾಗಿ ಆಚರಿಸಲ್ಪಡುತ್ತಿದೆ. ಕೂಲಿಕಾರರ ರಾಜ್ಯವಾದ ಸೋವಿಯೆಟ್ ಯೂನಿಯನ್ನಿನ ರಾಜಧಾನಿ ಮಾಸ್ಕೋದಲ್ಲಿ ಪ್ರಚಂಡ ಮೆರವಣಿಗೆ, ಗರ್ಜನೆ, ಮಿಲಿಟರಿ ಕವಾಯತುಗಳೊಡನೆ ಮೇ ದಿನೋತ್ಸವ ಜರಗುತ್ತದೆ. ಕೂಲಿಕಾರರ ಶಕ್ತಿ ಸ್ವಲ್ಪವಾದರೂ ಇರುವ ಎಲ್ಲ ದೇಶಗಳಲ್ಲಿ ಈ ಸಮಾರಂಭವನ್ನು ಕೂಲಿಕಾರರು ಪ್ರದರ್ಶನ ಸಭೆ ಭಾಷಣಗಳೊಡನೆ ನಡೆಸುತ್ತಾರೆ. ಹಿಂದುಸ್ತಾನದಲ್ಲಿಯೂ ಅದೇ ದಿನವನ್ನು ಕೂಲಿಕಾರರ ದಿನವಾಗಿ ಆಚರಿಸಬೇಕೆಂದು ಸಾಮ್ಯವಾದಿ ಪಕ್ಷದವರು ಮೊನ್ನೆ ಮಾರ್ಚನಲ್ಲಿ ನಿರ್ಧರಿಸಿದರು. ಇದರ ಪ್ರಕಾರ ಮೊನ್ನೆ ಮೇ ೧ ಹಿಂದುಸ್ತಾನದ ಪ್ರಮುಖ ಔದ್ಯೋಗಿಕ ನಗರಗಳಲ್ಲಿ ಆಚರಿಸಲ್ಪಟ್ಟಿತು.

ಮೇ ದಿನದ ಮೂಲ

ಹೀಗೆ ಜಗತ್ತಿನಲ್ಲೆಲ್ಲ ಇಂದು ಮೇ ದಿನವನ್ನು ಕೂಲಿಕಾರರು ಆಚರಿಸುತ್ತಿದ್ದರೂ ಇದು ಯಾವ ವಂಶದಿಂದ ಉದ್ಭವಿಸಿತೆಂದು ಹೇಳುವದು ಕಠಿಣ. ಕೆಲವರು ಇಂಗ್ಲಂಡಿನಲ್ಲಿ ಬಹಳ ಹಿಂದಿನಿಂದ ಆಚರಿಸಲ್ಪಡುತ್ತಿದ್ದ "ಮೇ ಫೇರ್"



ಸಾಮ್ಯವಾದಿ ಜಯಪ್ರಕಾಶ ಚಳವಳಿಯಲ್ಲಿ ಹೊಸ ಶಕ್ತಿ



ಶ್ರೀ. ಎಂ. ಎನ್. ಜೋಶಿ
ಹಳೆಯ ಹುಲಿ

ಅಥವಾ ಸುಗ್ಗಿ ಹಬ್ಬವನ್ನು ಇದರ ಉಗಮವೆಂದು ಅಂದಾಜು ಮಾಡುತ್ತಾರೆ. ಆದರೆ ಇದು ಎಷ್ಟು ಸರಿಯೋ ನಾ ಕಾಣೆ. ಯಾಂತ್ರಿಕ ಕ್ರಾಂತಿಯ ನಂತರ ಕೂಲಿಕಾರ ವರ್ಗ ಬೆಳೆದು ಬಂಡವಲಗಾರರ ದಬ್ಬಾಳಿಕೆಯನ್ನೆದುರಿಸಲು ಟೊಂಕ ಕಟ್ಟಿದಾಗಲೇ ಈ ಮೇ ದಿನಾಚರಣೆಯ ರೂಢಿ ಪ್ರಾರಂಭವಾಯಿತು. ಬ್ರಿಟಿಶ ಕೂಲಿಕಾರ ಚಳವಳಿಯ ಮೂಲ ಪುರುಷರಲ್ಲೊಬ್ಬನಾದ ರಾಬರ್ಟ ಓವೆನ್ನನು ಮೊಟ್ಟ ಮೊದಲು ೧೮೩೩ರಲ್ಲಿ ಇದನ್ನೊಂದು ಶಕಾರಂಭ ದಿನವಾಗಿ ನೇಮಿಸಿದನು. ಬಹಳ ಮಾಡಿ ಆತ ಮತ್ತಾವ ಪರಂಪರೆ ನೋಡದೆ ತನ್ನ ಮನಸಿಗೆ ತೋರಿದಂತೆ ನಿರ್ಣಯಿಸಿರಬೇಕು.

ಆದರೆ ಮೇ ದಿನ ಕೂಲಿಕಾರರ ಅಂತರ್‌ರಾಷ್ಟ್ರೀಯ ಹಬ್ಬವಾಗಿ ರೂಪುಗೊಂಡದ್ದು ಅದಕ್ಕೂ ಅರ್ಧ ಶತಕದ ಅನಂತರ. ಫ್ರಾನ್ಸಿನಲ್ಲಿ ೧೮೮೯ರಲ್ಲಿ ಕೂಲಿಕಾರ ಕ್ರಾಂತಿಯಾದ ನಂತರ ಎರಡನೆ ಅಂತರ್‌ರಾಷ್ಟ್ರೀಯ ಸಾಮ್ಯವಾದಿ ಪರಿಷತ್ತಿನ ಅಂಗವಾಗಿ ೧೮೯೦ರಲ್ಲಿ ಮೇ ದಿನ ಆಚರಿಸಲ್ಪಟ್ಟಾಗಲೆ ಅದರ ಪ್ರಸಿದ್ಧಿ ಬೆಳೆಯತೊಡಗಿತು. ಎರಡನೆ ಅಂತರಾಷ್ಟ್ರೀಯ ಸಮ್ಮೇಲನ ಮೇ ೧ನ್ನು ಪ್ರತಿ ವರ್ಷ ಅಂತರ್‌ರಾಷ್ಟ್ರೀಯ ಕೂಲಿಕಾರ ದಿನವಾಗಿ "ಪ್ರತ್ಯಕ್ಷ ಕ್ರಿಯೆ"ಯೊಂದಿಗೆ ಆಚರಿಸಬೇಕೆಂದು ವಿಧಿಸಿತು. ಅಂದಿನಿಂದ ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಕೂಲಿಕಾರರು ಮೇ ದಿನವನ್ನು ಆಚರಿಸಲು ಯತ್ನಿಸಿ ಅದನ್ನು ತಡೆದ ಪೋಲೀಸರೊಂದಿಗೆ ತಿಕ್ಕಾಟಿಕ್ಕಿ ನಿಂತದ್ದು ಉಂಟು. ಮೇ ಮೊದಲನೇ ದಿನವನ್ನು ರಜಾ ದಿನವಾಗಿ ಮಾಡಬೇಕೆಂಬ ಬೇಡಿಕೆಯೂ ಮುಂದೊಡ್ಡಲ್ಪಟ್ಟಿತ್ತು.

ವಿವಿಧ ದೇಶಗಳಲ್ಲಿ

ಒಂದು ಲೆಕ್ಕದಿಂದ ಮೇ ದಿನದ ಮೂಲಸ್ಥಾನವೆನಿಸಬಹುದಾದ ಇಂಗ್ಲಂಡಿನಲ್ಲಿ ಕೂಲಿಕಾರ ದಿನ ಮೇ ೧ಕ್ಕೆ ಆಚರಿಸಲ್ಪಡದೆ ಮೇ ತಿಂಗಳ ಮೊದಲನೆ ರವಿವಾರ ಆಚರಿಸಲ್ಪಡುತ್ತಿದೆ. ಅದೂ ೧೮೯೦ ರಿಂದೀಚೆಗೆ. ಹೈಡ್ ಪಾರ್ಕಿನಲ್ಲಿ ಸಭೆ ಪ್ರದರ್ಶನಗಳೊಡನೆ ಇದು ನಡೆಯುವದು ರೂಢಿ.

ಅಮೇರಿಕೆಯಲ್ಲಿ ಮೇ ತಿಂಗಳಲ್ಲಿ ಕೂಲಿಕಾರ ದಿನ ಆಚರಿಸಲ್ಪಡದೆ ಸೆಪ್ಟೆಂಬರದ ಮೊದಲನೆ ಸೋಮವಾರ ನಡೆಯುತ್ತಿದೆ. ಅದರ ಆರಂಭ ಎಂಟು ತಾಸಿನ ದಿನಕ್ಕಾಗಿ ಚಿಕಾಗೊ ಕೂಲಿಕಾರರು ೧೮೮೬ರಲ್ಲಿ ಪ್ರಚಂಡ ಮೆರವಣಿಗೆ ತೆಗೆದದ್ದರೊಡನಾಯಿತು.

ರಶಿಯದಲ್ಲಂತೂ ಅದು ಸಾರ್ವಜನಿಕ ಬಿಡುವಿನ ದಿನವೇ.

ಕೆನಡಾ ಹಾಗು ಅಮೇರಿಕೆಯ ಇತರ ದೇಶಗಳಲ್ಲಿಯೂ ಮೇ ೧ ಕೂಲಿಕಾರ ದಿನವಾಗಿ ಆಚರಿಸಲ್ಪಡುತ್ತಿದೆ. ಫಿಲಿಪೈನ್ಸನಲ್ಲಿಯೂ ಹಾಗೆಯೆ.

ಇಟಲಿಯಲ್ಲಿ ಮೇ ೧ನ್ನು ಕೂಲಿಕಾರ ದಿನವಾಗಿ ಆಚರಿಸಕೂಡದೆಂದು ನಿರ್ಬಂಧವುಂಟಂತೆ. ಅಲ್ಲಿನ ಕೂಲಿಕಾರರ ಸ್ವದೇಶ ಪ್ರೇಮವನ್ನು ತೋರಿಸಲು ರೋಮ್ ನಗರ ಸ್ಥಾಪನೆಯ ದಿನವನ್ನು ಕೂಲಿಕಾರ ದಿನವಾಗಿ ಆಚರಿಸುತ್ತಾರೆ.

ಹಿಂದುಸ್ತಾನದಲ್ಲಿ ಮೇ ದಿನಾಚರಣೆ ಈಚೆಗೆ ಕೆಲ ವರ್ಷಗಳಿಂದ ಹೆಚ್ಚಾಗಿ ಕಮ್ಯುನಿಸ್ಟ ನೇತೃತ್ವದಲ್ಲಿ ಆಚರಿಸಲ್ಪಡುತ್ತಿದ್ದರೂ ಕೂಲಿಕಾರರು ಸಾಮೂಹಿಕವಾಗಿ ಅದನ್ನು ತಮ್ಮ ದಿನವಾಗಿ ಒಪ್ಪಿಕೊಂಡಿದ್ದರು. ಈಬಾರಿ ಸಾಮ್ಯವಾದಿಗಳೂ ಅದರಲ್ಲಿ ಸೇರಿದ್ದಾರೆ.

ಹಿಂದುಸ್ತಾನದಲ್ಲಿ ಕೂಲಿಕಾರ ಚಳವಳಿ

ಕೂಲಿಕಾರರ ದಿನವನ್ನು ಚರ್ಚಿಸುವ ಈ ಸಂದರ್ಭದಲ್ಲಿ ಹಿಂದುಸ್ತಾನದ ಕೂಲಿಕಾರ ಚಳವಳಿಯ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಅವಲೋಕಿಸುವದು ಅಪ್ರಸ್ತುತವಾಗಲಾರದು. ಬ್ರಿಟಿಶರು ಈ ದೇಶವನ್ನು ಆಕ್ರಮಿಸಿದಾಗ ಅದಿನ್ನೂ ಇನಾಮುದಾರಿ ಸ್ಥಿತಿಗತಿಯಿಂದ ಹೊರಬಂದಿದ್ದಿಲ್ಲ. ಯಾಂತ್ರಿಕ ಉದ್ಯೋಗಗಳು ಹಿಂದುಸ್ತಾನದಲ್ಲಿ ಇದ್ದೇ ಇಲ್ಲ. ಬ್ರಿಟಿಶರಾದರೂ ಇಲ್ಲಿನ ಪ್ರಾಚೀನ ಆರ್ಥಿಕ ಕಟ್ಟಡವನ್ನು ಕೆಡಹಿದರಲ್ಲದೆ ಹೊಸದನ್ನು ಕಟ್ಟಲು ಯತ್ನಿಸಲಿಲ್ಲ. ಮೊದಲನೆ ಮಹಾಯುದ್ಧದ ವರೆಗೆ ಇಲ್ಲಿ ಹೇಳಿಸಿಕೊಳ್ಳುವಂಥ ಔದ್ಯೋಗಿಕ ಬೆಳವಣಿಗೆಯಿದ್ದೇ ಇಲ್ಲ. ಇದ್ದ ಕೆಲವೊಂದು ಕಾರಖಾನೆಗಳಲ್ಲಿ ಕೂಲಿಕಾರ ಸಂಘಟನೆಯಿದ್ದಿಲ್ಲ. ಕೂಲಿಕಾರರನ್ನು ನಡೆಸಿಕೊಳ್ಳಬೇಕಾದ ರೀತಿನೀತಿಯನ್ನು ಕುರಿತು ಯಾವ ಕಾಯದೆ—ಕಾನೂನುಗಳೂ ಇದ್ದಿಲ್ಲವಾಗಿ ಅವರು ಒಡೆಯರು ಹಾಕಿದ ಕರಾರಿಗೊಪ್ಪಿ ಅವರು ಹೇಳುವಷ್ಟು ತಾಸೂ ದುಡಿಯಬೇಕಾಗುತ್ತಿತ್ತು. ಅವರು ಕೊಟ್ಟಷ್ಟು ರೊಕ್ಕ ತೆಗೆದುಕೊಳ್ಳಬೇಕಾಗುತ್ತಿತ್ತು. ಇಂಥ ಸ್ಥಿತಿಯಲ್ಲಿ ಲೋಕಾಂಡೇ ಎಂಬವನೊಬ್ಬನು ಹಿಂದುಸ್ತಾನದ ಇತಿಹಾಸದಲ್ಲಿ ಮೊಟ್ಟ ಮೊದಲನೆ ಸಂಘವನ್ನು ಹೂಡಿಸಿದನೆಂದು ಹೇಳಲಾಗುತ್ತದೆ. ಆದರೆ ಅದರ ವಿವರಗಳು, ಕಾಲ ಯಾವುದೂ ಗೊತ್ತಿಲ್ಲ. ಆದ್ದರಿಂದ ಅವನು ಬರಿ ಪುರಾಣದ ಪುರುಷನಾಗಿ ಉಳಿದಿದ್ದಾನೆ.

೧೯೨೦ ರಲ್ಲಿ ಅ. ಭಾ. ಟ್ರೇಡ ಯೂನಿಯನ್ ಕಾಂಗ್ರೆಸ್ಸು ಸ್ಥಾಪಿತವಾದಾಗಲೇ ಹಿಂದುಸ್ತಾನದಲ್ಲಿ ಕೂಲಿಕಾರ ಚಳವಳಿಗೆ ಒಂದು ಮೂರ್ತಸ್ವರೂಪ ದೊರೆತದ್ದು. ಪ್ರಾರಂಭದಲ್ಲಿ ಅದರ ಸದಸ್ಯರು ೧೦೦೦೦ ಕ್ಕಿಂತ ಹೆಚ್ಚಾಗಿದ್ದಿಲ್ಲ. ಅದರ ಮೂಲ ಪುರುಷರು ರಾಜಕೀಯಕ್ಕಿಂತ ಸಾಮಾಜಿಕ ಮತ್ತು ಭೂತದಯಾ ದೃಷ್ಟಿಯಿಂದ ಪ್ರೇರಿತರಾಗಿದ್ದರು. ೧೯೨೦ ರಿಂದ ೨೯ ರ ವರೆಗೆ ಕಮ್ಯುನಿಸ್ಟರು ಈ ಸಂಘದೊಳಗೆ ಮೆಲ್ಲಮೆಲ್ಲನೆ ಹೊಕ್ಕು ಕೆಲವೆಡೆ ಅದರ ಸೂತ್ರಗಳನ್ನು ಕೈಗೆ ತೆಗೆದುಕೊಂಡು ಚಳವಳಿಯಲ್ಲಿ ಆರ್ಥಿಕಕ್ಕಿಂತ ರಾಜಕೀಯ, ಭೂತದಯೆಗಿಂತ ವರ್ಗ ದ್ವೇಷದ ಆಯುಧಗಳನ್ನು ಸಮೆದು ಅನೇಕ ಸಂಪುಗಳನ್ನು ಹೂಡಿಸಿದರು.

ಹಲವು ಏರಿಳಿತಗಳು

ಅಂದಿನಿಂದೀಚೆಗೆ ಹಿಂದೀ ಕೂಲಿಕಾರ ಚಳವಳಿ ಹಲವು ಏರಿಳಿತ, ಎಗ್ಗು—ಮುಗ್ಗುಗಳಿಂದ ಮುಂದೆ ಸಾಗುತಿದೆ. ಕೂಲಿಕಾರರಲ್ಲಿ ತಮ್ಮ ಭವಿಷ್ಯದ ಬಗ್ಗೆ ಭಾರೀ ಕಲ್ಪನೆಗಳನ್ನು ಮಾಡಿಸಿಕೊಟ್ಟು ಧೈರ್ಯವನ್ನು ಉಂಟುಮಾಡಿಸಿಕೊಟ್ಟರೂ ಕಮ್ಯುನಿಸ್ಟರು ಮುಖ್ಯವಾಗಿ ಒಂದು ಪರದೇಶದ ವಿದೇಶ ಧೋರಣೆಯ ಕೈಗೊಂಬೆಗಳಾಗಿದ್ದುದರಿಂದ ಕೂಲಿಕಾರರ ನಿಜವಾದ ಹಿತೈಷಿಗಳಿಗೂ ಅವರಿಗೂ ತಿಕ್ಕಾಟ ಅನಿವಾರ್ಯವಾಯಿತು. ೧೯೨೯ ರಲ್ಲಿ ಇದರ ಫಲವಾಗಿ ಹಳೆಯ ಚಳವಳಿಗಾರರು ಸಿಡಿದುಹೋಗಿ "ಹಿಂದೀ ಕೂಲಿಕಾರ ಸಂಘಗಳ ಫೆಡರೇಶನ್" ಸ್ಥಾಪಿಸಿಕೊಂಡರು. ಮತ್ತೆರಡು ವರ್ಷಗಳಲ್ಲಿ ತಿರುಗಿ ಅ. ಭಾ. ಟ್ರೇಡ ಯೂನಿಯನ್ ಕಾಂಗ್ರೆಸ್ಸಿನಲ್ಲಿ ಒಡಕು ಹುಟ್ಟಿ ತಮ್ಮದೇ ಕೆಂಪು ಟ್ರೇಡ್ ಯೂನಿಯನ್ ಕಾಂಗ್ರೆಸ್ಸನ್ನು ಕಮ್ಯುನಿಸ್ಟರು ಕಟ್ಟಿದರು. ಹೀಗೆ ಕೂಲಿಕಾರ ಸಂಘಗಳಲ್ಲಿ ಅನೈಕ್ಯ ಬೆಳೆದು ಚಳವಳಿಗೆ ದೊಡ್ಡ ಪೆಟ್ಟು ಬಿತ್ತು. ೧೯೩೫ ರ ವರೆಗೂ ಹೀಗೆಯೆ ಆಗಿ, ಆ ಮೇಲೆ ಕಮ್ಯುನಿಸ್ಟರ ಸಂಘ ವಿಸರ್ಜಿಸಲ್ಪಟ್ಟದ್ದಲ್ಲದೆ ಫೆಡರೇಶನ್ನು ತಿರುಗಿ ಮೂಲ ಸಂಘದಲ್ಲಿ ಸಮಾವೇಶ ಹೊಂದಿತು. ಎರಡನೆ ಮಹಾಯುದ್ಧ ಕಾಲದಲ್ಲಿ ಎಂ. ಎನ್. ರಾಯರು ಸರಕಾರಿ ಹಣದಿಂದ "ಇಂಡಿಯನ್ ಫೆಡರೇಶನ್ ಆಫ್ ಲೇಬರ್" ಸ್ಥಾಪಿಸಿ ಚಳವಳಿಗೆ ಮತ್ತೊಂದು ಹಿಂದೇಟು ಕೊಟ್ಟರು. ಪುನಃ ಕಮ್ಯುನಿಸ್ಟರ ವಶಕ್ಕೆ ಬಂದ ಅ. ಭಾ. ಟ್ರೇಡ್ ಯೂ. ಕಾಂಗ್ರೆಸ್ಸು ರಾಷ್ಟ್ರೀಯ ವಾದಿಗಳ ಸಹಾನುಭೂತಿಗೆರವಾಯಿತು

ಹಿಂದೀ ಕೂಲಿಕಾರ ಚಳವಳಿಯಲ್ಲಿ ಮೂಡಿರುವ ಆಧುನಿಕ ಶಕ್ತಿಗಳೆಂದರೆ ಹಿಂದೀ ಸಾಮ್ಯವಾದಿಗಳ ಏಳಿಗೆ ಮತ್ತು ಅ. ಭಾ. ರಾಷ್ಟ್ರೀಯ ಟ್ರೇಡ ಯೂನಿಯನ್ ಕಾಂಗ್ರೆಸ್ಸಿನ ಸ್ಥಾಪನೆ. ಅಹಮದಾಬಾದಿನಲ್ಲಿ ಅನೇಕ ವರ್ಷಗಳಿಂದ ಗಾಂಧೀಜಿಯ "ವರ್ಗಸಾಮರಸ್ಯ" ತತ್ವಾನುಸಾರ ನಡೆಯುತ್ತ ಬಂದಿದ್ದ ಗಿರಣಿ ಕೂಲಿಕಾರರ ಚಳವಳಿಯ ಯಶಸ್ಸಿನಿಂದ ಪ್ರೇರಿತವಾಗಿ ಈ ಸಂಘ ಹಿಂದುಸ್ತಾನದಲ್ಲೆಲ್ಲ ಹಬ್ಬತೊಡಗಿದೆ ಇದಕ್ಕೆ ಕಾಂಗ್ರೆಸ್ ಸರಕಾರಗಳ ಬೆಂಬಲವೂ ಇದ್ದು ಸದ್ಯಕ್ಕೆ ಅ. ಭಾ. ಟ್ರೇ. ಯೂ. ಕಾಂ. ಗಿಂತಲೂ ಹೆಚ್ಚು ಸದಸ್ಯರನ್ನೊಳಗೊಂಡಿದೆಯೆಂದು ಹೇಳಲಾಗಿದೆ. ಒಡೆಯ ಕೂಲಿಕಾರರೊಳಗೆ ಕಲಹ ಮಾಡಿಸದೆ ರಾಜಿಯಿಂದಲೇ ಕೂಲಿಕಾರರಿಗೆ ಸವಲತ್ತು ದೊರಕಿಸಿ ಕೊಡುವ ಧೋರಣವಿಟ್ಟುಕೊಂಡ ಈ ಸಂಘದ ನಿಜವಾದ ಶಕ್ತಿಯ ಅಳವು ಇನ್ನೂ ಕೆಲ ಕಾಲ ಸಾಗದೆ ಸಿಗುವಂತಿಲ್ಲ.

ಕಾಂಗ್ರೆಸ ಸಮಿತಿಗಳ ಆಯ್ಕೆ

ಅ. ಭಾ. ಕಾಂ. ಸಮಿತಿಯು ಮತ್ತು ಇತರ ಚುನಾಯಿತ ಸಮಿತಿಗಳ ನಡುಗಾಲ ಚುನಾವಣೆಯ ಕಾರ್ಯಕ್ರಮವನ್ನು ನಿರ್ಧರಿಸಲು ಅ. ಭಾ. ಕಾಂಗ್ರೆಸ ಸಮಿತಿಯು ಕಾರ್ಯಕಾರೀ ಸಮಿತಿಗೆ ಅಧಿಕಾರ ಕೊಟ್ಟಿದೆ. ೧ನೇ ಮೇ ದಿನದ ಸಭೆಯಲ್ಲಿ ಕಾರ್ಯಕಾರೀ ಸಮಿತಿಯು ಕಾಂಗ್ರೆಸ ಪ್ರಾಂತಗಳಲ್ಲಿ ಮತ್ತು ಸಂಸ್ಥಾನಗಳಲ್ಲಿ ನಡೆಯಬೇಕಾದ ಈ ಚುನಾವಣೆಗಳ ಬಗ್ಗೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳನ್ನು ಕುರಿತು ಚರ್ಚಿಸಿತು. ಈ ಕೆಳಗಿನಂತೆ ನಿರ್ಣಯ ಕೈಕೊಳ್ಳಲಾಗಿದ್ದು ಎಲ್ಲ ಪ್ರಾಂತಿಕ ಕಾಂಗ್ರೆಸ ಸಮಿತಿಗಳೂ ಈ ಬಗ್ಗೆ ಸಂಬಂಧಿಸಿದ ಇತರ ಸಮಿತಿಗಳೂ ಗಮನಿಸಿ ಇವುಗಳನ್ನು ಅಮಲಿನಲ್ಲಿ ತರುವ ಬಗ್ಗೆ ತಕ್ಕ ಕ್ರಮ ಕೈಕೊಳ್ಳಬೇಕು ಎಂದು ಮೊದಲಾಗಿ ಅ. ಭಾ. ಕಾಂ. ಸಮಿತಿಯ ನಿರಂತರ ಕಾರ್ಯದರ್ಶಿ ಶ್ರೀ. ಸಾದಿಕ ಅಲಿಯವರು ಕಾಂಗ್ರೆಸ ಕಾರ್ಯಕಾರೀ ಸಮಿತಿಯಲ್ಲಿ ಖಾಸಾದ ಗೊತ್ತುವಳಿ ಪ್ರಸಿದ್ಧಿಸುವಾಗ ಪೀಠಿಕೆಯಲ್ಲಿ ಹೇಳಿದ್ದಾರೆ.

(ಅ) ಜಿಲ್ಹಾ ಕಾಂಗ್ರೆಸ ಸಮಿತಿ ಮತ್ತು ಅದಕ್ಕೂ ಕೆಳಗಿನ ಸಮಿತಿಗಳ ಸದಸ್ಯರು ಮತ್ತು ಪ್ರತಿನಿಧಿಗಳು ತಾವು ಸಕ್ರಿಯ ಸದಸ್ಯರೆಂದು ಸಾರಿದಲ್ಲಿ ಅವರ ಸದಸ್ಯತ್ವವನ್ನು ತಾತ್ಪೂರ್ತಿಕವಾಗಿ ಮುಂದುವರಿಸಲ್ಪಡಬೇಕು.

(ಬ) ಈ ರೀತಿ ರಚಿತವಾದ ಪ್ರಾಂತಿಕ ಕಾಂಗ್ರೆಸ ಸಮಿತಿಗಳು ೧೯೪೯ ಮೇ ೧೫ ಕ್ಕೆ ಸೇರುವವು.

(ಕ) ಹೊಸ ಕಾರ್ಯಕಾರೀ ಸಮಿತಿಯ ಚುನಾವಣೆ, ಅ. ಭಾ. ಕಾಂ. ಸಮಿತಿಯ ಸದಸ್ಯರ ಚುನಾವಣೆ ಮೊದಲಾದ ದೈನಂದಿನದ ಕಾರ್ಯಕ್ರಮಗಳನ್ನು ಈ ಪ್ರಾಂತಿಕ ಕಾಂಗ್ರೆಸ ಸಮಿತಿಗಳು ಪ್ರಾರಂಭಿಸುವವು.

(ಡ) ಆ ಕಲಮಿನನ್ವಯ ಸಾರಿದ ಯಾವದೇ ಸದಸ್ಯನ ಸದಸ್ಯತ್ವದ ಬಗ್ಗೆ ತಕರಾರುಗಳಿದ್ದಲ್ಲಿ ಅವನ್ನು ನಡುಗಾಲ ಚುನಾವಣೆ ನಡೆದ ನಂತರ ಶಿಫಾರಸು ಸಮಿತಿಗಳು ನಿರ್ಣಯಿಸಬೇಕು.

(ಇ) ಪ್ರಾಂತಿಕ ಕಾಂ. ಸಮಿತಿಗಳ ತೆರವಾದ ಸ್ಥಳಗಳನ್ನು ಅ. ಭಾ ಕಾ. ಸಮಿತಿ ಸದಸ್ಯರ ಚುನಾವಣೆಯ ಬಗ್ಗೆ ಪ್ರಾಂತಿಕ ಕಾಂಗ್ರೆಸ ಸಮಿತಿಯ ಸಭೆ ಸೇರುವದಕ್ಕಿಂತಲೂ ಕನಿಷ್ಠ ಒಂದು ವಾರ ಪೂರ್ವದಲ್ಲಿ ಜಿಲ್ಹಾ ಕಾಂಗ್ರೆಸ ಸಮಿತಿಗಳು ತಮ್ಮ ಸಾಧಾರಣ ಸಭೆಗಳಲ್ಲಿ ಹಂಚಿಹಾಕುವ ಮತದಾನದ ಮೂಲಕ ತುಂಬಬೇಕು. ಪ್ರಾಂತಿಕ ಕಾಂಗ್ರೆಸ ಸಮಿತಿಗಳು ಈ ಬಗ್ಗೆ ಕ್ರಮ ಕೈಕೊಳ್ಳಬೇಕು.

ಆಯಕಟ್ಟಿನ ಗಡಿ ಸಂಸ್ಥಾನವಾದ ಕಚ್ಛದ ಆಡಳಿತವನ್ನು ಹಿಂದುಸ್ತಾನ ಸರಕಾರವು ಇದೇ ಜೂನ ೧ರಿಂದ ವಹಿಸಿಕೊಳ್ಳಲಿರುವದೆಂದು ತಿಳಿಯುತ್ತದೆ.

ಕರ್ನಾಟಕ

ಧಾರವಾಡ

ಕಳೆದ ವಾರದಲ್ಲಿ ಏಕೀಕರಣ ಲಕ್ಷ ನಿಧಿ ಸಂಗ್ರಹ ಕಾರ್ಯಕ್ರಮದಲ್ಲಿ ೬೭೬೩—೮—೦ ಕೂಡಿದ್ದು ಒಟ್ಟಿಗೆ ೯೫೬೯—೩—೦ ಜಮೆ ಯಾದಂತಾಗಿದೆಂದು ಸಮಿತಿಯ ಕಾರ್ಯದರ್ಶಿ ಗಳು ತಿಳಿಸುತ್ತಾರೆ.

ಧಾರವಾಡ—ಕಾರವಾರ ಜಿಲ್ಹೆಗಳ ಇಲೆಕ್ಟ್ರಿಕಲ್ ಸಬ್ ಇನಸ್ಪೆಕ್ಟರ ಶ್ರೀ ಪೋಸ್ತವಾಲಾ ಇವರು ಶಿರ್ಶಿ ಚಿತ್ರಮಂದಿರದ ಒಡೆಯರಿಂದ ೫೫ ರೂಪಾಯಿ ಲಂಚ ತಿಂದರೆಂದು ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಅವರಿಗೆ ೬ ತಿಂಗಳ ಸಶ್ರಮ ಶಿಕ್ಷೆ ಮತ್ತು ೫೦೦ ರೂಪಾಯಿ ದಂಡ ವಿಧಿಸಿದರು.

ಧಾರವಾಡದ ಕರ್ನಾಟಕ ಎಜ್ಯುಕೇಶನ ಬೋರ್ಡಿನ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಶ್ರೀ ಎಸ್. ಎನ್. ಕೋಲ್ಹಟಕರರು ವಿಷಮ ಜ್ವರದಿಂದ ೨೯ ನೇ ತಾ. ದಿನ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ನುರಿತ ಶಿಕ್ಷಕರಾಗಿದ್ದು ಸಾರ್ವಜನಿಕ ಚಟುವಟಿಕೆಗಳಲ್ಲಿ ಒಳ್ಳೆ ಆಸ್ಥೆಯಿಂದ ಭಾಗವಹಿಸುತಿದ್ದರು. ಮರಣ ಕಾಲಕ್ಕೆ ಅವರಿಗೆ ಕೇವಲ ೩೬ ವರುಷಗಳಿದ್ದವು. ಪರಮಾತ್ಮನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಹೊಲದೊಡೆಯರ ಹಾಗು ಇನಾಮದಾರರ ಸಭೆಯು ಧಾರವಾಡದಲ್ಲಿ ೨ ನೇ ತಾರೀಕು ಸಾಯಂಕಾಲ ಶ್ರೀ ಕಲ್ಲಾಪುರ ನರಸಿಂಗರಾಯರ ಅಧ್ಯಕ್ಷತೆಯಲ್ಲಿ ಸೇರಿತ್ತು. ಬರುವ ೧೧ ಕ್ಕೆ ಪುಣೆಯಲ್ಲಿ ಸೇರುವ ಪರಿಷತ್ತಿಗೆ ಶ್ರೀ ಬಾಳಾಸಾಹೇಬ ಖೇರ ಹಾಗು ನ್ಯಾಯಮೂರ್ತಿ ಲೋಕೂರ ಇವರು ಬರುವದರಿಂದ ಮತ್ತು ಈ ಪರಿಷತ್ತಿನಲ್ಲಿ ಹೊಲದೊಡೆಯರ ಭವಿತವ್ಯ ನಿರ್ಣಯಿಸಲ್ಪಡುವದಿರುವದರಿಂದ ಹೊಲದೊಡೆಯರೆಲ್ಲ ಬರಬೇಕೆಂದು ಶ್ರೀ ಕಲ್ಲಾಪುರ ದೇಸಾಯರು ಹೇಳಿದರು.

ಇದೇ ತಿಂಗಳಲ್ಲಿ ಕರ್ನಾಟಕ-ವಿಧಾಯಕ ಕಾರ್ಯಕರ್ತರ ಸಮ್ಮೇಲನ ಹುಬ್ಬಳ್ಳಿಯಲ್ಲಿ ಸೇರಲಿದ್ದಿತಷ್ಟೆ. ಆದರೆ ಅದಕ್ಕೆ ಬರಲಿದ್ದ ಶ್ರೀ. ಧೀರೇಂದ್ರ ಮಜುಮದಾರ ಮತ್ತು ವಿನೋಬಾ ಭಾವೆಯವರಿಗೆ ಈ ತಿಂಗಳಲ್ಲಿ ಇಲ್ಲಿಗೆ ಬರುವದಾಗದ್ದರಿಂದ ಪರಿಷತ್ತನ್ನು ಜೂನ ತಿಂಗಳಿಗೆ ಹಾಕಲಾಗಿದೆ.

ಬ್ಯಾಂಕ ಅಫ ಕರ್ನಾಟಕದ ಪ್ರಥಮ ವಾರ್ಷಿಕ ಸಭೆ ಚೆಅರಮನ್ ಶ್ರೀ ಕೋಟಿಭಾಸ್ಕರರ ಅಧ್ಯಕ್ಷತೆಯಲ್ಲಿ ರವಿವಾರ ೨ ನೇ ತಾರೀಕು ನಡೆಯಿತು. ಆಗ ಲೆಕ್ಕಪತ್ರ ವರದಿ ಸ್ವೀಕೃತವಾದ ನಂತರ ಚೆಅರಮನ್‌ರು ಸದ್ಯದ ಪರಿಸ್ಥಿತಿಯಲ್ಲಿ ಕರ್ನಾಟಕದ ಸಾರ್ವಾಂಗಿಕ ಅಭಿವೃದ್ಧಿಗೆ ಏನು ಮಾಡಬೇಕೆಂಬದನ್ನು ಉದ್ಬೋಧಕವಾಗಿ ವಿವರಿಸಿದರೆಂದು ತಿಳಿಯುತ್ತದೆ. ಹೊಸ ಡಾಯರೆಕ್ಟರರುಗಳ ಆಯ್ಕೆಯೂ ಆಯಿತೆಂದು ತಿಳಿಯುತ್ತದೆ.

ಬೆಳಗಾವಿ

ಬೆಳಗಾವಿಯ ಸಬ್‌ರಜಿಸ್ಟರ ಕಚೇರಿಯಲ್ಲಿಯ ಒಂದು ಲಂಚದ ಪ್ರಕರಣದಲ್ಲಿ ಕಾರಕೂನರೊಂದಿಗೆ ಸಬ್ ರಜಿಸ್ಟರರ ಅಂಗವೂ ಇದೆಯೆಂದು ಜಿಲ್ಹಾ ಜಜ್ಜ ಶ್ರೀ. ಹೊನ್ನಾವರರು ತಮ್ಮ ತೀರ್ಪಿನಲ್ಲಿ ಹೇಳಿದ್ದರಿಂದ ಶ್ರೀ ವಕದರ ಮೇಲೆ ಖಟ್ಲೆ ಹಾಕಲಾಗಿತ್ತು. ಮ್ಯಾಜಿಸ್ಟ್ರೇಟರು ಅವರು ಅಪರಾಧಿಗಳೆಂದು ನಿರ್ಣಯಿಸಿ ಶಿಕ್ಷೆ ವಿಧಿಸಿದ್ದರು. ಇದರ ವಿರುದ್ಧ ಅಡಿಶನಲ್ ಸೆಶನ್ಸ ಜಜ್ಜರಲ್ಲಿ ಅಪೀಲ ವಿಚಾರಣೆ ನಡೆದು ಅವರು ನಿರ್ದೋಷಿಗಳೆಂದು ಬಿಡುಗಡೆ ಮಾಡಲ್ಪಟ್ಟರು.

ಮುಂಬಯಿ ಪ್ರಾಂತದಲ್ಲಿ ಲೀನವಾದ ದಕ್ಷಿಣ ಸಂಸ್ಥಾನಗಳಲ್ಲಿ ಇದ್ದ ಕಾಯಿದೆ ಕಾನೂನುಗಳನ್ನು ಅಭ್ಯಸಿಸಿ ಪ್ರಾಂತಿಕ ಕಾಯಿದೆ ಕಾನೂನುಗಳ ಮಟ್ಟಕ್ಕೆ ಅವನ್ನು ತರುವ ಉದ್ದೇಶದಿಂದ ಮುಂಬಯಿ ಸರಕಾರದವರು ರಾಜಕೀಯ ಖಾತೆಯಲ್ಲಿರುವ ಶ್ರೀ ಟಿ. ಕೆ. ತುಕೋಳರನ್ನು ಈ ಭಾಗದಲ್ಲಿ ಸಂಚರಿಸಲು ನೇಮಿಸಿರುವರು. ಅವರು ಮುಂದಿನ ಪಕ್ಷದಲ್ಲಿ ಸರಕಾರಕ್ಕೆ ವರದಿಯನ್ನು ಒಪ್ಪಿಸುವರು.

ಬೆಳಗಾವಿ ಜಿಲ್ಹೆಯಲ್ಲಿ ಗಲಭೆಗಳಿಗೆ ಅಪರಾಧಿಯಾದವರ ಹಸ್ತೆ ಸೂಟುಬಿಡುವ ಅಧಿಕಾರವನ್ನು ಸರಕಾರದವರು ಕಲೆಕ್ಟರರಿಗೆ ಕೊಟ್ಟಿರುವರು. ಗಲಭೆಗಳಲ್ಲಿ ಸತ್ತ ಇಲ್ಲವೆ ಗಾಯಗೊಂಡು ಹಿಂದುಗಡೆ ಮರಣಹೊಂದಿದವರ ಕುಟುಂಬಕ್ಕೂ ಈ ಸೌಕರ್ಯ ಸಿಕ್ಕುವದು. ವಿಲೀನವಾದ ಸಂಸ್ಥೆಗಳ ಭಾಗಕ್ಕೂ ಇದು ಅನ್ವಯಿಸುವದು. ಈ ಸವಲತ್ತಿಗೆ ಅರ್ಹರಾದವರು ಅರ್ಜಿಮಾಡಿಕೊಳ್ಳಬಹುದು.

ದಕ್ಷಿಣ ಕನ್ನಡ

ಉಡುಪಿ ನಗರದಲ್ಲಿ ಈಗ ಕೊಡುತ್ತಿರುವ ೪ ಔಂಸ ಅಕ್ಕಿ ೪ ಔಂಸ ಜೋಳದ ಸೀದಾವಬದಲು ೬ ಔಂಸ ಅಕ್ಕಿ ೭ ಔಂಸು ಜೋಳ ಕೊಡಬೇಕೆಂದು ನಗರ ಸಭೆಯವರು ಸರಕಾರಕ್ಕೆ ಬಿನ್ನವಿಸಿಕೊಂಡಿರುವರು. ಜೋಳ ತೆಗೆದುಕೊಂಡರೇನೇ ಅಕ್ಕಿಯನ್ನು ತೆಗೆದುಕೊಳ್ಳಬೇಕೆಂಬ ನಿರ್ಬಂಧವನ್ನು ತೆಗೆದುಹಾಕಬೇಕೆಂದು ಬಿನ್ನವಿಸಿಕೊಳ್ಳಲಾಗಿದೆ.

ಸುಬ್ರಹ್ಮಣ್ಯದಲ್ಲಿಯ ಶ್ರೀ ಸಂಪುಟ ನರಸಿಂಹ ಮಠದಲ್ಲಿ ಶ್ರೀ ನರಸಿಂಹ ಜಯಂತಿ ಮಹೋತ್ಸವವು ತಾ ೨೦ ರಿಂದ ಪ್ರಾರಂಭವಾಗಿ ೨೪ ನೇ ತಾರೀಕಿಗೆ ಮುಗಿವುದು. ೨೩ ಕ್ಕೆ ಮಹಾರಥೋತ್ಸವ ನಡೆವುದು.

ಮಂಗಳೂರ ನಗರಾಧ್ಯಕ್ಷರಾದ ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಗಾಂಧಿ ಸ್ಮಾರಕ ನಿಧಿ ಸಮಿತಿ ಸ್ಥಾಪಿತವಾಗಿದೆ. ಡಾ. ಯು. ಪಿ. ಮಲ್ಯ ಹಾಗು ಬಿ. ಆರ್. ಕಕೇರರು ಉಪಾಧ್ಯಕ್ಷರಾಗಿದ್ದು ಡಿ. ಮೋಹನರಾಯರು ಕಾರ್ಯದರ್ಶಿ ಹಾಗು ಕೋಶಾಧ್ಯಕ್ಷರಾಗಿರುವರು.

ಅಲೆವೂರು (ಉಡುಪಿ) ರಾಮ ಮಂದಿರದಲ್ಲಿ ೧೭ ನೇ ತಾರೀಖಿನಿಂದ ಪ್ರಾರಂಭವಾದ ರಾಮ ಭಜನ ಸಪ್ತಾಹ ಮಹೋತ್ಸವ ೨೪ ರಂದು ಮುಗಿಯಿತು.

ವಿಜಾಪೂರ

ತಾಳಿಕೋಟೆಯ ಶ್ರೀ ಶಿಸ್ತಿಣ ಮಹಾರಾಜ ಸಾಲವಾಡಗಿಯವರು ಹೈದರಾಬಾದದಲ್ಲಿ ಶಾಂತಿಯುಂಟಾಗಲೆಂದು ೨೮ನೇ ತಾರೀಖಿನಿಂದ ಉಪವಾಸ ಪ್ರಾರಂಭಿಸಿದ್ದಾರೆ.

ಮುಂಬಯಿ ಸರಕಾರದವರು ಭೂಮಿಗಳನ್ನು ತುಂಡುಮಾಡುವದನ್ನು ಪ್ರತಿಬಂಧಿಸುವ ಹಾಗು ತುಂಡು ಭೂಮಿಗಳನ್ನು ಒಟ್ಟುಗೂಡಿಸುವ ಕಾಯದೆಯನ್ನು ವಿಜಾಪೂರ ಜಿಲ್ಹೆಯ ಬಾಗೇವಾಡಿ ತಾಲೂಕಿನ ೨೪ ಹಳ್ಳಿಗಳ ಪ್ರದೇಶಗಳಿಗೆ ಅನ್ವಯಿಸಿದ್ದಾರೆ.

ಬಾಗಲಕೋಟೆಯ ಅಕ್ಕನ ಬಳಗದವರು ಕಟ್ಟಿಸಲಿರುವ ಅಕ್ಕಮಹಾದೇವಿ ಸ್ಮಾರಕ ಕಟ್ಟಡದ ಅಡಿಗಲ್ಲು ಕೂಡಿಸುವಾಗ ಸೊಲ್ಲಾಪುರದ ಶ್ರೀಮಂತ ಅಪ್ಪಾಸಾಹೇಬ ವಾರದ ಇವರ ಪತ್ನಿ ಶ್ರೀಮತಿ ಗೌರಮ್ಮನವರು ೧೦೦೧ ರೂಪಾಯಿ ಕೊಡುವ ವಾಗ್ದಾನ ಮಾಡಿದ್ದನ್ನು ಈಗ ಕಳಿಸಿ ಕೊಟ್ಟಿದ್ದಾರೆ. ಅದಕ್ಕಾಗಿ ಬಳಗ ಅವರಿಗೆ ಕೃತಜ್ಞತೆಯನ್ನು ಸಲ್ಲಿಸಿದೆ.

ಬಾಗಲಕೋಟೆ ಭಾಗದಲ್ಲಿಯ ಹಳ್ಳಿಗಳಲ್ಲಿಯ ಡೋಲ ಜನರ ಪ್ರಮಾಣವನ್ನು ತೀರ ಕೆಳಗಿಳಿಸಿ ಡೋಲವೇಲಿದ್ದವರಲ್ಲಿ ಬಹು ಜನರನ್ನು ಉಪವಾಸಕ್ಕೆ ಗುರಿಮಾಡಿದ್ದಾರೆ. ಇದೀಗ ಹಳ್ಳಿಗಳಲ್ಲಿ ಕಾಳಿನ ಹಾಗೂ ಕೆಲಸದ ಅಭಾವ ಹೆಚ್ಚುತಿರುವದರಿಂದ ಕಲೆಕ್ಟರರ ಹುಕುಮಿನನ್ವಯ ಹೀಗೆ ಮಾಡಲಾಗಿದೆಂದು ತಿಳಿಯುತ್ತದೆ. ಇದರಿಂದ ಅನಾಥರಿಗೆ ಬಹಳ ತೊಂದರೆಯಾಗಹತ್ತಿದೆ.

ಶಿವಮುಗ್ಗಿಯ ಶ್ರೀ ಟಿ. ಶೀನಪ್ಪ ಶೆಟ್ಟಿ ಹಾಗು ಬಂಧುಗಳು ಶಿವಮುಗ್ಗಿ ಸಾರ್ವಜನಿಕ ವಾಚನಾಲಯ ಮತ್ತು ಪುಸ್ತಕಾಲಯಗಳಿಗಾಗಿ ೨೦೦೦ ರೂಪಾಯಿ ಕಾಣಿಕೆ ಕೊಟ್ಟಿದ್ದಾರೆ.

ಪಣಿಗೆ ವಸಂತೋತ್ಸವ ಫಲಮಂತ್ರಾಕ್ಷತೆ ವಿತರಣೆಯಿಂದ ಯಶಸ್ವಿಯಾಗಿ ಜರುಗಿತು. ಹರಿಕಥೆ ಉಪನ್ಯಾಸ ನಾಟಕಾಭಿನಯ ಸುವಾಸಿನಿಯರಿಗೆ ಸಂತರ್ಪಣೆ ಮೊದಲಾದ ಕಾರ್ಯಕ್ರಮ ಜರುಗಿದವು.

ಬಳ್ಳಾರಿ

ನಾರಾಯಣದೇವರ ಕೆರೆಯಲ್ಲಿ ಬಸವಜಯಂತಿ ನಿಮಿತ್ತ ೧೧ ನೇ ತಾರೀಕು ಧ್ವಜವಂದನೆ ಆಟಪಾಟ ಹೂಡುವ ಸ್ಪರ್ಧೆ, ಸಾಯಂಕಾಲ ಬಸವೇಶ್ವರ ಭಾವಚಿತ್ರದ ಮೆರವಣಿಗೆ ಅನಂತರ ಬಸವೇಶ್ವರ ಮಂಟಪದಲ್ಲಿ ಶ್ರೀ. ಡಾ. ಜೆ. ಕರಿಗೌಡರವರಿಂದ ಸಭೆಯ ಉದ್ಘಾಟನ ಹಾಗು ಪಾಟೀಲ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಮರುಳಸಿದ್ಧಯ್ಯನವರ ಭಾಷಣ, ಪದ್ಮನಾಭರಾವ ಇವರ ಸಂಗೀತ, ಪ್ರತಿಭಾದವರ ರೈತರ ಭಾಗ್ಯೋದಯ ನಾಟಕ, ರಾತ್ರಿ ಶ್ರೀ ಕರಿಗೌಡರಿಯವರ ರಾಷ್ಟ್ರೀಯ ಕೀರ್ತನ ಮೊದಲಾದ ಕಾರ್ಯಕ್ರಮ ನಡೆವುವು.


ಬೆಂಗಳೂರು—ಮೈಸೂರು

ಮೈಸೂರು ವಿಶ್ವವಿದ್ಯಾನಿಲಯದ ಪದವೀಧರರಿಗೆ ಪದವಿ ಕೊಡುವದಕ್ಕೂದಲು ಆರು ತಿಂಗಳು ಗ್ರಾಮಸೇವಾ ಶಿಕ್ಷಣ ಕಡ್ಡಾಯವಾಗಿ ಕೊಡಬೇಕು ಎಂಬದಾಗಿ ಗುಂಡಪ್ಪ ಗೌಡರ ಸಮಿತಿಯವರು ವರದಿ ಒಪ್ಪಿಸಿರುವರು. ಈ ಯೋಜನೆಯನ್ವಯ ವರ್ಷಕ್ಕೆ ೪೦೦೦ ವಿದ್ಯಾರ್ಥಿ ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುವರು. ವಿದ್ಯಾರ್ಥಿಗಳಿಗೆ ಶಿಕ್ಷಣ ಕಾಲದಲ್ಲಿ ತಿಂಗಳಿಗೆ ೩೦ ರೂ ಶಿಷ್ಯವೇತನ ಕೊಡಲಾಗುವದು.

ಹಿಂದೀ ಸೈನ್ಯದ ಸನ್ನಿಧಿ ಕೇಂದ್ರಗಳ ಸಂಘಟಕ ಡೆಪ್ಯುಟಿ ಡಾಯರೆಕ್ಟರರಾಗಿದ್ದ ಬ್ರಿಗೇಡಿಯರ ಎನ್. ಬ್ಬಿ. ಜಾಳ ಇವರು ಮೈಸೂರು ಸಂಸ್ಥಾನ ಸೈನ್ಯದ ಮುಖ್ಯ ಸೇನಾಪತಿಗಳಾಗಿ ನೇಮಿಸಲ್ಪಟ್ಟಿರುವರು. ಇವರು ೧೯೩೨ ರಲ್ಲಿ ಕಮೀಶನ ಹೊಂದಿ ಕಳೆದ ಯುದ್ಧದಲ್ಲಿ ಅಸಾಮ ಆರಾಕ ಮೊದಲಾದ ಕಡೆ ಯುದ್ಧದಲ್ಲಿ ಪ್ರತ್ಯಕ್ಷ ಭಾಗವಹಿಸಿದವರಿರುವರು.

ಉತ್ತರ ಕನ್ನಡ

ಮುಂಬಯಿ ಸರಕಾರದವರು ನೇಮಿಸಿದ ಧಾರ್ಮಿಕ ಹಾಗು ಪರೋಪಕಾರದ ಧರ್ಮನಿಧಿಗಳ ಪರಿಶೀಲಕ ಸಮಿತಿಯು ಗೋಕರ್ಣದ ಮಹಾಬಳೇಶ್ವರ ದೇವಾಲಯಕ್ಕೆ ಇದೇ ತಿಂಗಳ ೨೩ ಕ್ಕೆ ಭೆಟ್ಟಿ ಕೊಟ್ಟು ಪರಿಶೀಲನ ಕಾರ್ಯವನ್ನು ನಡೆಸುವದು. ಸಮಿತಿಯ ಅಧ್ಯಕ್ಷ ನ್ಯಾ. ತೆಂಡೂಲಕರ ಸದಸ್ಯರಾದ ಪ್ರಿನ್ಸಿಪಾಲ ಘಾರಪುರೆ ಮತ್ತು ದಾತಾರ ಬಳವಂತರಾಯರು ಅಲ್ಲಿಗೆ ಹೋಗುವರು.



ಮುಂಬಯಿ

ಹೈದರಾಬಾದದ ನಡಿಯ ಹತ್ತಿರದ ಜನರ ನಿತ್ಯ ಜೀವಿತಗಳ ರಕ್ಷಣೆಗೆ ಪ್ರಾಂತಿಕ ಸರಕಾರವು ಹಿಂದುಸ್ತಾನ ಸರಕಾರದ ಜೊತೆಗೆ ತಕ್ಕುದಿದ್ದ ಎಲ್ಲ ಉಪಾಯಗಳನ್ನು ಯೋಜಿಸಿದೆ ಎಂದು ಮುಂಬಯಿ ಗೃಹಮಂತ್ರಿ ಶ್ರೀ. ಮುರಾರಜಿ ಯು. ದೇಸಾಯಿ ಒಂದು ಪತ್ರಿಕಾ ಸಂದರ್ಶನದಲ್ಲಿ ಹೇಳಿದರು. ಆಗ ಇನ್ನು ಒಂದು ತಿಂಗಳಲ್ಲಿ ಹೈದರಾಬಾದ ಯುದ್ಧ ಪ್ರಾರಂಭವಾಗುವದೆಂದೂ ಸಾರಿದರು.

ಹೈದರಾಬಾದ ಸಂಸ್ಥಾನದಲ್ಲಿ ಇಷ್ಟರಲ್ಲಿ ಆಶ್ಚರ್ಯಕಾರಕ ಘಟನೆಗಳು ಸಂಭವಿಸಬಹುದೆಂದು ನಿರೀಕ್ಷಿಸಲಾಗಿದೆ. ಹಿಂದುಸ್ತಾನ ಹೈದರಾಬಾದಗಳ ನಡುವೆ ಬೇಗ ಯುದ್ಧ ಪ್ರಾರಂಭವಾಗುವದೆಂದು ಹೈದರಾಬಾದ ಜನರೂ ಮಾತಾಡುತ್ತಿರುವರು.

ಹೈದರಾಬಾದದಲ್ಲಿ ಭಾರತ ಸರ್ಕಾರದ ಏಜೆಂಟ ಜನರಲ್ಲರಾದ ಶ್ರೀ. ಕೆ. ಎಂ. ಮುನಶಿಯವರು ಮುಂಬಯಿಯಿಂದ ತಾ. ೩ಕ್ಕೆ ಬಡೋದೆಗೆ ವಿಮಾನ ಮೂಲಕ ಆಗಮಿಸಿದರು. ಪ್ರಜಾಮಂಡಲ ಹಾಗೂ ಮಹಾರಾಜರಲ್ಲಿ ಒಡಂಬಡಿಕೆಯಾಗಿ ಘೋಷಿಸಲಾದ ರಾಜಕೀಯ ಸುಧಾರಣೆಗಳನ್ನೂ ಬಡೋದೆಯ ಜನಪ್ರಿಯ ಮುಖ್ಯಮಂತ್ರಿಯ ಆಯ್ಕೆಯ ಸಂಬಂಧವಾಗಿ ಒಮ್ಮತದ ನಿರ್ಣಯಕ್ಕೆ ಬರುವಂತೆ ಶ್ರೀ. ಮುನಶಿಯವರು ಪ್ರಯತ್ನಿಸುವರು.

ಪುಣೆಯಲ್ಲಿ ತಾ ೨ಕ್ಕೆ ಕೂಡಿದ ಅ. ಭಾ. ಹಿಂದು ಮಹಾಸಭೆಯ ಕಾರ್ಯಕಾರೀ ಮಂಡಲದ ಸಭೆಯಲ್ಲಿ ವ್ಹಿ. ಡಿ. ಸಾವರಕರರು ಮತ್ತು ಇತರ ಹಿಂದು ಮಹಾಸಭೆಯ ಜನರ ಮೇಲೆ ಹಾಕಲಾಗುವ ಖಟ್ಲೆಗಳಲ್ಲಿ ವಕೀಲರನ್ನಿಟ್ಟು ಕೆಲಸ ನಡೆಸುವ ಬಗ್ಗೆ ಮತ್ತು ಇತರ ಸಹಾಯ ಸಲ್ಲಿಸುವ ಬಗ್ಗೆ ಒಂದು ಸಮಿತಿ ನೇಮಿಸಬೇಕೆಂದು ನಿರ್ಧರಿಸಲಾಗಿದೆ

ಸ್ವರಾಜ್ಯ ಸ್ಥಾಪನೆಯ ಮಹಾತ್ಮರ ಧ್ಯೇಯವು ಈಡೇರಿದ್ದರೂ ಪೂರ್ಣ ಸ್ವರಾಜ್ಯದ ಧ್ಯೇಯ ವಿನ್ನೂ ಸಾಧಿಸಿಲ್ಲ. ಸಮಾಜವಾದಿಗಳು ಅದನ್ನು ಪೂರ್ಣಗೊಳಿಸಬೇಕು ಎಂದು ಮುಂತಾಗಿ ಶ್ರೀ ಪುರುಷೋತ್ತಮ ತ್ರಿಕಂಡಾಸರು ಅಹಮ್ಮದಾಬಾದದಲ್ಲಿ ಕೂಡಿದ ಗುಜರಾತ ಪ್ರಥಮ ಸಮಾಜವಾದಿ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಹೇಳಿದರು.

ಮದ್ರಾಸ

ಮದ್ರಾಸ ಮತ್ತು ಆಸ್ಟ್ರೇಲಿಯ ಮೊದಲ್ಗೊಂಡು ಪೂರ್ವ ಹಾಗೂ ನೈಋತ್ಯ ರಾಷ್ಟ್ರಗಳ ನಡುವೆ ರೇಡಿಯೋ ಫೋಟೋ ಸರ್ವಿಸ ಸ್ಥಾಪಿಸುವ ಸಂಭವವಿದೆಯೆಂದು ಸಾಗರೋತ್ತರ ಸಂಪರ್ಕಖಾತೆಯ ಜನರಲ್ ಮ್ಯಾನೇಜರ ಕ್ಯಾಂಟಿಬೆರ್ಟ್‌ರು ಹೇಳಿದರು. ಈಗ ಹಿಂದುಸ್ತಾನದಿಂದ ಲಂಡನಕ್ಕೆ ಮಾತ್ರ ಟೆಲಿಫೋನ ಸಂಬಂಧವಿದ್ದು ಇನ್ನಿತರ ಪರದೇಶಗಳೊಡನೆಯೂ ಈ ಸಂಪರ್ಕವನ್ನು ಶೀಘ್ರವಾಗಿ ಬೆಳೆಸುವ ಪ್ರಯತ್ನ ನಡೆದಿದೆಯೆಂದೂ ಅವರು ಹೇಳಿದರು.

ಆಂಧ್ರದ ಮುಖಂಡರಾದ ಡಾ. ಲಂಕಾಸುಂದರಂ ಕೆಳಗಿನ ಅಭಿಪ್ರಾಯದ ಪ್ರಕಟನೆ ಹೊರಡಿಸಿದ್ದಾರೆ — ಹಿಂದುಸ್ತಾನ ಸರಕಾರವು ಹೈದರಾಬಾದದ ಬಗ್ಗೆ ಕಾಲಕ್ಷೇಪದ ಧೋರಣ ಅನುಸರಿಸಿದ್ದು ಅದು ದೇಶಿಯೊಡನೆ ಟಿಸ್ಸಾಟವಾದಿ ಹಂತಿದೆ. ಹೈದರಾಬಾದದಲ್ಲಿ ಜೊತೆಗಾರ ಸರಕಾರ ಸ್ಥಾಪಿತವಾಗಬೇಕು. ರಜಾಕಾರರನ್ನು ನಿಃಶಸ್ತ್ರರನ್ನಾಗಿಸಬೇಕು ಖಾಸೀಮ ರಜವಿಯವರನ್ನು ದೇಶಾಂತರಕ್ಕೆ ಅಟ್ಟಬೇಕು, ಹೈದರಾಬಾದದಲ್ಲಿ ೩ ಸಾವಿರಕ್ಕಿಂತ ಹೆಚ್ಚು ಹಳ್ಳಿಗಳು ನಿಜಾಮರ ಹಿಡಿತದಿಂದ ಬಿಡುಗಡೆ ಹೊಂದಿವೆ. ನಿಜಾಮರಾದರೂ ಹಿಂದುಸ್ತಾನದೊಡನೆ ಯುದ್ಧವನ್ನೇ ನಡೆಸಿದ್ದಾರೆ. ಅದರೆ ಹಾಗೆ ಸಾರಿಲ್ಲವಿಷ್ಟೇ. ಅವರಿಗೆ ತಕ್ಕ ಉತ್ತರ ಕೊಡಲೇಬೇಕು. ಹೈದರಾಬಾದದ ಸಂಪರ್ಕ ಹಿಲ್ಲಿಸಿ ಆರ್ಥಿಕ ದಿಗ್ಬಂಧ ಹೇರಬೇಕು. ರಜಾಕಾರರನ್ನು ಎದುರಿಸಲು ಎಲ್ಲರಿಗೂ ಶಸ್ತ್ರ ಕೊಡಬೇಕು. ಸುತ್ತು ಕಡೆಯಿಂದ ನಿಜಾಮರಿಂಗೆ ಉಸಿರು ಕಟ್ಟುವಂತೆ ಮಾಡಬೇಕು.

ಮೋಟರ ಹೂಡುವವರ ಲಾಭಾಂಶವನ್ನು ೧೦ಂಕ್ಕೆ ತಿಂಗಳು ಕಡಮೆ ಮಾಡಬೇಕೆಂದು ಮದ್ರಾಸ ಸರಕಾರವು ನಿರ್ಧರಿಸಿದೆ. ಮೋಟಾರ ಪೇಟಿಯ ಸುಧಾರಿಸಿದ್ದೇ ಇದಕ್ಕೆ ಕಾರಣ. ಹಂಚಿಕೆಗಾರರು ಹಾಗು ಬಜಾರಾಟಗಾರರು ಬೆಲೆ ಪಟ್ಟಿ ತಯಾರಿಸಬೇಕೆಂದು ತಿಳಿಸಲಾಗಿರುವದು.

ಕೊಳ್ಳೆಗಾಲ ತಾಲೂಕಿಗೆ ವಿದ್ಯುಚ್ಛಕ್ತಿ ಪೂರೈಸಲು ಮದ್ರಾಸ ಸರಕಾರವು ಮೈಸೂರ ಸರಕಾರಕ್ಕೆ, ಎರಡೂ ಸರಕಾರಗಳ ನಡುವೆ ಆದ ಒಡಂಬಡಿಕೆಯ ಪ್ರಕಾರ, ತಿಳಿಸಿರುವರು.

ಮದ್ರಾಸ ಸದರ್ನ ಮರಾಠಾ ರೇಲ್ವೆಯ ಕೇಂದ್ರ ಕಚೇರಿಯಲ್ಲಿ ಮಹಾತ್ಮಾ ಗಾಂಧಿಯವರ ಜೀವನಾಕಾರದ ಭಾವಚಿತ್ರವನ್ನು ರೇಲ್ವೆ ಮಂತ್ರಿ ಡಾ. ಜಾನ್ ಮಥಾಯಿಯವರು ತಾ ೪ರಂದು ಅನಾವರಣಮಾಡಿದರು. ಜನರಲ್ ಮ್ಯಾನೇಜರ ಶ್ರೀ. ಬಿ. ಬಿ ವರ್ಮಾ ಮೊದಲಾದ ಅನೇಕ ರೇಲ್ವೆ ಅಧಿಕಾರಿಗಳು ಸಮಾರಂಭಕ್ಕೆ ಆಗಮಿಸಿದ್ದರು. ಡಾ ಜಾನ್ ಮಥಾಯಿಯವರು ಆಗ ಮಹಾತ್ಮರ ಗುಣಗಾನಮಾಡಿ ಭಾಷಣ ಮಾಡಿದರು.

ಹೊಸದಿಲ್ಲಿ

ಕಾಂಗ್ರೆಸ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಮತ್ತು ಆಚಾರ್ಯ ಕೃಪಲಾನಿಯವರು ತಾ-೩ಕ್ಕೆ ಮಸೂರಿಗೆ ಹೋಗಿ ಸರದಾರ ಪಟೇಲರನ್ನು ಕಂಡು ಮಾತನಾಡಿದರು. ಗಾಂಧಿ ಸ್ಮಾರಕ ನಿಧಿ ಮತ್ತು ಕಾಂಗ್ರೆಸ ಪುನಃಘಟನೆ ಕುರಿತು ಅವರು ಚರ್ಚಿಸಿದರೆಂದು ತಿಳಿಯುತ್ತದೆ.

ಕಾಶ್ಮೀರದ ಮುಖ್ಯ ಪ್ರಧಾನರಾದ ಶೇಖ ಅಬ್ದುಲ್ಲಾರು ಹೊಸದಿಲ್ಲಿಯಲ್ಲಿ ಪತ್ರ ಸಂದರ್ಶನ ಒಂದರಲ್ಲಿ, ಪಾಕಿಸ್ತಾನದೊಡನೆ ನ್ಯಾಯವಾದ ಒಡಂಬಡಿಕೆ ಮಾಡಿಕೊಳ್ಳಲು ನಾವು ಸದಾಸಿದ್ಧರಿದ್ದೇವೆ ಎಂಬುದನ್ನು ಸ್ಪಷ್ಟಪಡಿಸಿದ್ದೇವೆ. ಆದರೆ ಪಾಕಿಸ್ತಾನಕ್ಕೆ ಯುದ್ಧವೇ ಬೇಕಾದರೆ ಅದಕ್ಕಂತೂ ನಡಕಟ್ಟಿಯೇ ನಿಂತಿದ್ದೇವೆ. ನ್ಯಾಯವಾದ ಸಾರ್ವತ್ರಿಕ ಮತಗಣನೆ ಬೇಕಾದರೆ ಅದನ್ನು ಸ್ವೀಕರಿಸುವೆವು ಎಂದು ಮೊದಲಾಗಿ ಹೇಳಿದರು.

ಖ್ವಾಜಾ ಶಹಾಬುದ್ದೀನರ ಸ್ಥಳದಲ್ಲಿ ಮಹಮ್ಮದ ಇಸ್ಮಾಯಿಲರವರು ಹಿಂದುಸ್ತಾನದಲ್ಲಿಯ ಪಾಕಿಸ್ತಾನದ ಹೈಕಮಿಶನರರೆಂದು ತಾ. ೩ಕ್ಕೆ ಅಧಿಕಾರ ವಹಿಸಿದರು.

ಪಾಕಿಸ್ತಾನದ ಆರ್ಥಿಕ ಮಂತ್ರಿಗಳಾದ ಗುಲಾಮ ಮಹಮ್ಮದ ಮತ್ತು ಪಂಜಾಬ ಸರಕಾರದ ಮಂತ್ರಿಗಳಾದ ಮಿಯಾ ಮಮತಾಜ ದೌಲತಾನಾ ಹಾಗೂ ಶೌಕತ ಹಯಾತಖಾನರು ತಾ ೩ರ ದಿನ ಬಿರ್ಲಾಭವನಕ್ಕೆ ಬಂದು ಮಹಾತ್ಮರ ಶವವನ್ನಿಟ್ಟಿದ್ದ ಸ್ಥಳಕ್ಕೆ ಹೂಗಳನ್ನು ಅರ್ಪಿಸಿದರು.

'ಜನವಾಣಿ' ಎಂಬ ಸಾಮ್ಯವಾದಿಗಳ ಹಿಂದೀ ದೈನಿಕವು ಜುಲೈ ಮೊದಲನೇ ವಾರದಿಂದ ಲಖನೌದಲ್ಲಿ ಆಚಾರ್ಯ ನರೇಂದ್ರದೇವರ ಸಂಪಾದಕತ್ವದಲ್ಲಿ ಪ್ರಕಟವಾಗುವದೆಂದು ತಿಳಿಯುತ್ತದೆ.

ಹಿಮಾಲಯ ಪ್ರದೇಶವು ಪ್ರತ್ಯೇಕ ಕಾಂಗ್ರೆಸ ಪ್ರಾಂತವಾಗಬೇಕೆಂದು ಕಾಂಗ್ರೆಸ ಕಾರ್ಯಕಾರೀ ಮಂಡಳವು ನಿರ್ಧರಿಸಿತು. ಅಲ್ಲಿ ಪ್ರಾದೇಶಿಕ ಸಮಿತಿಯು ಇಲ್ಲದ್ದರಿಂದ ೦೩ ಜನರ ಒಂದು ತಾತ್ಪೂರ್ತಿಕ ಸಮಿತಿಯನ್ನು ಪ್ರಾಂತಿಕ ಕಾಂಗ್ರೆಸ ಸಮಿತಿಯೆಂದು ಅದು ನೇಮಿಸಿತು.

ಭಾರತ ಸರಕಾರದ ಶಿಕ್ಷಣ ಮಂತ್ರಿಗಳಾದ ಮೌ. ಅಝಾದರು ಕಾಶ್ಮೀರ ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸಲು ಶ್ರೀನಗರಕ್ಕೆ ತೆರಳುವರು ಮೇ ೧೧ಕ್ಕೆ ದಿಲ್ಲಿಗೆ ಮರಳಿ ಬರುವರಾಗಿ ತಿಳಿಯುತ್ತದೆ.

ಹಿಂದುಸ್ತಾನದಲ್ಲಿ ಟೆಲಿಫೋನ ಕಾರಖಾನೆಯನ್ನು ಸ್ಥಾಪಿಸುವ ಕುರಿತು ಹಿಂದುಸ್ತಾನ ಸರಕಾರವು ಇಂಗ್ಲಂಡದ ಆಟೋಮ್ಯಾಟಿಕ್ ಟೆಲಿಫೋನ ಮತ್ತು ಇಲೆಕ್ಟ್ರಿಕ್ ಕಂಪನಿಯೊಡನೆ ಕರಾರು ಮಾಡಿಕೊಂಡಿದೆಯೆಂದು ಸರಕಾರಿ ಪ್ರಕಟನೆ ಹೊರಟಿದೆ

ಮಧ್ಯಪ್ರಾಂತ

ಮಧ್ಯಪ್ರಾಂತ ವರ್ಹಾಡಗಳ ಮುಖ್ಯ ಮಂತ್ರಿ ಪಂಡಿತ ರವಿಶಂಕರ ಶುಕ್ಲರ ಭವನದ ಆವಾರದಲ್ಲಿ ಗುಂಡು ಹಾರಿಸಿ ಕೊಲ್ಲುವ ಘಟನೆಯೊಂದು ತಾ.೩ಕ್ಕೆ ಜರಗಿತು. ಈ ದಿನ ಮಧ್ಯಾಹ್ನ ಓರ್ವ ಪೋಲೀಸನು ತನ್ನನ್ನು ಬಿಡುಗಡೆ ಮಾಡಬಂದ ಪೋಲೀಸನ ಮೇಲೆ ಗುಂಡು ಹಾರಿಸಿದನು

ಆಮರಣ ಉಪವಾಸ
ಅಪಹೃತ ಸ್ತ್ರೀಯರ ಶೋಧನೆಗಾಗಿ

ಮಹಾತ್ಮಾ ಗಾಂಧಿಯವರ ಪರಮ ಶಿಷ್ಯಳೂ ಸೇವಾಗ್ರಾಮದ ಆಶ್ರಮ ವಾಸಿನಿಯೂ ಆದ ಕುಮಾರಿ ಅಮತುಸ್ ಸಲಾಮ ಎಂಬ ಮುಸ್ಲಿಂ ಮಹಿಳೆಯು ಭಾವಲಪೂರ ಸಂಸ್ಥಾನದ ಅಧಿಕಾರಿಗಳು ಅಪಹೃತ ಸ್ತ್ರೀಯರ ಶೋಧದ ಬಗ್ಗೆ ತಳೆದ ಉದಾಸೀನತೆಯನ್ನು ನಿಷೇಧಿಸಲು ಆಮರಣ ಉಪವಾಸ ಕೈಕೊಂಡು ತಾ ೩ ರಿಂದ ಉಪವಾಸ ಪ್ರಾರಂಭಿಸಿಯೇ ಬಿಟ್ಟಿದ್ದಾಳೆಂದು ತಿಳಿದು ಬಂದಿದೆ. ಅಪಹೃತ ಸ್ತ್ರೀಯರ ಮತ್ತು ಮಕ್ಕಳ ಶೋಧದಲ್ಲಿ ಇವರು ಕಳೆದ ಕೆಲ ತಿಂಗಳಿಂದ ತೊಡಗಿದ್ದರು. ಭಾವಲಪೂರದ ಅಧಿಕಾರಿಗಳು ಈ ಕೆಲಸದಲ್ಲಿ ಸಹಕರಿಸುತ್ತಿಲ್ಲವೆಂದು ಇವರ ಅಭಿಪ್ರಾಯವಾಗಿದೆ.

ಕಲಕತ್ತಾ

ಕಲಕತ್ತೆಯಿಂದ ನಾಲ್ಕು ಮೈಲಿನ ಮೇಲಿದ್ದ ಲಿಲಾ ಹತ್ತಿರದ ಬಸ್ತಿ ಎಂಬ ಹಳ್ಳಿಯಲ್ಲಿ ಜಾತೀಯ ತಿಕ್ಕಾಟವಾಗಿ ೧೧ ಜನರಿಗೆ ಗಾಯಗಳಾದವು. ಇವರಲ್ಲಿ ನಾಲ್ವರು ಮಡಿದರು. ಈ ಬಗ್ಗೆ ಪ.ಬಂಗಾಲ ಸರಕಾರದ ಪ್ರಕಟನೆ ಹೀಗೆ ಹೇಳುತ್ತದೆ.—

ಅಲ್ಪಸಂಖ್ಯಾಕ ಜಾತಿಯವನೊಬ್ಬನು ಮದುವೆಯ ನಿಮಿತ್ತ ಬಹಿರಂಗವಾಗಿ ಗೋವಧೆ ಮಾಡಿದ್ದರಿಂದ ಅವನ ಮನೆಯ ಮೇಲೆ ಹಲ್ಲೆಯಾಯಿತು. ಸಮೀಪದ ಗಿರಣಿಯ ಕೂಲಿಕಾರರು ಅವನ ಮನೆ ಮುತ್ತಿ ಅದನ್ನು ಸುಟ್ಟರು. ಬೆಂಕಿಬಲಿದು ನೆರೆಯ ಗುಡಿಸಲುಗಳೂ ಬೂದಿಯಾದವು. ಪೋಲೀಸರು ಕೂಡಲೆ ಹೋಗಿ ಪರಿಸ್ಥಿತಿಯನ್ನು ಹಿಡಿತಕ್ಕೆ ತಂದರು. ಅನೇಕರನ್ನು ಸೆರೆಹಿಡಿಯಲಾಗಿದ್ದು ಕರ್ಫ್ಯೂ ಹೇರಲಾಗಿದೆ. ಸಂತ್ರಸ್ತರ ಪರಿಹಾರಕ್ಕೆ ೫ ಸಾವಿರ ರೂ.ಗಳ ಮಂಜೂರು ಮಾಡಲಾಗಿದೆ.

ಹಿಂದುಸ್ತಾನಕ್ಕೆ ಈಗ ಯಂತ್ರ ಸಾಮಗ್ರಿ ಮುಂತಾದ ಮೂಲ ವಸ್ತುಗಳ ಅಗತ್ಯವಿದೆಯೆಂದು ಪಶ್ಚಿಮ ಬಂಗಾಲದ ಮುಖ್ಯ ಮಂತ್ರಿ ಡಾ. ಬಿ. ಸಿ. ರಾಯರು ತಾ ೩ರಂದು ಜಪಾನದಿಂದ ಬಂದ ಶಿಷ್ಟ ಮಂಡಳವನ್ನು ಸ್ವಾಗತಿಸುತ್ತ ಹೇಳಿದರು.


ಹಿಂದೀ ಸಂಸ್ಥಾನ

ಕರ್ನಾಟಕ ಮಲೆನಾಡು ಪರಿಷತ್ತು ಕಳೆದ ತಿಂಗಳು ೨೮ಕ್ಕೆ ಹಕ್ಕಲ್ಕದಲ್ಲಿ ಹಿಂದುಸ್ತಾನ ಘಟನಾ ಸಮಿತಿಯ ಸದಸ್ಯರಾದ ಶ್ರೀ ಎಸ್ ವ್ಹಿ ಕೃಷ್ಣಮೂರ್ತಿ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರ ಭಾಷಣ ಮತ್ತು ಇತರ ಮಹನೀಯರ ಭಾಷಣಗಳಾದ ಬಳಿಕ ಮಲೆನಾಡಿನ ಅಭಿವೃದ್ಧಿ, ಮಲೇರಿಯಾ ನಿರೋಧಕ ಕಾರ್ಯ, ಪಡಭೂಮಿ ಸಾಗುವಳಿ ಸಹಾಯಕ ಉದ್ಯೋಗ ಮೊದಲಾದವುಗಳ ಸಂಬಂಧದಲ್ಲಿ ಕಮೀಟಿಯೊಂದನ್ನು ನೇಮಿಸಬೇಕೆಂದು ಬಿನ್ನವಿಸಿಕೊಳ್ಳುವ ಕರ್ನಾಟಕ ಪ್ರಾಂತ ರಚಿಸಿ ಮಲೆನಾಡೆಲ್ಲ ಒಂದೇ ಆಡಳಿತದಲ್ಲಿ ಬರುವಂತೆ ಯೋಜಿಸಬೇಕೆನ್ನುವ ಗೊತ್ತುವಳಿ ಸ್ವೀಕೃತವಾದವು.

ವಿವಾಹ ಸಮಾರಂಭಕ್ಕೆ ಜನರನ್ನು ಕರೆದುಕೊಂಡ ಹೊರಟ ಲಾರಿಯೊಂದು ೩೦ ನೇ ತಾರೀಕು ಮುಂಜಾನೆ ತೀರ್ಥಹಳ್ಳಿ ಬಳಿಯಲ್ಲಿ ಅಪಘಾತಕ್ಕೆ ಸಿಕ್ಕಿದ್ದರಿಂದ ಅದರಲ್ಲಿಯ ಶ್ರೀ ಪದ್ಮನಾಭರಾವ ಹಾಗು ಶ್ರೀ ಶ್ರೀಪತಿರಾವ ಎಂಬ ಇಬ್ಬರು ಮರಣಹೊಂದಿದರು. ಡ್ರಾಯವರ ಮತ್ತು ಕ್ಲೀನರರಿಗೂ ಗಾಯಗಳಾಗಿವೆ. ಪೋಲೀಸರು ತಪಾಸಣೆ ನಡೆಸಿದ್ದಾರೆ.

ಪಾಕಿಸ್ತಾನ

ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಕತ ಅಲಿಖಾನರು ಕರಾಚಿಯಲ್ಲಿ ತಾ ೩ ಕ್ಕೆ ಸುದ್ದಿಗಾರರ ಸಭೆಯಲ್ಲಿ, ಭದ್ರತಾ ಮಂಡಲದ ಕಾಶ್ಮೀರ ಗೊತ್ತುವಳಿಯ ಬಗ್ಗೆ ಪಾಕಿಸ್ತಾನದ ಪ್ರತಿಕ್ರಿಯೆಯನ್ನು ತಿಳಿಸುತ್ತ, ಗೊತ್ತುವಳಿಯಲ್ಲಿ ನಿಷ್ಪಕ್ಷ ಸಾರ್ವತ್ರಿಕ ಮತಗಣನೆ ಅಶಕ್ಯ ಮತ್ತು ಸದಿಚ್ಛಾ ಮಂಡಲವು ಇಲ್ಲಿಗೆ ಬಂದನಂತರ ಗೊತ್ತುವಳಿಯಲ್ಲಿಯ ಕುಂದು ಕೊರತೆಗಳನ್ನು ಅವರಿಗೆ ತೋರಿಸಿಕೊಟ್ಟು ಪರಿಸ್ಥಿತಿಯನ್ನು ಸ್ವತಃ ನಿರೀಕ್ಷಿಸಲು ತಿಳಿಸುವೆವು ಪಾಕಿಸ್ತಾನವೆಂದರೆ ಕೆಂಡಕಾರುವ ಶೇಖ ಅಬ್ದುಲ್ಲಾ ಕಾಶ್ಮೀರದ ಮುಖ್ಯ ಮಂತ್ರಿಗಳಾಗಿದ್ದಾಗ ಅಲ್ಲಿ ವಿಶ್ವಾಸದ ವಾತಾವರಣ ಉಂಟಾಗುವದು ಅಶಕ್ಯ ಈ ಕಾರಣಗಳ ಮೂಲಕ ಕಾಶ್ಮೀರ ಗೊತ್ತುವಳಿ ಅನ್ಯಪಹಾರ್ಯ ವಿರುವದು ಎಂದು ಮೊದಲಾಗಿ ಹೇಳಿದರು.



ಹೊಸ ಸೌರಾಷ್ಟ್ರ ಒಕ್ಕೂಟದ ಮುಖ್ಯ ಮಂತ್ರಿ ಶ್ರೀ. ಢೇಬರ್

ಪಶ್ಚಿಮ ಪಾಕಿಸ್ತಾನದಿಂದ

ಗುಳೇ ಬಂದವರು ಬಿಟ್ಟು ಬಂದ ಆಸ್ತಿ
ಸುಮಾರು ೨೦೦ ಕೋಟಿ ರೂಪಾಯಿಗಳಷ್ಟಿರುವವು

ಮುಂಬಯಿ ಸಿಂಧ ಕಾಂಗ್ರೆಸ ಪಕ್ಷದ ಹಿಂದಿನ ಧುರೀಣರಾದ ಪ್ರೊ. ಘನಶ್ಯಾಮ, ಜೆ. ಶಿವದಾಸನ್‌ದವರು ಒಂದು ಪ್ರಕಟನೆ ಹೊರಡಿಸಿ ಪಾಕಿಸ್ತಾನದಲ್ಲಿ ಹಿಂದೀ ಹೈಕಮೀಶನರರಾದ ಶ್ರೀ ಶ್ರೀಪ್ರಕಾಶರು ಬನಾರಸದಲ್ಲಿ ಭಾಷಣಮಾಡುತ್ತ ಪಶ್ಚಿಮ ಪಾಕಿಸ್ತಾನದಿಂದ ಗುಳೇ ಬಂದವರು ಅಲ್ಲಿಬಂದ ಸ್ಥಾವರ ಆಸ್ತಿಯು ಸುಮಾರು ೧೩ ಕೋಟಿ ರೂಪಾಯಿ ಬೆಲೆ ಬಾಳುವದೆಂದು ಹೇಳಿದ್ದು ಸರಿಯಾದ ವರದಿಯಲ್ಲವೆಂದೂ ಸಿಂಧ ಪ್ರಾಂತದಿಂದ ಬಂದವರು ಬಿಟ್ಟು ಬಂದ ಜಮೀನುಗಳ ಒಟ್ಟು ಬೆಲೆಯೇ ಸುಮಾರು ೯೦ ಕೋಟಿ ರೂಗಳಷ್ಟಿದ್ದು ಕಟ್ಟಡಗಳನ್ನು ಗಣನೆಯಲ್ಲಿ ತಂದರೆ ಒಟ್ಟು ಬೆಲೆಯು ಸುಮಾರು ೨೦೦ ಕೋಟಿ ರೂ.ಗಳಷ್ಟಾಗಬಹುದೆಂದೂ ಹೇಳಿದ್ದಾರೆ.

ಬಟ್ಟೆಯ ಬೆಲೆ ಇಳಿಸಲು ಉಗ್ರೋಪಾಯ
ಸರಕಾರವು ಬೇಗ ಕೈಕೊಳ್ಳುವದು

ಹೊಸದಿಲ್ಲಿ - ಬೆಲೆಗಳು ಮಿತಿಮೀರಿ ಜವಳಿ ಪೇಟೆಯಲ್ಲುಂಟಾದ ಬಿಕ್ಕಟ್ಟನ್ನು ಪರಿಹರಿಸಲು ಹಿಂದಸ್ತಾನ ಸರಕಾರವು ಉಗ್ರೋಪಾಯವು ಕೈಕೊಳ್ಳಲಿದೆಯೆಂದು ನಿರೀಕ್ಷಿಸಲಾಗಿದೆ.

ಸುಂಕ ಸಮಿತಿಯವರು ನಿರ್ಣಯಿಸುವ ಯೋಗ್ಯ ಬೆಲೆಗಿಂತ ಉತ್ಪಾದಕರು ಹೆಚ್ಚು ತೆಗೆದುಕೊಳ್ಳುವ ಹಣವನ್ನು ಸರಕಾರವು ತನ್ನ ಬೊಕ್ಕಸಕ್ಕೆ ಸೇರಿಸಿಕೊಳ್ಳಲಿದೆಯೆಂದು ಹೇಳಲಾಗುತ್ತಿದೆ ಈ ಕ್ರಮದಿಂದ ಉತ್ಪಾದಕರು ಹೆಚ್ಚು ಬೆಲೆ ತೆಗೆದುಕೊಳ್ಳುವದು ಕಡಿಮೆಯಾಗಬಹುದೆಂದು ನಿರೀಕ್ಷಿಸಲಾಗಿದೆ. ಸುಂಕ ಸಮಿತಿಯು ಮುಂಬಯಿಯಲ್ಲಿ ಇವತ್ತಿನಿಂದ ಸೇರಿದ್ದು ಬೆಲೆ ಏರಿಕೆಯ ಪರಿಶಿಲನೆ ನಡೆಸಿದೆ.

ಬಟ್ಟೆಯ ಕಳ್ಳ ಪೇಟೆಯನ್ನು ತಡೆಗಟ್ಟಲು ಸರಕಾರವು ವಿಚಾರ ನಡೆಸಿದ್ದು ನಿರ್ಣಯವು ಬೇಗನೆ ಹೊರಬೀಳಬಹುದು.

ಸಂಪು ಹೂಡಬೇಡಿರಿ

ಕೇರಳ ಸಮಾಜವಾದೀ ಪರಿಷತ್ತಿಗೆ ಅಧ್ಯಕ್ಷರಾಗಿ ಹೋಗಿದ್ದ ಶ್ರೀ ಅಚ್ಯುತ ಪಟವರ್ಧನರು ಕಲಕತ್ತೆಯಲ್ಲಿ ತಾ. ೧ ರಂದು ಕೂಲಿಕಾರರು ತಮ್ಮ ತೊಂದರೆಗಳನ್ನು ಹೋಗಲಾಡಿಸಿಕೊಳ್ಳಲು ಎಲ್ಲ ಉಪಾಯಗಳೂ ವಿಫಲವಾದಾಗ ಮಾತ್ರ ಸಂಪಿಗೆ ಕೈ ಇಕ್ಕಬೇಕಲ್ಲದೆ ಹೆಜ್ಜೆ ಹೆಜ್ಜೆಗೂ ಈ ಅಸ್ತ್ರ ಬಳಸುವದು ರಾಷ್ಟ್ರವಿಘಾತಕವೆಂದು ಹೇಳಿದರು. ಕೂಲಿಕಾರರ ಜೀವನವನ್ನು ಎತ್ತರಿಸುವದೇ ಸಮಾಜವಾದೀ ಪಕ್ಷದ ಗುರಿಯಾಗಿದೆ. ಅನವಶ್ಯಕವಾಗಿ ಕೆಲಸಕ್ಕೆ ತಡೆ ಹಾಕುವದು ಸಮಾಜವಾದೀ ತತ್ವಕ್ಕೆ ವಿರೋಧವಾಗಿದೆ. ಅದ್ದರಿಂದ ಸಂಪನ್ನು ಹೂಡುವಾಗ ದೀರ್ಘ ವಿಚಾರ ಮಾಡುವದು ಅಗತ್ಯ ಎಂದು ಮುಂತಾಗಿ ಹೇಳಿದರು.

ಹಾಸನ ಜಿಲ್ಲಾ ಸಮ್ಮೇಲನ ಮೇ ೧೨ ರಿಂದ ಸಂಸ್ಥಾನದ ಕಂದಾಯ ಮಂತ್ರಿ ಶ್ರೀ ಎಚ್ ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ನಡೆವುದು. ಜಿಲ್ಲಾ ಬೋರ್ಡ ಅಧಿವೇಶನ ಮೇ ೧೫ ಕ್ಕೆ ನಡೆವುದು.

ಕೈ ಬರಹದ ಮೀಮಾಂಸೆ

(ಪ್ರೊ. ನಾ. ಕಸ್ತೂರಿ, ಎಂ. ಎ., ಬಿ. ಎಲ್.)

'ಕೈಬರಹ ತೋರಿಸಿ ಅವಲಕ್ಷಣ ಅನಿಸಿಕೊಂಡ,' ಎಂಬುದು ಕನ್ನಡಿಗರನೇಕರ ನಾಣ್ನುಡಿ....ಅಕ್ಷರಗಳನ್ನು ಬಿಡಿಬಿಡಿಯಾಗಿ ಬರೆಯುವವನ ಸಹವಾಸ ತ್ಯಜಿಸಿರಿ.... ದಪ್ಪದಪ್ಪನ್ನ ಅಕ್ಷರ ಬರೆಯುವವರು ಬಂಡವಾಳಗಾರರು....'ಚಕ್ರದೃಷ್ಟಿ,' 'ಅಲ್ಲೋಲಕಲ್ಲೋಲ' ಮೊದಲಾದ ಪುಸ್ತಕಗಳಿಂದ ಕನ್ನಡಿಗರನ್ನು ನಗೆಯಲ್ಲಿ ತೇಲಿಸಿದ ಶ್ರೀ ಕಸ್ತೂರಿಯವರ ಕೈಬರಹ-ಶಾಸ್ತ್ರದ ನಿರ್ಣಯಗಳಿವು! 'ಕರ್ಮವೀರ'ದ ಓದುಗರಿಗೆ ಕಸ್ತೂರಿಯವರ ಲೇಖಗಳನ್ನೋದುವ ಸಂಧಿಗಳು ಇನ್ನೂ ಹಲವು ಬರಲಿವೆ.

ಕನ್ನಡಕ್ಕೆ ಒಂದು ಟೈಪರೈಟರ್ ಬರುವದರೊಳಗೆ ಈ ಲೇಖನವನ್ನು ವಾಚಕರು ಓದಿ ಮುಗಿಸಬೇಕು! ಏಕೆಂದರೆ ಅಲ್ಲಿಂದಾಚೆಗೆ ಹಲಗೆ, ಬಳಪದ ಸಿದ್ಧಿಯದೊಂದಗ್ಗಳಿಕೆ, ಕೈಗೆ ಲೇಖನಿಯು ಕೊಡದಗ್ಗಳಿಕೆ ಬಹು ಸಾಮಾನ್ಯವಾಗಿ ಬಿಡುತ್ತದೆ. ಮುಂದೆ ಕನ್ನಡ, ಕವಿಗಳು ತಮ್ಮ ಸುಕುಮಾರ ಹಸ್ತಗಳ ಹತ್ತೂ ಬೆರಳುಗಳ ತುತ್ತತುದಿಗಳಿಂದಲೇ ರಸವಾಹಿನಿಯನ್ನು ಟಿಪಟಿಪಿಸಿ ನಾದ ಕುಕ್ಷಿವನ್ನು ಉಂಹರಿಸುತ್ತಾರೆ. ಬರಲಿರುವ ಕನ್ನಡ ಪ್ರಾಂತದ ರಾಜಧಾನಿಯಲ್ಲಿ ನಿರ್ಮಾಣವಾಗಲಿರುವ 'ಕಲಾಕ್ಷೇತ್ರ'ದಲ್ಲಿಯು ನಮ್ಮ ಮೊಮ್ಮಕ್ಕಳಾದ ಕವಿಕಿಶೋರರ ಕಾವ್ಯ ಚಕ್ಷುಸ್ಸನ್ನರಳಿಸುವ ಸಲುವಾಗಿ ನಾನು ನನ್ನ ಗೆಳೆಯರಾದ ಹಲವು ಆಧುನಿಕ ಕವಿಗಳ ಕೈಬರಹಗಳನ್ನು ಸಂಗ್ರಹಿಸಿದೇನೆ. ಖಾನಾವಳಿಯ ಮಿಶ್ರಗಂಧದಿಂದಲೋ, ಗಲ್ಲಿ ಗೋಡೆ ಮೇಲಿನ ಜಾಹಿರಾತು ರಮಣಿಯ ಹಲ್ಕಿರಿತದಿಂದಲೋ, ತಲೆಯೊಳಗೆ ಗುಂಗುಂನಾದ ಮೊದಲಾದಾಗ ಅವರು ಕಾವ್ಯಜ್ವರ ಪೀಡಿತರಾಗಿ, ಪಂಕ್ತಿಲಾಭದಿಂದ ಪುಲಕಿತರಾಗಿ, ಥಟ್ಟನೆ ಮನೆಗೆ ಹಿಂತಿರುಗಿ ಕೋಣೆಯೊಳಗೆ ಕೂಡಿ, ಬಾಗಿಲು ಬಂಧಿಸಿ, ಯತಿಗಣಗಳನ್ನು ಹೊರದೂಡಿ, ಸೇದುಬತ್ತಿಯ ಹೊಗೆಯನ್ನು ಹೊದ್ದು, ಕಾಗದದ ತುಂಡನ್ನು ಹುಡುಕಿ, ಸೀಸದ ಕಡ್ಡಿಯಿಂದ ಬರೆದು, ಮಸಿಯ ಕೋಲಿಂದ ತಿದ್ದಿ, ಪದವಿಟ್ಟಳುಪಿ, ಪ್ರಾಸದಿಂದ ಪ್ರಾಸ ತುಂಬಿ, ಕಟ್ಟಿದ ಕವನಗಳು ಅವು. ಅವುಗಳನ್ನು ನೋಡಿದಾಗ, ನಮ್ಮ ಮೊಮ್ಮಕ್ಕಳು, ಕವಿಗಳೂ ತಮ್ಮಂತೆಯೇ ಶ್ರಮಜೀವಿಗಳು, ಅಶ್ರಮಜೀವಿಗಳಲ್ಲ, ಎಂಬುದನ್ನು ಅರಿತುಕೊಳ್ಳುವರು.

ಅಲ್ಲದೆ, ಸ್ವಯಂ ಕವಿಗಳ ಹಸ್ತಾಕ್ಷರಗಳನ್ನು ನೋಡಿ ಪರೀಕ್ಷಿಸುವದರಿಂದ ಅವರ ಚರಿತ್ರೆ-ಚಾರಿತ್ರ್ಯ, ಅವರ ಗುಣಾವಗುಣಗಳು ಮುಂತಾದವು ಕೂಡ ಗೋಚರವಾಗುತ್ತವೆ. ಒಬ್ಬನ ಕೈಬರಹ ಆತನ ವ್ಯಕ್ತಿತ್ವದ ಕೈಗನ್ನಡಿ; ಕನ್ನಡ ಬರಹವಂತೂ ವಿಶೇಷತಃ ಅಚ್ಚಕನ್ನಡಿ. ಕೈಬರಹ ತೋರಿಸಿ ಅವಲಕ್ಷಣ ಎನಿಸಿಕೊಂಡ ಎಂಬುದು ಕನ್ನಡಿಗರನೇಕರ ನಾಣ್ ನುಡಿ. ಅದರ ಸೊಟ್ಟು ನೆಟ್ಟುಗಳಿಂದ ತುಂಬು ಹಂಬುಗಳಿಂದ, ಮೇಲು ವಾಲುಗಳಿಂದ, ನಾವು ಬರಹಗಾರನ ಆಗುಹೋಗುಗಳನ್ನೂ ರೀತಿನೀತಿಗಳನ್ನೂ ಜನ ನಂಬಲಿ ನಂಬದಿರಲಿ, ನಮ್ಮ ನಮ್ಮ ಮನಬಪ್ಪುವಂತೆ ಊಹಿಸಬಹುದಾಗಿದೆ. ನನ್ನ ಹತ್ತಿರ ಇರುವ ಕೈಬರಹದ ಕವನಗಳನ್ನು ಮೊನ್ನೆ ನಾನು ಚಾಣಾಕ್ಷರರಾದ ಮಿತ್ರರೊಬ್ಬರಿಗೆ ತೋರಿಸಿದೆ. ಕೂಡಲೇ ಅವರು ಅವುಗಳನ್ನು ಬರೆದ ಕವಿ ಸವ್ಯಸಾಚಿಯೆಂದೂ ಪ್ರಗತಿಶೀಲರ ಗುಂಪಿನ ... ಪಶ್ಚಾತ್ತಾಪಿ, ... ದಲ್ಲಿ ಮುಳುಗಿರುವ ಬಡ ಕಾರಕೂನ ಎಂದೂ ಕಣ್ಣು ಮುಚ್ಚಿಕೊಂಡೇ ಕಣಿ ಹೇಳಿದರು !

ಸಾಮುದ್ರಿಕ ಶಾಸ್ತ್ರದಿಂದ ಭವಿಷ್ಯತ್ ಸಮುದ್ರದಲ್ಲಡಗಿರುವ ತಿಮಿತಿಮಿಂಗಿಲಾದಿಗಳನ್ನು ಪತ್ತೆ ಹಚ್ಚುವಂತೆ ಕೈಬರಹದ ವಿಮರ್ಶಾಶಾಸ್ತ್ರದಿಂದಲೂ ಕಾಲದ ಕಗ್ಗತ್ತಲೆಯನ್ನು ಭೇದಿಸಿ ಅನೇಕ ವಿಷಯಗಳನ್ನು ಹೊರಗೆಡಹಬಹುದು. ಸಾಮಾನ್ಯವಾಗಿ ನಾವು ಅಪರಿಚಿತರನ್ನು ಅರಿಯಲು ಉಪಯೋಗಿಸುವ ಸಾಧನಗಳು, ಚಂಡಿಕೆಯ ಗಂಟು, ಕೂದಲ ಬಾಚು, ಬೈತಲೆಯ ಚಾಚು, ಹುಬ್ಬಿನ ಹಾರಾಟ, ಕಣ್ಣು ಮಿಟುಕು, ಮೂಗ ಮಿಮಿರು, ಮೀಸೆಯ ಕೊಂಕು, ತುಟಿಯ ಡೊಂಕು, ಗಲ್ಲದ ಚೂಪು, ಕತ್ತು ಗತ್ತು, ಎದೆಯ ಠೀವಿ, ಕೈಗಳ ಬೀಸು, ಮುಷ್ಟಿಯ ಬಿಗಿ, ಉದರದ, ಗರ್ತ, ನಡಿಗೆಯ ಗಾಡಿ, ಉಡಿಗೆಯ ಜಾಡು ಮೊದಲಾದುವು. ಇವುಗಳಿಂದ ಆಗಂತುಕನ ಕಸಬೇನು, ಉಪಕಸಬೆಂಥದ್ದು, ಗುರಿ ಯಾರು, ಗುರಿಯಾವುದು, ಎಂಬುದನ್ನೆಲ್ಲ ಗೊತ್ತುಮಾಡಬಹುದು. ಆದರೆ ಆತ ಸ್ವಹಸ್ತದಿಂದಲೇ ಬರೆದ [ಟೈಪ ಹೊಡೆದ, ಅಲ್ಲ] ಒಂದು ಹಾಳೆ ನಮ್ಮ ಕಣ್ಣಿಗೆ ಬಿದ್ದರೆ ಸಾಕು, ಆತನ ಅಂತರಾಳದಲ್ಲಿ ಹುದುಗಿರುವ ಆಸೆ ಪ್ರತ್ಯಾಶೆಗಳನ್ನು ಕೂಡ ನಾವು ಮುಂಗೈ ಉಂಗುರದಂತೆ ಪ್ರತ್ಯಕ್ಷ ಕಂಡು ವಿವರಿಸಬಹುದು ! ಶಾಸ್ತ್ರ ಅಂದರೆ ಅದು.

ನೋಡಿ! ಮನುಷ್ಯನ ಮಾನಸ ಸರೋವರದಲ್ಲಿ ಎದ್ದ ವಿಚಾರ ತರಂಗಗಳು ಅವನ ನರಸಮೂಹಗಳಲ್ಲಿ ಪ್ರವಹಿಸಿ, ವಿದ್ಯುತ್‌ವೇಗದಿಂದ ಸುಮಾರು ೫೦೦ ಮಾಂಸ ಖಂಡಗಳನ್ನೆಚ್ಚರಿಸಿ, ಕಾಗದದ ಮೇಲೆ ಕನ್ನಡಲಿಪಿಯಾಗಿ ಕಂಗೊಳಿಸುತ್ತವೆ. ಆತ ಅಕ್ಷರಗಳನ್ನು ಬಿಡಿಬಿಡಿಯಾಗಿ ಬರೆಯುತ್ತಾರೇನು? ಹಾಗಾದರೆ, ಈ ಶಾಸ್ತ್ರದ ರೀತ್ಯಾ, ಆತನ ಸಹವಾಸವನ್ನು ನಾವು ಆದಷ್ಟು ಬೇಗ ತ್ಯಜಿಸಿದರೊಳ್ಳೆಯದು. ಒಂದು ಅಕ್ಷರಕ್ಕೂ ಅದರ ನೆರೆ ಅಕ್ಷರಕ್ಕೂ ನೆರೆ ಕೂಡಿಸಿದರೆ ಹೊರೆಯಾದೀತೆಂದು ಹೆದರುವ ಆ ಪ್ರಾಣಿ, ಎಂದೆಂದಿಗೂ ನಮ್ಮ ಬೆನ್ನಿಗೆಬಲವಾಗಿ, ತೋಳಿಗೆ ತೊಲೆಯಾಗಿ, ಎದೆಗೆ ಸುಧೆಯಾಗಿ ನಿಲ್ಲಲಾರ. ಗೆಳೆತನದ ಮಿಳಿತಕ್ಕೆ ಅವನ ಅಂತರಂಗ ಒಪ್ಪದು. ಅಂಥವನ ರಾಜಕೀಯ ದೃಷ್ಟಿಕೂಡ, ದೇಶ ಹಿತಕ್ಕೂ ಜಗತ್ ಶಾಂತಿಗೂ ಅನುಕೂಲವಾದದ್ದಲ್ಲ. ಅಂಗ ವಂಗ ಕಳಿಂಗ ಮಗಧ ಮಾಳವ ನೇಪಾಳ ಎಂಬ ಹರಣಿಯ ಹಳೇ ಛಪ್ಪನ್ನೈವತ್ತಾರು ದೇಶಗಳ ಕನಸನ್ನೇ ಚಪ್ಪರಿಸುತ್ತ, ತನ್ನ ಅಕ್ಷರಗಳಂತೆ, ಈ ಕ್ಷರ ಪ್ರಪಂಚವೂ ಛಿನ್ನ ಭಿನ್ನವಾಗಿರುವದೇ ಮೇಲು, ಎಂಬುದೇ ಅಂಥವರ ವಾದವಾಗಿರುತ್ತದೆ. . . ಹಾಗೆಯೇ, ಅಕ್ಷರಗಳನ್ನು ತೀರ ಒತ್ತೊತ್ತಾಗಿ ಬರೆಯುವವರನ್ನೂ ನಂಬಲಾಗುವದಿಲ್ಲವೆಂದೂ ಶಾಸ್ತ್ರ ಹೇಳುತ್ತದೆ. ಅಂಥವರು ತಾಳ್ಮೆ ಇಲ್ಲದ ತಿಳುವಳಿಕೆಸಾಲದ ದುಡುಕು ಜೀವಿಗಳು. ಅವರಲ್ಲನೇಕರು ದುಂದುವೆಚ್ಚದವರು; ಅಪಾಯಾಭಿಲಾಷಿಗಳು, ಇಲ್ಲವೆ, ಉಪಾಯವೇದಾಂತಿಗಳು!

ಅಕ್ಷರಗಳನ್ನು ದಪ್ಪ ದಪ್ಪವಾಗಿ, ಡೊಳ್ಳುಹೊಟ್ಟೆಗಳಾಗಿ, ಗುಂಡುಗುಂಡಾಗಿ ಬರೆಯುವ ಅಭ್ಯಾಸದವರು. ಭಂಡವಾಳಶಾಹಿ ಮನೋಭಾವದವರು. ಅವರಿಗೆ ದೀನದಲಿತರ ಮೇಲೆ ಕನಿಕರ ಸಾಲದು ಅವರ ಕಣ್ಣು ಹಾಲಿನ ಮೇಲೆ, ಬಡಿಯ ಮೇಲಲ್ಲ. ಅವುಗಳನ್ನು ಕೃಶವಾಗಿ ಬರೆಯುವವರು ಕಸಬಿನಲ್ಲಿ ಬಡ ಉಪಾಧ್ಯಾಯರಾಗಿರುತ್ತಾರೆ ಅಥವಾ ಮೈಯಲ್ಲಿ ಕ್ಷಯರೋಗಶವರಾಗಿರುತ್ತಾರೆ, ಎಂಬುದು ಪಾಶ್ಚಾತ್ಯರ ಮತ. ಒಂದು ಪಂಕ್ತಿಗೂ ಮತ್ತೊಂದಕ್ಕೂ ನಡುವೆ ಕಾಲಂಗುಲಕ್ಕಿಂತ ಹೆಚ್ಚು ಅಂತರ ಬಿಡುವವರು ಪೋಲೀಸ್ ಮನೋಭಾವದವರು, ಚಾಡಿಕೋರರು ಅಥವಾ ಚಾವಟಿಕೋರರು ದಕ್ಷರಾದ ಕಿಂಕರರು. ಅಷ್ಟು ಅಂತರ ಬಿಡದವರು ಲಂಚಕೋರರು ಅಂಚೆ ಇಲಾಖೆಗೆ ಯೋಗ್ಯರು, ಕಿನ್ನರರಂತೆ ಗಾನಲೋಲರು.

ಕನ್ನಡವನ್ನು ಬರೆಯುವಾಗ, ಅಕ್ಷರಗಳು ನೆಟ್ಟಗೆ ನಿಲ್ಲದೆ, ಬಲಕ್ಕೋ ಎಡಕ್ಕೋ ಭಾಗಬಹುದಲ್ಲವೆ? ಬಲಕ್ಕೆ ವಾಲುತ್ತ ಬರೆಯುವವನನ್ನು ನಾವು ಈ ರೀತಿ ನಿರ್ಭಯರಾಗಿ ವಿಮರ್ಶಿಸಬಹುದು. ಅವರು ಕಂಡ ಕಂಡವರ ಬಲವಂತ ಕ್ಕೊಳಗಾದವರು, ಅವರಿವರ ದಾಕ್ಷಿಣ್ಯಕ್ಕೆ ಸಿಕ್ಕಬಿದ್ದು ಪರದಾಡುತ್ತ ಪರೋಪಕಾರ ಮಾಡುವ ಸ್ವಭಾವದವರು ಎಂದು ಅಲ್ಲದೆ ಅಂಥವರ ಸಂಸಾರಜೀವನ ಕೂಡ ಸುಖಮಯವಾಗಿರುವದು ಅಪರೂಪ. ನಂಬಿ, ತಣ್ಣಗೆ ತಮ್ಮ ಎಡಮಗ್ಗುಲಲ್ಲಿ ಕುಳಿತಿರುವ ಧರ್ಮಪತ್ನಿಯರಿಂದ ದೂರ ಸರಿದು ತಾವೇ ತಾವಾಗಿ ಬಲಕ್ಕೆ ತಿರುಗುವ ಆಕಾಂಕ್ಷೆ ಅವರದು! ಅವರ ಕುಟುಂಬ ಜೀವನ ಕೇವಲ ಕುಟುಕಜೀವನ ! ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರು ಹೇಳಿರುವಂತೆ, ಅವರ ಪ್ರೇಮ ೬೩ ರದಲ್ಲ, ೩೬ ರದು.. ಎಡಕ್ಕೆ ವಾಲುತ್ತ ಬರೆಯುವವರು ಸಂಪೂರ್ಣ ಭಾವಜೀವಿಗಳು. ಸಾಮಾನ್ಯವಾಗಿ, ಬಲದಿಂದ ಎಡಕ್ಕೆ ಕೈ ಓಡಿಸುವ ಜನಾಂಗಗಳೆಲ್ಲ ಭಾವೋದ್ರೇಕಗಳಿಗೆ ಕಟ್ಟುಬಿದ್ದಿರುವುದನ್ನು ನಾವು ಚರಿತ್ರೆಯಿಂದ ತಿಳಿಯುತ್ತೇವೆ. ಹೃದಯವೆಂಬ ರಕ್ತಕೋಶವೇ ಭಾವಗಳ ಚಿಲುಮೆ. ಅದು ನಮ್ಮ ಎದೆಯ ಎಡಪಾರ್ಶ್ವದಲ್ಲಿದೆ. ಅದ್ದರಿಂದ, ಯಾರ ಲೇಖನಿ, ವಿಚಾರದಿಂದ ಪ್ರಚೋದಿತವಾಗದೆ, ಅರಿಷಡ್ವರ್ಗಗಳಿಂದ ಪ್ರೇರಿತವಾಗುತ್ತದೋ ಅವರು ಎಡಕ್ಕೆ ಬಾಗಿಸುತ್ತಲೇ ಅಕ್ಷರಗಳನ್ನು ಜೋಡಿಸುವರು. ಅಂಥವರಿಗೆ, ಬೆಳ್ಳಗಿರುವದೆಲ್ಲ ಐರಾವತ, ಕಪ್ಪಗಿರುವದೆಲ್ಲ ಐರಾವಣ; ಕೆಳ್ಳಗಿರುವದೆಲ್ಲ ತಾರಾಮಣಿಯರು, ಹುಳ್ಳ ತೆರೆದಿರುವವರೆಲ್ಲ ಜೊಳ್ಳ ಸರ್ಪಕರು; ಕಾಗೆಗಳೆಲ್ಲ ಕೋಗಿಲೆಯ ಗುರುಸಮಾನ; ಕನ್ನಡ ಸಿನೆಮಾಗಳೆಲ್ಲ ಹಾಲಿವುಡ್ಡನ್ನು ಗೇಲಿ ಎಬ್ಬಿಸುವಂಥವು; ಅವರಿಗೆ ತಲೆತುಂಬ ಕಲೆ, ನೆಲತುಂಬ ನಲಿವು; ಬಾನೆಲ್ಲ ಬೇಸೆ; ಕಡಲೆಲ್ಲ ಕಣ್ಣೀರು; ನೇಸರೆಂದರೆ ಬೇಸರ; ತಿಂಗಳೇ ಹೊಂಗಲಶ; ಹೆಂಗಳೆಂದರೆ ಅವರು ಪೆಂಗರಾಗುವರು.

ನಾವು ಪರೀಕ್ಷಿಸುವ ಕೈಬರಹದಲ್ಲಿ ಒತ್ತುಗಳನ್ನು ಆತ ಒತ್ತಿದಾನೆಯೇ, ಮೆತ್ತಗೆ ಸೋಲಿಸಿದಾನೆಯೇ ? ಇದು ಆತನ ಗುಣದೋಷದ ನಿಷ್ಕರ್ಷೆಗೆ ಬಹುಮುಖ್ಯವಾದ ಒಂದು ಅಂಶ. ಒತ್ತಿ ಬರೆಯುವವನಾದರೆ, ಆತ ಖಂಡಿತವಾದಿ, ಮಹಾಪ್ರಾಣದವ; ನೌಕರಿ ಜೀವನದಲ್ಲಿ ಆದಾ ಉಡಿಯಿಂದಲೇ ಬಡ್ತಿ ಗಿಟ್ಟಿಸುವ ಗಟ್ಟಿಗ. ಸೋತರೂ ಗೆದ್ದಂತೆ ನಟಿಸುವ, ಮೋಸಗಾರ; ಆತ ಅಯ್ಯ ಎಂಬುದು ಆಗೊಂದು ಸಲ, ಈಗೊಂದು ಸಲ, ಅಷ್ಟೆ; ಎಲವೋ ಎಂಬ ನರಕಸಂಬೋಧನೆಯೇ ಆತನ ನಾಲಗೆಯ ಮೇಲೆ ನಾಟ್ಯವಾಡುವುದು. . ಒತ್ತುಗಳನ್ನು ಕಂಡೂ ಕಾಣದೆ ಕೋಮಲವಾಗಿ ಬರೆಯುವವನು ಅಲ್ಪಪ್ರಾಣಿ ಎಂಬುದು ಸ್ವತಃ ಸಿದ್ಧ. "ಆತ ಎಲೆಮರೆಯ ಕಾಯಿ; ಅಹಿಂಸಾವಾದಿ; ಹಾಲುಗಲ್ಲದ ಮುದಿಗೂಸು. ಆತನದು ಇಟ್ಟಲ್ಲೇ ಬಿದ್ದಿರುವ ಇಟ್ಟಿಗೆ ಜೀವನ. ಊರಲ್ಲಿರುವ ವೈದ್ಯರುಗಳಿಗೆಲ್ಲ ಭೇಟಿ ಇತ್ತು ತಮ್ಮ ಹೊಟ್ಟೆ ಸಂಕಟ ಹೇಳಿಕೊಂಡು ಅದನ್ನು ಕಡೆಯತನಕ ಉಳಿಸಿಕೊಳ್ಳುವದರಲ್ಲೇ ಆತನಿಗೆ ತೃಪ್ತಿ.

ಒಬ್ಬರ ಕನ್ನಡ ಬರವಣಿಗೆಯನ್ನು ಕೆದರಿ ನೋಡುವಾಗ ಪ್ರತಿ ಅಕ್ಷರಕ್ಕೂ ಶಿರಃಪ್ರಾಯವಾದ ತಲೆಕಟ್ಟನ್ನು ಬರೆಹಗಾರ ಹೇಗೆ ಜೋಡಿಸುತ್ತಾರೆ ಎಂಬುದನ್ನು ಪ್ರತ್ಯೇಕ ಗಮನಿಸಿದರೆ, ಸ್ವಾರಸ್ಯವುಂಟು. ಅದು ಲಿಯಾಕತ್ ಅಲಿಖಾನ ಪ್ರಭೃತಿಗಳ ಮುಂಡಾಸಿನ ಕುಚ್ಚಿನಂತೆ ರಾರಾಜಿಸುತ್ತ ಎದ್ದು ನಿಂತು ಗಾಳಿಯಲ್ಲಿ ಪಟಪಟನೆ ಹಾರಾಡುತ್ತದೋ, ಅಥವಾ ... ಅರೆ ಮೀರಿದ ಟೊಪ್ಪಿಗೆಯಂತೆ, ಅಕ್ಷರದ ... ಗಳನ್ನು ಮುಚ್ಚುತ್ತ ಕುಸಿದಿರುತ್ತದೋ ಎಂದು ವೀಕ್ಷಿಸಿ ! ತಲೆಕಟ್ಟು ಪ್ರಕಾಶ ಉದ್ದವಾಗಿದ್ದರೆ ಮನುಷ್ಯ ವಾಚಸಿರೋಧ ... ... ಮೋಹನ, ಮುಂಗೋಪಿ ... ವಿದ್ಯಾವಂತಗಳೆರಡೂ ಕೆದರಿ ಹೋದವ, ಸಾಲವಂತ, ಉಂಡು ಹಾಡುವ ಭಂಡ. ಆದರೆ ... ತಗ್ಗಿ ಬಾಗಿದ್ದರೆ, ಅಕ್ಷರಕ್ಕೆ ಅಂಟಿಕೊಂಡು ಜಾಗೆ ಮಲಗಿದ್ದರೆ, ಆತ ಸೋಮಾರಿ, ಸಾಯುಕಲ್ಲು ತುಳಿಯುವವ, ... ತಿರಿ ಹೋದ ... ಅಳಿಯ, ... ಒಳಗಣ ಕಪ್ಪೆ . . ಕವಳದಾಸರ 'ಕಸೆಯ ಕೋಲಣ್ಣ'

ಹೀಗೆಯೇ, ಇನ್ನೂ ಅನೇಕ ಹೇಳಬಹುದು. ಒಂದು ಶಾಸ್ತ್ರದ ಆಚಾರ್ಯನಾಗಬಯಸುವ ಧೀರ, ರ, ಂ, ದ, ಧ, ಠ ಮುಂತಾದ ಅಕ್ಷರಗಳನ್ನು ಅದಕವಾಗಿ, ಅಪ್ಪಳಿದಂತೆ, ಕಾಡಿಸಿ ಬರೆಯುವವರು ಬಾಯಿಬಡುಕರು, ವಿಸ್ತರ ದುಸ್ಸಾಹಸದವರು...ಪ ಎಂಬುದರ ಸೀಟನ್ನು ಗೀಟನ್ನು ಬಹು ಉದ್ದವಾಗಿ ಎಳೆಯುವವ ಅಗ್ನಿಭಕ್ಷಕ; ಕೋಪವುಳ್ಳವರು ಗಾಳಿ ಸವಿ; ... ನೋಡದೆ ಹೋಗೆಂಬುವವ; ಘರ್ಜೀವಿ...ಫ ಥ ಮುಂತಾದ ಮಹಾಪ್ರಾಣಗಳ ಕೆಳಗೀಟನ್ನು ಬದಗಳಿಗೆ ತಗುಲದೆ ಎಳೆಪವರು ಸಾಧುಸಂತರ ಸಾಲಿನವರು, ಪರಮ ಕರುಣಾಮೂರ್ತಿಗಳು; ಸಂಸಾರಸ್ಥರಾದರೆ, 'ಹೆಣ್ಣುಪ್ರೆಳ್ಳ' ಎಂಬ ಮಾಲೆಗಂಬಿನವರು . . . . . . ಒಟ್ಟಿನಲ್ಲಿ ಇಂಥ ಊಹಾಪೋಹಗಳಿಗೆ ಶಾಸ್ತ್ರದ ಮುದ್ರೆಯನ್ನು ಒತ್ತಿದರೆ, ನಾಳ್ಯಾರು ಜನ ನಂಬುವವರೂ ಸಿಕ್ಕರೆ, ಕೈಬರಹವನ್ನು ಕೂಡ, ಹಣೆಯ ಬರಹದಂತೆಯೇ ಹಲವಾರು ಜನರಿಂದ ಓದಿಸಿ ಅದರ ಗೂಢಾರ್ಥಗಳನ್ನು ನಾವು ತಿಳಿದುಕೊಳ್ಳಬಹುದಾಗಿದೆ. ನನ್ನ ಈ ಸಲಹೆಗಳ ಮೇರೆಗೆ ವಾಚಕರು ಈ ಶಾಸ್ತ್ರವನ್ನು ನಿರಾಯಾಸವಾಗಿ ಇನ್ನು ದೇವರು ಬುದ್ಧಿ ಕೊಟ್ಟರುಷ್ಟು ಬೆಳೆಸಿಕೊಳ್ಳಬಹುದು. . . . . . ಕನ್ನಡ ಟೈಪ್ ರೈಟರ್ ಬರುವ ಮೊದಲೇ.



ಮೇ ೧೦ ರಿಂದ ೧೬ ರ ವರೆಗೆ

ಮೇಷ

ಎಲ್ಲರ ಪ್ರಕೃತಿ ಉತ್ತಮ. ಆದರೆ ಮಕ್ಕಳಿಂದ ಕೆಲ ಸಂತಾಪಜನ್ಯ ಸಂಗತಿಗಳು ಸಂಭವಿಸುವದರಿಂದ ಅದರ ಒಳ್ಳೆ ಕೆಟ್ಟ ಪರಿಣಾಮಗಳ ಬಗ್ಗೆ ಪತಿ ಪತ್ನಿಯರಲ್ಲಿ ಒಳ್ಳೆ ಮತಭೇದ. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಅನುಕೂಲ. ಆದರೆ ಶತ್ರುವತ್ ತೋರುವ ಅತಿಥಿಯೊಬ್ಬನು ಬರುವದರಿಂದ ಮನಸ್ಸು ಭಯಭೀತ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಮತ್ತು ಲಾಭದಾಯಕ ಪ್ರತಿಷ್ಠೆ ಮತ್ತು ಸ್ವಲ್ಪ ತೊಂದರೆಯಿಂದ ಮತ್ತು ವಿಲಂಬದಿಂದ ಸಂಭವಿಸಿದರೂ ದ್ರವ್ಯಲಾಭವೂ ಅಂದಾಜಿನಷ್ಟು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸಾದಿ ಕೆಲಸ ಒಟ್ಟಿಗೆ ಅನುಕೂಲ. ಅಶ್ವಿನಿಯ ೪ ನೆ ಮತ್ತು ಭರಣಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೦, ೧೧, ೧೨, ೧೩ ಅನುಕೂಲ.

ವೃಷಭ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಆದರೆ ಪ್ರತಿಯೊಂದರಲ್ಲಿಯೂ ಹೆಂಡತಿಯ ಮೇಲೆ ಸವಾರಿ. ಅತ್ಯಂತ ಪ್ರಿಯಕರ ವ್ಯಕ್ತಿಯೊಬ್ಬ ಬರುವಾಗಲೆ ಅಷ್ಟೇ ಅಪ್ರಿಯ ಮತ್ತೊಬ್ಬ ಮನುಷ್ಯನೂ ಬರುವನು. ಇದರಿಂದ ಮನಸಿನಲ್ಲಿ ಬೇಜಾರ. ಸ್ಥಾವರದಲ್ಲಿ ಅನುಕೂಲವಾದ ಕೆಲ ಸಂಗತಿಗಳು ಉದ್ಯೋಗದಲ್ಲಿ ಪ್ರಗತಿ ಉತ್ತಮ ಸ್ವಲ್ಪ ಅವಚಿತ ಲಾಭ. ಆದರೆ ಕೆಲ ಸಂಗತಿಗಳಲ್ಲಿ ನೀವೇ ನಿಮ್ಮ ಪ್ರತಿಷ್ಠೆಯನ್ನು ಕಳೆದುಕೊಳ್ಳುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಆದರೆ ನ್ಯಾಯಕರ್ತರ ಸ್ವತಃದ ಅಭಿಪ್ರಾಯ ನಿಮ್ಮ ಬಗೆಗೆ ಬಹಳ ಕಲುಷಿತ ಮಿತ್ರಸುಖ ಅನುಕೂಲ. ಮಕ್ಕಳಲ್ಲಿ ಉನ್ನತಿ ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಅನುಕೂಲ. ಕೃತ್ತಿಕೆಯ ೪ ನೆ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೦, ೧೧, ೧೨, ೧೩ ಅನುಕೂಲ.


ಮಿಥುನ

ನಿಮ್ಮ ಮತ್ತು ಮಕ್ಕಳ ಪ್ರಕೃತಿಗೆ ಸ್ವಲ್ಪ ಕ್ಲೇಶ. ಆದರೆ ಹೆಂಡತಿಯ ಪ್ರಕೃತಿ ಮತ್ತು ಸುಖ ಅನುಕೂಲ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಬಹಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಬಹಳ ಉತ್ತಮ. ಆದರೆ ವೆಚ್ಚವೂ ವಿಪರೀತ ಕೆಲ ಸಂಗತಿಗಳು ನಿಮ್ಮ ಮಾತಿನಿಂದಲೆ ಕೆಡುವವು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ತೊಂದರೆ ಹೆಚ್ಚು. ಆದರೆ ಕೊನೆಗೆ ಬಹಳ ಅನುಕೂಲತೆ. ಮಿತ್ರಸುಖ ಉತ್ತಮ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಮೃಗಾದ ೪ ನೆ ಮತ್ತು ಆರಿದ್ರಾದ ಮೊದಲನೆ ೩ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೨, ೧೩, ೧೪, ೧೫ ಅನುಕೂಲ.

ಕರ್ಕ

ಎಲ್ಲರ ಪ್ರಕೃತಿ ಉತ್ತಮ. ಆದರೆ ಸ್ತ್ರೀ ಸುಖದಲ್ಲಿ ವಿರಸ. ನೆರೆಯವರಿಂದ ಮತ್ತು ಆಪ್ತರಿಂದ ತೊಂದರೆ ಉಪದ್ರವ ಮತ್ತು ಏನೇನೋ ಬಡಿದಾಟ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಸಾಧಾರಣವೆ. ಆದರೆ ಪ್ರತಿಷ್ಠೆ ಅನುಕೂಲ. ಸ್ತ್ರೀವರ್ಗದಲ್ಲಿ ಅನಾದರ. ಬಂಧುವರ್ಗದವರಲ್ಲಿ ಮತ್ತು ಮಕ್ಕಳಲ್ಲಿ ಕೆಲ ಜನರ ಉನ್ನತಿ ಮಿತ್ರರಲ್ಲಿ ಒಬ್ಬರಿಬ್ಬರು ನಿಮ್ಮ ವಿಷಯದಲ್ಲಿ ತಪ್ಪು ತಿಳುವಳಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ.

—೧೬ ನೆಯ ಪುಟಕ್ಕೆ



[ನಮಗೆ ಬಂದ ಎಲ್ಲ ಪುಸ್ತಕಗಳನ್ನು ಸಾದರದಿಂದ ಸ್ವೀಕರಿಸಿದ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆಮಾಡಲು ಶಕ್ತರಿರುವೆವೆಂದು ಗ್ರಹಿಸ ಕೂಡದಾಗಿ ಈ ಮೂಲಕ ತಿಳಿಸಬಯಸುತ್ತೇವೆ. ಸಂಪಾದಕರು]

ಶಿವ ಮಂಗಳಾ (ಸಂಗೀತ ನಾಟಕ)

ಲೇಖಕರು, ಮತ್ತು ಪ್ರಕಾಶಕರು, ವಿ. ಶ್ರೀನಿವಾಸಯ್ಯಂಗಾರ ಅರಸೀಕೆರೆ ಬೆಂಗಳೂರು ಪುಟಗಳು ೫೦. ಬೆಲೆ ೮ ಆಣೆ

ಇದೊಂದು ಭಕ್ತಿ ಪ್ರಧಾನವಾದ ಚಿಕ್ಕ ಮಕ್ಕಳು ಅಭಿನಯಿಸಲು ಅನುಕೂಲವಾದ ಚಿಕ್ಕ ನಾಟಕ. ಇಲ್ಲಿ ಹಾಡುಗಳು ಸೇರಿವೆ. ಶ್ರೀ ಶ್ರೀನಿವಾಸಯ್ಯನವರು ಅಧ್ಯಾಪಕರು ನಾಟಕದ ಹಾಗೂ ರಂಗಭೂಮಿ ಅರಿತವರು. ಅದ್ದರಿಂದ ದೃಶ್ಯಗಳ ಯೋಜನೆ ಸಮರ್ಪಕವಾಗಿದೆ ... ಮುದ್ರಿತ ಬಲ್ಲವರು. ಮಕ್ಕಳಿಗಾಗಿ ಚಿಕ್ಕ ಚಿಕ್ಕ ನಾಟಕಗಳ ಕೊರತೆ ಕನ್ನಡ ಭಾಷೆಯಲ್ಲಿ ಇದೆ ... ಈ ನಾಟಕ ... ವಾದರೂ ತುಂಬ ... ಧಾರಾಳವಾಗಿ ಹೇಳಬಹುದು. ಈ ಬಗೆಯ ನಾಟಕಗಳು ಇವರಿಂದ ಹೊರಬರಲಿ.

ಹೂಮಾಲೆ (ಕವನ ಸಂಗ್ರಹ)

ಬರೆದವರು ... ಭಟ್ಟ ... ಪ್ರಕಾಶಕರು ... ಸಾಗರ. ಪುಟ ೧೬ ಬೆಲೆ ೮ ಆಣೆ

ಇಲ್ಲಿ ಮುದ್ರಿತವಾದ ಕವನಗಳು ಈ ಮೊದಲು ವಿಶ್ವಕರ್ನಾಟಕದಲ್ಲಿ ಪ್ರಕಟವಾಗಿದ್ದವಂತೆ. ... ಅಭ್ಯಾಸ ಬಲ ... ಕಾವ್ಯ ಪ್ರತಿಭೆ ಇನ್ನಷ್ಟು ಹೆಚ್ಚಬೇಕು.

ಶ್ರೀಶಂಕರ ಜಯಂತಿ ಸಭಾ

(ರಜತಮಹೋತ್ಸವದ ವರದಿ ೧೯೪೭)

... ಶ್ರೀರಂಗ ... ಹೊಸಪೇಟೆ ...

ಅಧ್ಯಾತ್ಮ ಸಂಸ್ಕೃತಿಯ ವೇದಾಂತ ತತ್ವದ ಪ್ರಸರಕ್ಕಾಗಿ ಈ ಸಭೆಯು ... ಬಂದಿದೆ. ಈ ಸಭೆಗೆ ಧನಸಹಾಯ ಮಾಡಿದವರ ಹೆಸರುಗಳಿವೆ ... ವಿದ್ಯಾರ್ಥಿಗಳ ... ಇವೆ. ಈ ಸಭೆಯ ಉದ್ದೇಶ ... ಅಭಿನಂದನಾರ್ಹ.

ಶ್ರೀ ಶರಣ ಗೀತಾ

... ಬಸವಲಿಂಗ ಸ್ವಾಮಿಗಳು ... ಹಳ್ಳಿ ... ಪುಟಗಳು ೩೬ ಬೆಲೆ ೪ ಆಣೆ

ಇದು ... ಶರಣರ ವಚನ ... ಮುದ್ರಣ ... ಪಟ್ಟಿಯು ...

ಸಿಂಹನಾದ, ವರದಂತಿ

ಸಂಪಾದಕರು ಮತ್ತು ಪ್ರಕಾಶಕರು, ಎಸ್. ... ಮುದ್ರಣಾಲಯ ...

... ಇವು ... ಕನ್ನಡ ... ಇದರ ... ಮಾಡುತ್ತೇವೆ.

ಕೌಳವಾಚಾರ ಸಂಗ್ರಹ

ಸಂಗ್ರಹ ಕರ್ತರು ಮತ್ತು ಪ್ರಕಾಶಕರು, ಶ್ರೀ. ... ಶ್ರೀನಿವಾಸಾಚಾರ್ಯ, ಧರ್ಮಶಾಸ್ತ್ರ ... ಶ್ರೀ ಕೃಷ್ಣಾಪುರ ಮಠ, ಉಡುಪಿ. ಪ. ಕನ್ನಡ. ಪುಟಗಳು ೯೯. ಬೆಲೆ ೧ರೂ.

ಅಷ್ಟಮಠದ ಶಿಷ್ಯರಾದ ಕೌಳದೇಶದ ಬ್ರಾಹ್ಮಣರು ದೇಶಾಂತರಕ್ಕೆ ಹೋಗಿ ನೆಲಸಿದಾಗ ಪ್ರಸಾದಿ ಧಾರ್ಮಿಕ ಆಚರಣೆ ಸಂಪ್ರದಾಯಗಳನ್ನರಿಯದೆ ಸಂದಿಗ್ಧರಾದಾಗ ಅಂತಹರಿಗೆ ಅನುಕೂಲವಾಗಲೆಂದು ಉಪಾಕರ್ಮ, ಗ್ರಹಣ ಶ್ರಾದ್ಧ ವಿಚಾರ, ಅಧಿಕಮಾಸದಲ್ಲಿ ವಿವಾಹ ಇವೇ ಮೊದಲಾದ ೧೪ ಧಾರ್ಮಿಕ ಕಲಮುಗಳ ಬಗ್ಗೆ ವಿವರಣೆಯನ್ನೂ ನಿರ್ಣಯವನ್ನೂ ಕೊಡಲಾಗಿದೆ. ಈ ಮತಾನುಯಾಯಿಗಳಿಗೆ ಇದು ಅತ್ಯುಪಯುಕ್ತ ಕೈಪಿಡಿಯಾಗಿದೆ. ಅವಶ್ಯ ಸಂಗ್ರಹಿಸಬೇಕು. ಉತ್ತಮ ಕಾಗದ, ಉತ್ತಮ ಮುದ್ರಣ. ಇದಕ್ಕೆ ಬೆಲೆ ತೆಗೆದುಕೊಳ್ಳದೆ ಉಚಿತ ವಿತರಣ ವಿಟ್ಟುಕೊಂಡುದು ತುಂಬ ಅಭಿನಂದನೀಯ.

ಕರ್ನಾಟಕ ಸೇವಾ ಸಂಘ (ಮದ್ರಾಸ)

ಇದು ಈ ಸಂಘದ ದ್ವಿತೀಯ ವಾರ್ಷಿಕ ವರದಿ ೧೯೪೬-೪೭ ರಲ್ಲಾದ ಕೆಲಸ ಕೊಡಿದ ಚಂದಾ ಹಣ ಸಹಾಯ ಸಲ್ಲಿಸಿದವರ ಹೆಸರುಗಳು ಇವನ್ನೆಲ್ಲ ಕಾಣಬಹುದು. ಮದರಾಸದಲ್ಲಿ ಈ ಸಂಘವು ಉಪಯುಕ್ತ ಕಾರ್ಯದಲ್ಲಿ ತೊಡಗಿದ್ದು ಸಕಲರ ಸಹಾಯ ಸಹಾನುಭೂತಿಗಳಿಗೆ ಇದು ಅರ್ಹವಾಗಿ.

ಧರ್ಮಬೋಧ (ಮಾಸಪತ್ರಿಕೆ)

ಸಂಪಾದಕರು, ಬಿ. ಶ್ರೀನಿವಾಸ ಭಟ್ಟ, ಶಿರೋಮಣಿ, ಸಾಹಿತ್ಯ ಪ್ರಧಾನಾಧ್ಯಾಪಕ, ಸಂಸ್ಕೃತ ಕಾಲೇಜ, ಉಡುಪಿ ಪ್ರಕಾಶಕರು, ಕಾಬು ಸಿದ್ದಾಯ ಪುರಾಣಿಕ, ಶಿರೋಮಣಿ, ವೇದಾಂತಾಧ್ಯಾಪಕ, ಸಂಸ್ಕೃತ ಕಾಲೇಜ, ಉಡುಪಿ ಪುಟಗಳು ೩೪. ವಾರ್ಷಿಕ ಚಂದಾ ೩ ರೂ ಬಿಡಿಸಂಚಿಕೆ ೪ ಆಣೆ.

ಧರ್ಮ ಸಂಸ್ಕೃತಿಗಳ ರಕ್ಷಣೆಗಾಗಿ ನಡೆಸಲ್ಪಡುವ ಮಾಸಪತ್ರಿಕೆಯಿದು. ಕೈಯಲ್ಲಿರುವ ೧ನೇ ಸಂಪುಟದ ೧ನೇ ಸಂಚಿಕೆಯಲ್ಲಿ ಧರ್ಮದ ವಿಷಯವನ್ನು ವಿವಿಧ ದೃಷ್ಟಿಕೋನದಿಂದ ಚರ್ಚಿಸಿದ ೭ ಲೇಖನಗಳಿವೆ ಮುದ್ರಣವೂ ಅಕ್ಷರಗಳ ಜೋಡಣೆಯೂ ಆಕರ್ಷಕವಾಗಿದ್ದು ಇಟ್ಟ ಬೆಲೆ ಬಹಳ ಹಗುರವಾಗಿದೆ. ಈ ಹೊಸ ಮಾಸಪತ್ರಿಕೆಯನ್ನು ತುಂಬ ಆದರದಿಂದ ಬರಮಾಡಿಕೊಳ್ಳುತ್ತೇವೆ.

ಭವಿಷ್ಯವಾಣಿ (ತ್ರೈಮಾಸಿಕ)

ಸಂಪಾದಕರು ಮತ್ತು ಪ್ರಕಾಶಕರು, ಜ್ಯೋತಿಷ್ಯರತ್ನ ಬ್ರ. ಶ್ರೀ. ಸಿದ್ಧಾಂತಿ ರ. ದಾ. ರಾಷ್ಟ್ರ ಶಾಸ್ತ್ರಿಗಳು, ಸಾಕೀನ ಮಹಾಗಾಂವ, ಜಿಲ್ಲಾ ಗುಲ್ಬರ್ಗಾ. ಪುಟ ೪೦ ವಾರ್ಷಿಕ ಚಂದಾ ೫ ರೂ. ಬಿಡಿ ೧೪ ರೂ.

ಇದು ಜ್ಯೋತಿಷ್ಯಕ್ಕೆ ಸಂಬಂಧಪಟ್ಟ ಹೊಸ ತ್ರೈಮಾಸಿಕದ ೧ ನೇ ವರ್ಷದ ೧ ನೇ ಸಂಚಿಕೆ. ಇದರಲ್ಲಿ ಅಡಕವಾದ ವಿಷಯ ಬಳಸಿದ ಕಾಗದ ಮತ್ತು ಪುಟ ಸಂಖ್ಯೆಗಳ ದೃಷ್ಟಿಯಿಂದ ಇದಕ್ಕಿಟ್ಟ ಚಂದಾ ಹಣವೂ ಬಿಡಿ ಸಂಚಿಕೆಯ ಬೆಲೆಯೂ ಬಹಳ ಭಾರವಾಗಿದೆಯೆಂದು ಹೇಳದಿರಲಾರೆವು.

Our Heritage

ಬರೆದವರು ಶ್ರೀಪಾದ ದಾಮೋದರ ಸಾತವಳೇಕರರು, ಪ್ರಕಾಶಕರು ಹಿಂದ್ ಕಿತಾಬ್ಸ್ ಲಿಮಿಟೆಡ್, ಮುಂಬಯಿ ಪುಟಗಳು ೨೦೭, ಬೆಲೆ ೬॥ ರೂ

ವೇದಿಕಸಾಹಿತ್ಯದ ಒಂದು ಸಂಶೋಧನಾತ್ಮಕ ಗ್ರಂಥ, ಇದರಲ್ಲಿ ಶ್ರೀ ಶರ್ಮರು ನಮ್ಮ ಸ್ವಾಭಾವಿಕ ಪರಂಪರೆ, ಸಂಸ್ಕೃತಿಗಳ ಸಂಗಮ, ಪಶುಪತಿಗಳ ದಾರಿಯಲ್ಲಿ, ಸತ್ಯ ಸೌಂದರ್ಯ-ಸೌಜನ್ಯ, ಸಮಾಜದ ಮೂಲಸ್ತಂಭಗಳು, ಪ್ರಜಾಸತ್ತೆಯ ಮೂಲರೂಪಗಳು ಒಳ ಹೊರನಾಡುಗಳಲ್ಲಿ ಮಹತ್ವದ ಸ್ಮಾರಕಗಳು, ಭೌತಿಕ ಮತ್ತು ಅಧ್ಯಾತ್ಮ ಶಾಸ್ತ್ರಗಳು, ಹಿಮೋಗ್ನವೋ ಮುಮೋಗ್ನವೋ, ಮೋಹಿನಿ ಕೆಯತ್ತ ಎಂಬ ವಿಷಯಗಳನ್ನು ೧೧ ಅಧ್ಯಾಯಗಳಲ್ಲಿ ವಿವೇಚಿಸಿದ್ದಾರೆ. ತಮ್ಮ ವಿವೇಚನೆಯನ್ನು ನಿದರ್ಶಿಸಲು ಅಗತ್ಯವಿದ್ದಲ್ಲಿ ಚಿತ್ರಗಳನ್ನು ಗ್ರಂಥಕರ್ತರು ಕೊಟ್ಟಿದ್ದಾರೆ. ಚಿತ್ರಗಳಲ್ಲಿ ಬ್ರಹ್ಮ, ಬಾಲಕೃಷ್ಣ, ಬುದ್ಧ, ಮುಂತಾದವು ಬಲು ಸೊಗಸಾಗಿವೆ.

ಪುಸ್ತಕದ ಮುಖಪುಟಲೆಯಲ್ಲಿ ಬರೆದಂತೆ ಈ ಪುಸ್ತಕವು ಭಾರತೀಯ ಜೀವನದ ಅಸ್ಥಿ, ಮಾಂಸ ಮೇಧೋಭಾಗಗಳನ್ನು ವಿವರವಾಗಿ ವಿಶದಪಡಿಸಿ ಹಿಂದೀ ನಾಗರಿಕತೆಯ ಲಕ್ಷಣವನ್ನು ಕೈಯೆತ್ತಿ ತೋರಿಸುತ್ತದೆ. ಇಂಥ ಉಪಯುಕ್ತ ಗ್ರಂಥವನ್ನು ಬರೆದು ಹಿಂದೀಯರ ಸ್ವಸಂಸ್ಕೃತಿ ಜ್ಞಾನವನ್ನು ಬಡಿದೆಬ್ಬಿಸಲು ಯತ್ನಿಸಿದ ಗ್ರಂಥಕರ್ತರು ಸರ್ವಥಾ ಅಭಿನಂದನಾರ್ಹರೇ ಸರಿ.

The First year of Indepndence

Published by Radical Democratic Party, 30, Faiz Bazar, Delhi. Pages 14. Price 4 Ans.

ಪಕ್ಷದ ದೃಷ್ಟಿಕೋನದಿಂದ ಬರೆಯಲಾಗಿದೆ.

ವಾರದ ಭವಿಷ್ಯ

(೧೫ನೇ ಪುಟದಿಂದ)

ಪುಷ್ಯದ ೪ ನೇ ಮತ್ತು ಆಶ್ಲೇಷಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೦, ೧೧, ೧೪, ೧೫ ಅನುಕೂಲ.

ಸಿಂಹ

ನಿಮ್ಮ ಮತ್ತು ಮಕ್ಕಳ ಪ್ರಕೃತಿ ಹೆಂಡತಿಯ ಪ್ರಕೃತಿಗಿಂತ ಅನುಕೂಲ. ಆದರೆ ಪ್ರತಿಯೊಂದರಲ್ಲಿ ಅವಳ ಅಧಿಕಾರವೇ ಹೆಚ್ಚು ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಆದರೆ ಹೆಂಡತಿಗೂ ಮಕ್ಕಳ ವಿರೋಧ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ ಆದರೆ ನಿಮ್ಮ ಮಹತ್ವ ಉಳಿಸುವದಕ್ಕಾಗಿ ಕೆಲ ಕೆಲಸಗಳಲ್ಲಿ ತಿಳಿದೆಯೆ ಹೆಚ್ಚು ವೆಚ್ಚ ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯಪಕ್ಷಗಳಲ್ಲಿ ಸಮಾನ ಸ್ಥಿತಿ. ವಾಹನ ಸುಖ ಉತ್ತಮ. ಕೆಲ ಸಂಗತಿಗಳು ಸೂಚಕ. ದೈಹಿಕಶ್ರಮಕ್ಕಿಂತ ಪ್ರವಾಸಾದಿ ಕೆಲಸ ಹಿತಪ್ರ. ಮಘಾದ ೪ ನೇ ಮತ್ತು ಪೂರ್ವಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೦, ೧೧, ೧೩, ೧೪ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ ಆದರೂ ನಿಮ್ಮ ನಿಮ್ಮಲ್ಲಿ ಮಕ್ಕಳ ಕಡಿಮೆ. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಕಿಟಿಕಿಟಿ ವಿಪರೀತ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಲಾಭವೂ ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಇಲ್ಲವೆ ಅನುಕೂಲತೆಯಷ್ಟೆ ತೊಂದರೆ ಮತ್ತು ವೆಚ್ಚ. ಮಿತ್ರಸುಖ ಅನುಕೂಲ. ಆದರೂ ಶತ್ರುಗಳು ನಿಮ್ಮ ಸತ್ವ ಹರಣ ಮಾಡುವ ಪ್ರಯತ್ನ ವಿಪರೀತ. ಪ್ರವಾಸಾದಿ ಕೆಲಸ ಅನುಕೂಲ. ಉತ್ತರಾದ ೪ ನೆ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೦ ೧೧, ೧೩, ೧೪ ಅನುಕೂಲ.

ತುಲಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣವೆ. ಆದರೆ ಅಪತ್ಯಸುಖ ಅನುಕೂಲವಾಗುವ ಯೋಗ. ಸ್ಥಾವರ ಜಂಗಮದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಕಡಿಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಮಹತ್ವದ ಕೆಲಸಗಳಲ್ಲಿ ಮಿತ್ರರ ಮತ್ತು ಬಂಧುವರ್ಗದವರ ಸಹಾಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಚಿತ್ತಾದ ೪ ನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೩, ೧೪, ೧೫, ೧೬ ಅನುಕೂಲ.

ವೃಶ್ಚಿಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಹೆಚ್ಚು. ಪ್ರತಿಷ್ಠೆ ಉತ್ತಮ. ಮತ್ತು ಲಾಭ ತುಂಬ. ಆದರೆ ನೋಕರರಿಗೆ ಹೆಚ್ಚು ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯಪಕ್ಷಗಳಲ್ಲಿ ಸಮಾನಸ್ಥಿತಿ ಪ್ರವಾಸಾದಿ ಕೆಲಸ ಮನಸ್ಸಿನಂತೆ.

ಅನುರಾಧಾದ ೪ ನೆ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೧೦, ೧೪, ೧೫, ೧೬ ಅನುಕೂಲ.

ಧನು

ಪ್ರಕೃತಿ ಉತ್ತಮ. ಆದರೆ ಸ್ತ್ರೀಸುಖ ಕಡಿಮೆ ಮತ್ತು ಮಕ್ಕಳಿಂದ ಬಹಳ ವಿರೋಧ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸಮಾಧಾನ ಹೆಚ್ಚು. ಉದ್ಯೋಗದಲ್ಲಿ ಉತ್ತಮ ಪ್ರಗತಿ. ಮತ್ತು ತುಂಬಾ ಲಾಭ ಆದರೆ ಧಂದೆಯವರಿಗಿಂತ ನೋಕರವರ್ಗದವರಿಗೆ ಪ್ರತಿಷ್ಠೆಯಲ್ಲಿ ಹೆಚ್ಚಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಗಳ ಜೋರು ಹೆಚ್ಚು. ಮಿತ್ರ ವೃತ್ತಿಯ ಸಹವಾಸ. ಕೆಲವೊಂದು ಅಪೂರ್ವ ಧರ್ಮ ಕೃತ್ಯಗಳು. ಭೆಟ್ಟಿ ಮತ್ತು ಪತ್ರವ್ಯವಹಾರಕ್ಕಿಂತ ಪ್ರವಾಸ ಅನುಕೂಲ. ಮೂಲಾದ ೪ ನೆ ಮತ್ತು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೩, ೧೪, ೧೬ ಅನುಕೂಲ.

ಮಕರ

ಪ್ರಕೃತಿ ಸಾಧಾರಣವೆ. ಸ್ತ್ರೀಸುಖ ಅನುಕೂಲ ಆದರೆ ಮಕ್ಕಳಿಂದ ಪ್ರತಿಯೊಂದು ಕೆಲಸದಲ್ಲಿ ವಿರೋಧ ಮತ್ತು ಅಡ್ಡಿ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಮಾನ್ಯ ಅನುಕೂಲ ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಬಹಳ ಉತ್ತಮ. ಆದರೆ ಧಂದೆಯವರಿಗಿಂತ ನೋಕರವರ್ಗದವರ ಪ್ರತಿಷ್ಠೆ ವಿಶೇಷ ಅನುಕೂಲ. ಮಿತ್ರರಲ್ಲಿ ಒಬ್ಬರದು ಒಳ್ಳೆ ಉನ್ನತಿ. ಆದರೆ ಮತ್ತೊಬ್ಬನಿಗೆ ವಿಪರೀತ ಕ್ಲೇಶ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಗಳದೇ ಹೆಚ್ಚು ಜೋರು. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಉತ್ತರಾಷಾಢಾದ ೪ ನೇ ಮತ್ತು ಶ್ರವಣಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ ೧೦, ೧೧, ೧೪, ೧೫ ಅನುಕೂಲ.

ಕುಂಭ

ಪ್ರಕೃತಿ ಅನುಕೂಲ. ಪ್ರಾಪಂಚಿಕ ಬಹುತರ ವಿಷಯಗಳಲ್ಲಿ ಅನುಕೂಲ. ಆದರೆ ಹೆಂಡತಿ ಕ್ಷುಲ್ಲಕ ಕಾರಣಗಳಿಗಾಗಿ ಬಹಳ ವಿರೋಧ ಮಾಡುವದು. ಬಂಧುವರ್ಗದವರಲ್ಲಿ ಒಬ್ಬರು ಒಳ್ಳೆಕೆಲಸ ಮಾಡಿದರೆ ಮತ್ತೊಬ್ಬರು ಕೆಟ್ಟ ಕೆಲಸ ಮಾಡುವರು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರಸುಖ ಬಹಳ ಉತ್ತಮ. ಪ್ರವಾಸಾದಿ ಕೆಲಸ ಮನಸ್ಸಿನಂತೆ. ಧನಿಷ್ಠೆಯ ೪ ನೆ ಮತ್ತು ಶತತಾರಿಕೆಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೩, ೧೪, ೧೬ ಅನುಕೂಲ.

ಮೀನ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಆದರೆ ಕೆಲ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಇದ್ದುದೇ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಅಧಿಕಾರ ಇಲ್ಲವೆ ಪ್ರಭುತ್ವದಲ್ಲಿ ಹೆಚ್ಚಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಮಿತ್ರರಿಂದ ಕೆಲ ಹುಟ್ಟಿಗೆ ತಪ್ಪು ಕೆಲಸವಾಗುವ ಸಂಭವ ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾಭಾದ್ರಪದದ ೪ ನೇ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೧೦, ೧೧, ೧೪, ೧೫ ಅನುಕೂಲ.

ಈ ಪತ್ರಿಕೆಯು ... ಕಂಪನಿ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿಸಿ ಪ್ರಕಟವಾಯಿತು.